ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ



ಇಂಡೋನೇಶಿಯದಲ್ಲಿ

ಸಾಮ್ರಾಜ್ಯವಾದಿಗಳ ಕುತಂತ್ರ

ಮನೆಮನೆಯಲ್ಲಿಯೂ ಗಾಣ

KARMAVEER

ಚಿಕ್ಕಕತೆ -*- ಪ್ರತಿಭೆ -*-

ಬರೆದವರು :— ಶ್ರೀ ಬಿ. ಎಚ್. ಶ್ರೀಧರ, ಎಂ. ಎ.

"ಪ್ರತಿಭಾ, ಪ್ರತಿಭಾ, ಓ ನನ್ನ ಪ್ರತಿಭೇ!" ಎಂದು ಕಮಲೇಶನು ಕರೆಯುತ್ತಲೇ "ಓ, ಬಂದೆ ನನ್ನ ನಲ್ಲಾ!" ಎನ್ನುತ್ತ ಪ್ರತಿಭೆ ಓಡಿ ಬಂದಳು. ಕಮಲೇಶನು ಆಗತಾನೆ ಆಫೀಸಿನಿಂದ ದಣಿದು ಬಂದಿದ್ದನು. ಪ್ರಸನ್ನವದನೆಯಾದ ಸತೀರತ್ನವನ್ನು ಎಷ್ಟು ಹೊತ್ತಿಗೆ ನೋಡುವೆನೋ? ಎಂದು ಧ್ಯಾನಿಸುತ್ತಲೇ ಬಂದಿದ್ದನು. ಮನೆಗೆ ಬಂದೊಡನೆಯೇ ಮುದ್ದಿನ ಮಡದಿಯ ಮುಖಾರವಿಂದವನ್ನು ನೋಡಿ ಸ್ವಲ್ಪ ತಣಿದನು. ಸ್ನಾನ ಊಟಗಳು ನಿತ್ಯದಂತೆ ಸಾಧಾರಣ ವ್ಯವಸ್ಥೆಯಂತೆ ನಡೆದವು. ಸ್ವಲ್ಪ ವಿರಮಿಸಲು ಇಬ್ಬರೂ ದಿಂಬಿಗೊರಗಿ ಕುಳಿತರು.

"ಪ್ರತಿಭೇ, ನೀನು ನನ್ನನ್ನು ಮದುವೆಯಾಗುವ ಮೊದಲು ಎಂಥ ಗಂಡ ಬೇಕೆಂಬ ಆಸೆ ನಿನಗಿತ್ತು?" ಕಮಲೇಶ ಕೇಳಿದ. ಪ್ರತಿಭೆ ನಾಚಿಕೆಯಿಂದ ತಲೆತಗ್ಗಿಸಿ ಮೌನವನ್ನವಲಂಬಿಸಿದಳು. ಮೂರು ಮೂರು ಸಲ ಪ್ರಶ್ನಿಸಿದ ಬಳಿಕ ಸ್ವಲ್ಪ ತಲೆಯೆತ್ತಿ—

"ನನ್ನವನಿಗೆ ರೂಪ ಸಾಧಾರಣವಿದ್ದರೆ ಸಾಕು; ಅವನು ಚೆನ್ನಾಗಿ ಓದಿದವನಿರಬೇಕು ಎಂಬ ಆಸೆಯಿತ್ತು. ಆ ಆಸೆ ಈಗ ಪೂರ್ತಿಯಾಗಿದೆ. ಅದರಿಂದಲೇ ನಾನು ಇಷ್ಟು ಸಂತೋಷದಲ್ಲಿದ್ದೇನೆ. ಅದರಿಂದಲೇ ನೀನು ನನಗೆ ಹೇಗಿದ್ದರೂ ಚೆಂದವಾಗಿ ತೋರುವೆ. ಏನೂ ತಿಳಿಯದ ನನ್ನನ್ನು ಉದಾರಾಂತಃಕರಣದಿಂದ ಗೆಳತಿಯೆಂದು ನಡೆಸಿಕೊಂಡು ಬಂದ ನಿನ್ನನ್ನು ಎಷ್ಟು ಕೊಂಡಾಡಿದರೂ ಸಾಲದೆನ್ನಿಸುತ್ತದೆ"—ಎಂದಳು.

ಕಮಲೇಶನು ಬಡ ನೌಕರನು. ಆದರೆ, ಅತ್ಯಂತ ಸರಳ ಹೃದಯದ, ಉದಾರ ನೀತಿಯ ಸಾಧಾರಣ ರೂಪಿನ, ಪ್ರೇಮಲ ಸ್ವಭಾವದ, ರಸಿಕತನವುಳ್ಳ ವಿದ್ಯಾವಂತ ತರುಣನಾಗಿದ್ದನು. ಆದೇ ಆಗ ಅವನು ಪ್ರತಿಭೆಯೊಡನೆ ಹೊಸ ಸಂಸಾರ ಹೂಡಿದ್ದನು. ೨-೩ ವರ್ಷಗಳಿಂದ ಎಷ್ಟೋ ಹುಡುಗಿಯರನ್ನು ಸಂದರ್ಶಿಸಿದರೂ ಅವರಲ್ಲಿ ಸಂಸ್ಕೃತಿಯು ಅಂತ ಸಾಕಷ್ಟಿಲ್ಲವೆಂಬ ಕಾರಣದಿಂದ ಅವನು ಮದುವೆಯಾಗುವುದಿಲ್ಲವೆನ್ನುತ್ತಿದ್ದನು. ಆದರೆ ಕಡೆಗೆ ತನ್ನ ಕುಟುಂಬಕ್ಕೆ ಸಂಬಂಧಿಸಿದವಳೆಂಬ ಕಾರಣದಿಂದ ಅವಳಲ್ಲಿ ವಿದ್ಯೆ ಸಾಕಷ್ಟಿಲ್ಲವಾದರೂ ಸುಪ್ತಸಂಸ್ಕಾರ ಸಾಕಷ್ಟಿರಬಹುದೆಂದು ನಂಬಿ ಹುಡುಗಿಯನ್ನು ನೋಡದೆಯೇ ಅವಳನ್ನು ಮದುವೆಯಾಗಲೊಪ್ಪಿದನು. ಅದೇರೀತಿ ಮದುವೆಯೂ ಆಯಿತು. ಹೆಂಡತಿಯ ಪ್ರಸನ್ನತೆ ಮತ್ತು ಉತ್ಸಾಹಪೂರ್ಣ ಮುಖಮಂಡಲದಿಂದ ಕಮಲೇಶನು ತೃಪ್ತನಾದನು.

೧೪ ವರ್ಷಗಳು ಕಳೆದವು. ಪ್ರತಿಭೆ ಮನೆಗೆ ಬಂದಳು. ಎಳೆಯ ಹುಡುಗಿ, ಕೆಲಸ ಕಾರ್ಯ ಬರದಿದ್ದರೆ ಕ್ಷಮ್ಯ ಎಂದು ಮಡದಿಯನ್ನು ಮಮತೆಯಿಂದಲೇ ಕಾಣುತ್ತ ಬಂದ ಕಮಲೇಶ. ತಿಂಗಳುಗಳು ದಾಟಿದವು. ಪ್ರತಿಭೆಯ ಪ್ರಸನ್ನತೆ ಕಡಿಮೆಯಾಗದಿದ್ದರೂ ಅವಳ ಶಾರೀರಿಕ ದಾರ್ಢ್ಯದೊಡನೆ ಮಾನಸಿಕ ದಾರ್ಢ್ಯವೂ ತಲೆದೋರಿ ದಿನೇ ದಿನೇ ನಿರುತ್ಸಾಹವನ್ನು ತೋರತೊಡಗಿದಳು. ಇದನ್ನು ನೋಡಿ ಕಮಲೇಶನಿಗೆ ಬಹಳ ದುಃಖವಾಯಿತು. ಧಾರಣೆ ಏರಿದ ಕಾಲವಾದುದರಿಂದ ಇದ್ದ ಸಂಬಳದಿಂದ ಹೊಸ ಹೆಂಡತಿಗೆ ಬೇಕೆನಿಸುವ ಪ್ರಿಯ ವಸ್ತುಗಳನ್ನು ತಂದುಕೊಡಲಾಗದುದೇ ಅವಳ ನಿರುತ್ಸಾಹಕ್ಕೆ ಕಾರಣವಿರಬಹುದೋ? ಎಂದು ಒಮ್ಮೊಮ್ಮೆ ತರ್ಕಿಸುತ್ತಿದ್ದನು. ಅಥವಾ ತಾನೂ ಅವಳೂ ಮಾತಾಡಲು ಕುಳಿತಾಗ ತನ್ನ ಮಾತೇ ಹೆಚ್ಚಾಗಿ ಅವಳಿಗದು ಅರ್ಥವಾಗದಾಗಿ ಅರುಚಿ ಹುಟ್ಟಿ ಅವಳು ಹಾಗೆ ಮಂಕಾಗಿ ಹೋದಳೇ? ಎಂದೂ ಶಂಕಿಸಿದನು. ಇದೇ ಕೊರಗಿನಲ್ಲಿ ಅವನು ತಿಂಗಳುಗಟ್ಟಲೆ ದಣಿದನು. ಅಷ್ಟರಲ್ಲಿ ಅವಳು ಬಸಿರಿಯೆಂಬುದೂ ಗೊತ್ತಾಯಿತು. ಅಮೇಲಿನ ಆಲಸ್ಯಕ್ಕೆ ಬಸಿರು ಕಾರಣವಿರಬಹುದೆಂದುಕೊಂಡರೂ ಎಂದಿನಿಂದಲೂ ಆ ಬಗ್ಗೆ ಕಮಲೇಶನಿಗೆ ಒದಿಗಿದ ಮನೋರೋಗ ವಾಸಿಯಾಗಲಿಲ್ಲ. ಆದರಿಂದಲೇ ಒಮ್ಮೆ ಮೇಲಿನಂತೆ ಅವಳನ್ನು ಅವನು ಪ್ರಶ್ನಿಸಿದ್ದು.

೩ ತಿಂಗಳು ತುಂಬುವಷ್ಟರಲ್ಲಿ ಪ್ರತಿಭೆಯ ತಂದೆ ಬಂದು ಅವಳನ್ನು ತಮ್ಮ ಮನೆಗೆ ಕರೆದೊಯ್ದನು. ವಿರಹದಿಂದ ಬಳಲಿದ ಪ್ರತಿಭೆ ಒಂದೇ ತಿಂಗಳಲ್ಲಿ ಗಂಡನಿಗೆ ಕಾಗದ ಬರೆದು ಅವನನ್ನು ಬರಮಾಡಿಕೊಂಡಳು. ಅಗಲೂ ಅದೇ ಪಾಠ. ಅವಳು ಮೌನಿ, ಇವನು ವಾಚಾಳಿ. ಮತ್ತೆ ಮೇಲಿನ ಪ್ರಶ್ನೆಯೇ ರೂಪಾಂತರದಿಂದ ಪ್ರತಿಭೆಗೆ ಎದುರಾಯಿತು.

"ಪ್ರತಿಭೇ, ನೀನು ಪುಸ್ತಕ ಪತ್ರಿಕೆಗಳನ್ನು ಓದುತ್ತಿರುವೆಯಾ?"

"ಯಾವಾಗಲಾದರೂ ಓದುತ್ತಿರುತ್ತೇನೆ, ಪುರುಸೊತ್ತು ಆದಾಗ"— ಎಂದಳು ಸ್ವಲ್ಪ ಉದಾಸೀನವಾಗಿ.

"ನೀನು ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದವಳೆಂದೂ ಮೆಟ್ರಿಕ್ ಮುಗಿಸಿದ ಹೊರತೂ ಗಂಡನ ಮನೆಗೆ ಹೋಗುವದಿಲ್ಲವೆಂದು ಹೇಳಿದೆಯೆಂದೂ ನಾನು ಬಹಳ ಸಂತೋಷಪಟ್ಟಿದ್ದೆ. ನೀನು ಬೇಗ ಬರಬೇಕೆಂಬ ಆಸೆ ಎಷ್ಟೇ ಇದ್ದರೂ ನಿನ್ನ ಓದು ಪೂರೈಸಲಿ ಎಂದು ಅದನ್ನೆಲ್ಲ ಅದುಮಿ ಹಿಡಿದಿದ್ದೆ. ಕಡೆಗೆ ನೀನೇ ಬಂದೆ ನಿನ್ನ ಇಚ್ಛೆಯಂತೆ, ಆಗಲಿ ಎಂದೆ; ಇಲ್ಲಿ ನೋಡಿದರೆ ನಿನ್ನ ಓದಿನ ಆಸೆಯ ಕುರುಹೇ ಕಾಣುವುದಿಲ್ಲ. ನಾನು ಹೇಳಿದರೆ ಹೂಂ ಎಂದು ಅನಂತರ ಮರೆತು ಬಿಡುವುದೊಂದನ್ನು ಬಲ್ಲೆ ಎಂದು ತಿಳಿಯಿತು. ಹೀಗೇಕಾಯಿತು? ಹೇಳೇ, ನನ್ನ ಮುದ್ದು! ಕಲಿತವನನ್ನು ಅಪೇಕ್ಷಿಸಿದ ನೀನು ಕಲಿತವನು ಎಂತಹ ಹೆಂಡತಿಯನ್ನು ಅಪೇಕ್ಷಿಸಬಹುದು, ಎಂಬುದನ್ನು ಒಂದು ಗಳಿಗೆಯಾದರೂ ಆಲೋಚಿಸಲಿಲ್ಲವೇಕೆ? ನಿನ್ನ ಅಪೇಕ್ಷೆಯಂತೆ ಕಲಿತವನಿರುವುದರಿಂದ ನಾನು ನಿನ್ನ ಪ್ರೇಮಕ್ಕೆ ಪಾತ್ರನಾದೆ. ನನ್ನ ಅಪೇಕ್ಷೆಯಂತೆ ನೀನು ಕಲಿತವನ ಕೃತಿಗಳನ್ನು ಮೆಚ್ಚುವಷ್ಟಾದರೂ ಶಕ್ತಿ ಸಂಪನ್ನಳಾಗಿರಬೇಡವೇ? ನೀನು ಒಳ್ಳೊಳ್ಳೆಯ ಸೀರೆ ಕುಪ್ಪಸಗಳನ್ನು ತೊಟ್ಟು ನಿಂತಾಗ ನಾನು ಆ ನಿನ್ನ ಶೃಂಗಾರವನ್ನು ಮೆಚ್ಚದಿದ್ದರೆ ನಿನಗೆ ಎಂಥ ನಿರಾಶೆಯಾಗಬಹುದು? ಹಾಗೆಯೇ, ಶ್ರಮಪಟ್ಟು ಸಾಹಿತ್ಯವನ್ನು ರಚಿಸಿಕೊಂಡು ಬಂದು ನಿನ್ನ ಮುಂದಿಟ್ಟಾಗ ನೀನು ಮೆಚ್ಚದಿದ್ದರೆ ನನಗೆಷ್ಟು ನಿರಾಶೆಯಾಗಬೇಡ?"

ಈ ಮಾತನ್ನು ಕೇಳುತ್ತಿದ್ದಾಗ ಪ್ರತಿಭೆಯ ಕಣ್ಣುಗಳಲ್ಲಿ ದಳದಳ ನೀರು ಹರಿಯುತ್ತಿತ್ತು. ಧಾರಾಕಾರವಾಗಿ ಹರಿಯುತ್ತಿದ್ದ ಕಣ್ಣೀರನ್ನು ಕಮಲೇಶನು ಒರಸಿದನು; ಮುತ್ತಿಟ್ಟು ಸಂತೈಸಿದನು. ಚಿಕ್ಕಂದಿನಲ್ಲಿ ಸಿಂಗರಿಸಿಕೊಂಡು ಆಡ್ಡಾಡುತ್ತಿದ್ದಾಗ ತನ್ನನ್ನು ಕಾಂಬ ಹುಡುಗರನ್ನು ನೀಚರೆಂದುಕೊಳ್ಳುತ್ತಿದ್ದ ಪ್ರತಿಭೆ ಮದುವೆಯಾದ ಮೇಲೆ ತನ್ನ ಸಿಂಗಾರವನ್ನು ಗಂಡನು ಮೆಚ್ಚಬೇಕೆಂಬ ಅತ್ಯಾಶೆ ತಾಳಿದಳು. ಗಂಡನೂ ಅವಳ ಆ ಆಶೆಯನ್ನು ಪೂರಯಿಸಿದನು. ಅವಳ ಶೃಂಗಾರವನ್ನು ಮನವಾರೆ ಹೊಗಳಿ ಮೆಚ್ಚಿದನು. ಆದರೆ ಅವನು ಮತ್ತೂ ಏನೋ ಬೇಕೆಂದು ಬಯಸಿದ್ದು ಅವಳ ಕೈಮೀರಿದ್ದಾಯಿತು. ಗಂಡನು ಮನೆಗೆ ಮರಳಿದ ನಂತರ ನಿತ್ಯವೂ ಪ್ರತಿಭೆಗೆ ಇದೇ ಚಿಂತೆ. ಗಂಡನು ಸಿಂಗರಿಸಿಕೊಂಡು ತನ್ನನ್ನು ತಣಿಸಬೇಕೆಂಬ ಆಸೆ ಅವಳಿಗಿಲ್ಲ. ಅವನು ಮಾತಾಡುತ್ತ ತನ್ನೆದುರು ಕುಳಿತು ತನ್ನ ಅಂಗಸೌಂದರ್ಯ ಅಲಂಕಾರ ಸೌಂದರ್ಯಗಳನ್ನು ಮೆಚ್ಚುತ್ತಿದ್ದರೆ ತಾನು ಮೌನವಾಗಿ ಆನಂದ ಸವಿಯುತ್ತ ಕುಳಿತಿರಬೇಕೆಂಬುದೇ ಅವಳ ಆಸೆ. ಆದರೆ ಗಂಡನಿಗೆ ಯಾವ ಆಸೆಯಿದೆ, ಅವನು ಯಾವುದರಿಂದ ಅತೃಪ್ತನಾಗಿದ್ದಾನೆ—ಎಂಬುದನ್ನು ಈಗ ತಿಳಿದು ಬಹಳ ಘಾಬರಿ ಹೋದಳು. ಇಲ್ಲಿಯ ವರೆಗೆ ತಾನು ತನ್ನ ಸಂತೋಷವೊಂದನ್ನೇ ನೋಡಿಕೊಂಡು ಬಂದಾಯಿತಲ್ಲದೆ, ಪತಿಯ ಸಂತೋಷವೇನೆಂಬುದನ್ನು ತಿಳಿದು ಅದಕ್ಕೆ ಅನುಕೂಲ ಮಾಡಿಕೊಡಲಿಲ್ಲವೆಂಬುದನ್ನು ಅರಿತು ತೀವ್ರ ಪಶ್ಚಾತ್ತಾಪದಿಂದ ನರಳತೊಡಗಿದಳು. ಪತಿಗಾದರೂ ತನ್ನ ಸಿಂಗಾರವನ್ನು ಪತ್ನಿ ಮೆಚ್ಚಬೇಕೆಂದಿಲ್ಲವೆಂಬುದರ ಜೊತೆಗೆ ಪತ್ನಿಯ ಸಿಂಗಾರದ ಬಗ್ಗೆಯೂ ವಿಶೇಷವಾಗಿ ಅಪೇಕ್ಷೆಯಿಲ್ಲವೆಂಬ ಸುಳಿವನ್ನರಿತು ಅವಳು ತೀರ ಖಿನ್ನಳಾಗಿ ಹೋದಳು. ಆದರೆ ನ್ಯಾಯುಂಟಾಗಿ ಹೋಗಿದ್ದ ಅವಳ ಉದಾಸೀನಭಾವ ಅವಳನ್ನು ಕಾರ್ಯಪ್ರವೃತ್ತವಾಗಗೊಡಲಿಲ್ಲ. ವಾರಕ್ಕೆರಡು ಪೂರರಂತೆ ಬರುತ್ತಿದ್ದ ಕಮಲೇಶನ ಪ್ರತಿಯೊಂದು ಕಾಗದಕ್ಕೂ ಪ್ರತಿಭೆಯ ಉತ್ತರ ಒಂದೇ ರೀತಿಯದು. ಅಪ್ಪುಗೆ, ಆಲಿಂಗನ, ವಿರಹಗಳ ವಿಷಯವಲ್ಲದೆ ಅವ ನಿತ್ಯದ ವಿಚಾರವೊಂದರ ಬಗ್ಗೂ ಮಾತೇ ಇಲ್ಲ!

ಕಮಲೇಶನು ಮಹಾ ಉದಾರಿ, ಕ್ಷಮಾಶೀಲ, ವಸ್ತುಗಳ ನಿಜವಾದ ಸಾರವೇನೆಂಬುದನ್ನು ಬಲ್ಲ ರಸಿಕ. ಬಾಹ್ಯಾಡಂಬರಕ್ಕಿಂತ ಅಂತಃಸೌಂದರ್ಯವನ್ನೇ ಹೆಚ್ಚಾಗಿ ಮೆಚ್ಚಿಕೊಳ್ಳುವ ಸ್ವಭಾವದವ. ಪತ್ನಿಯ ಶೂನ್ಯಭಾವದಿಂದ ಬೇಸತ್ತು ಒಮ್ಮೆ ಕಲ್ಲಾಗಿ ಕುಳಿತ. ಗಂಭೀರವಾದ ಭಾವೋದ್ರೇಕವುಳ್ಳ ಅವನು ಒಮ್ಮೆ ಹೀಗಾಗಿ ಕುಳಿತನು. ಪತ್ನಿಯ ಪತ್ರಗಳು ನೂರಾರು ಬಂದರೂ ಉತ್ತರಿಸಲೇ ಇಲ್ಲ. ಮೊದಲು ಒಂದಕ್ಕೆರಡರಂತೆ ಬರೆಯುತ್ತಿದ್ದ ತನ್ನ ಪ್ರಿಯತಮ ಈಗ ಹೀಗೇಕೆ ಕೋಪಿಸಿಕೊಂಡು ಸುಮ್ಮನಾದನೆಂದು ಪ್ರತಿಭೆ ಪರಿತಪಿಸಿ ದಿನೇ ದಿನೇ ಕೃಶಳಾಗುತ್ತ ಹೋದಳು. ಆದರೆ ಒಮ್ಮೆಯೂ ಗಂಡನ ಆಸೆಯನ್ನು ಪೂರಯಿಸಲು ವಚನದ ಪ್ರಕಾರ ವಿಚಾರ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಲಿಲ್ಲ. ಅವನಾವರೆ ಪ್ರತಿಪತ್ರದಲ್ಲೂ ಕೇಳುತ್ತಿದ್ದನು. ನಾನು ಹೇಗಿದ್ದರೆ ನಿನಗೆ ಸಂತೋಷ? ಎಂದು. ಅದಕ್ಕೆ ಯಾವಾಗಲೂ "ನೀನು ಇದ್ದ ಹಾಗೆ ಇದ್ದರೇ ಸಾಕು" ಎಂದು ಪ್ರತಿಭೆಯ ಉತ್ತರ. ಇದರಿಂದ ಸಾಮಾನ್ಯನಾಗಿದ್ದರೆ ತೃಪ್ತಿಹೊಂದುತ್ತಿದ್ದ. ಕಮಲೇಶನಿಗೆ ಹಾಗೆನಿಸಲಿಲ್ಲ. "ನೀನು ಇದ್ದ ಹಾಗೆ ಇದ್ದರೆ ಸಾಕೆಂ"ಬುದರ ಅರ್ಥವೇನೆಂದರೆ, "ನೀನೂ ಇದ್ದ ಹಾಗೇ ಇರು" ಎಂದು ನಾನು ಹೇಳಬೇಕೆಂದು ಅವಳ ಅಪೇಕ್ಷೆ—ಎಂದು ತಿಳಿದುಕೊಂಡು ಖಿನ್ನನಾದನು. ಮೃತಪ್ರಾಯನಾದನು.

ತಿಂಗಳುಗಳು ಉರುಳಿದವು. ಪ್ರತಿಭೆಯೊಂದು ಗಂಡು ಮಗುವನ್ನು ಹಡೆದಳು. ಅದಕ್ಕೆ ಗಂಡನಿಗೆ ಪ್ರಿಯವಾದ ಸಚ್ಚಿದಾನಂದ ಎಂಬ ಹೆಸರನ್ನಿಟ್ಟಳು. ತಂದೆಯನ್ನು ಕರೆದುಕೊಂಡು ಒಂದು ತಿಂಗಳ ಬಾಣಂತಿ ಗಂಡನ ಮನೆಗೆ ಧಾವಿಸಿದಳು. ಆದರೆ ಅಲ್ಲಿ ಹೋದರೇನು ನೋಡಬೇಕು? ಕೆಲಸ ಕಾರ್ಯಗಳನ್ನೆಲ್ಲ ಬಿಟ್ಟು ಗಂಡನು ಹುಚ್ಚನಾಗಿ ನಾಯಿಯಂತೆ ಬೀದಿಬೀದಿ ಸುತ್ತುತ್ತಿದ್ದುದನ್ನು ಕಂಡು ತತ್ತರಿಸಿ ಹೋದಳು. ದಾರಿಯಲ್ಲಿ ಹೋಗುವ ಹುಡುಗಿಯರು ಅವನಿಗೆ ಕಲ್ಲೆಸೆಯುತ್ತಿದ್ದರು. ಹುಡುಗರು ನಗುತ್ತಿದ್ದರು. ನಾಯಿಗಳು ಬೊಗಳುತ್ತಿದ್ದವು. ಅಚೀಚೆ ಮನೆಯ ಸುಂದರಿಯರು ಎಂಜಲನ್ನು ತಂದು ಉಣಬಡಿಸುತ್ತಿದ್ದರು. ಅದನ್ನು ತಿಂದು ಬಿಟ್ಟ ಕಣ್ಣುಗಳನ್ನು ಮುಚ್ಚದೆ ದಿಗಂಬರನಾಗಿ ಒಂದು ಅಶ್ವತ್ಥವೃಕ್ಷದ ಕೆಳಗೆ ಹೋಗಿ ಧ್ಯಾನಸ್ಥನಂತೆ ಕುಳಿತುಬಿಡುತ್ತಿದ್ದನು. ಅವನನ್ನು ಮಗು ಸಹಿತ ಹೋಗಿ ಮಾತಾಡಿಸಿದಳು. "ನಾನೇ ನಿನ್ನ ನಚ್ಚಿನ ಮಡದಿ ಪ್ರತಿಭೆ, ಇಕೋ, ಇವನೇ ನಮ್ಮ ಮಮತೆಯ ಮಗ ಸಚ್ಚಿದಾನಂದ" ಎಂದು ಹೇಳಿದರೆ ತಿರಸ್ಕಾರದ ಮುಗುಳ್ನಗೆಯೊಂದಲ್ಲದೆ ಮತ್ತೇನನ್ನೂ ಆ ಪ್ರಿಯತಮನ ಮೊಗದಲ್ಲಿ ಕಾಣದಾದಳು. ಸುಧಾಂಶು ಲಾರದ ಬಣ್ಣದ ಬೊಂಬೆಯನ್ನು ಕಂಡು ಈ ರೀತಿ ಕಲ್ಲಾಗಿ ಹೋಗಿದ್ದರೂ ಒಮ್ಮೊಮ್ಮೆ ಕಮಲೇಶನಿಗೆ ತನ್ನ ಮನೆಯ ಜ್ಞಾಪಕ ಬರುತ್ತಿತ್ತು. ಅಲ್ಲಿ ಹೋಗಿ ಯಾರೂ ಇಲ್ಲದಿದ್ದಾಗ ಗಂಟೆಗಟ್ಟಲೆ ಸುಮ್ಮನೆ ನಿಂತು ನೋಡಿದ್ದುಂಟು. ಮನೆಯಲ್ಲಿ ಯಾರದಾದರೂ ಸದ್ದಾಯಿತೆಂದರೆ ಅವನು ಅಲ್ಲಿಂದ ಕೂಡಲೇ ಮಾಯವಾಗಿ ಬಿಡುತ್ತಿದ್ದನು. ಕೃಶಳಾದ ಪ್ರತಿಭೆ ತಪಸ್ವಿನಿಯಂತೆ ಗಂಡನ ಬರಹಗಳನ್ನು ಓದುತ್ತ ಅವನನ್ನೇ ಧ್ಯಾನಿಸುತ್ತ, ನೂರಾರು ದೇವರುಗಳಿಗೆ ಹರಕೆ ಹೊರುತ್ತ, ಉಪವಾಸ ಮಾಡುತ್ತ ತಿಂಗಳುಗಳನ್ನು ನೂಕಿದಳು.

ಒಮ್ಮೆ ಒಂದು ಮಟಮಟ ಮಧ್ಯಾಹ್ನದ ಕಾಲ. ಅನ್ನ ಗಂಟಲಿಗೆ ಹೋಗದೆ ಹಾಗೇ ಬಾಗಿಲ ಹೊರಗೆ ಬಂದು ನಿಂತು ಹುಚ್ಚ ಗಂಡನು ಅಲ್ಲೆಲ್ಲಾದರೂ ಇರುವನೇ? ಎಂದು ಆಸೆವಡೆದ ಕಣ್ಣಿಂದ ಸುತ್ತಲೂ ನೋಡಿದಳು. ಎಲ್ಲೂ ಕಾಣಲಿಲ್ಲ. ಒಳಗೆ ಹೋಗಿ ನೋಡಿದರೆ ಮಗುವೂ ಮಾಯವಾಗಿತ್ತು. ಥಟ್ಟನೆ ಗಾಬರಿಯಿಂದ ಚೀರಿಬಿಟ್ಟಳು. "ಅಯ್ಯೋ "ನನ್ನ ಕಂದ!" ಎಂದು ಕೂಗುತ್ತ ಉಟ್ಟ ಸೀರೆಯಲ್ಲೇ (ವೃದ್ಧರಾದ ಅತ್ತೆ ಮಾವ ಎಷ್ಟು ತಡೆದರೂ ನಿಲ್ಲದೆ) ಹುಚ್ಚಿಯಂತೆ ಮನೆಯಿಂದ ಹೊರಬಿದ್ದಳು. ಎತ್ತಲೋ ನಡೆದಳು ವಾಯು ವೇಗದಿಂದ. ಬೀದಿಯಲ್ಲಿ ಹೋಗುವಾಗ ಜನರು ಕನಿಕರಿಸಿದರು, ಏನಾಯಿತೆಂದು ಕರೆದು ಕೇಳಿದರು. ಯಾವುದಕ್ಕೂ ಪ್ರತಿಭೆ ಮೌನದಿಂದಲೇ ಉತ್ತರವಿತ್ತಳು. ಆದರೆ ಹತ್ತಿರದಲ್ಲೇ ಒಂದು ಪೋಲೀಸು ಚೌಕಿಯಿಂದ ಸಬ್ ಇನ್ಸ್‌ಪೆಕ್ಟರನೊಬ್ಬನು ಹೊರಬೀಳುತ್ತಿದ್ದು; ಇವಳನ್ನು ಕಂಡು ರಟ್ಟೆ ಹಿಡಿದು ನಿಲ್ಲಿಸಿ ಗದ್ದರಿಸಿ— "ನೀನು ಹುಚ್ಚಿಯಲ್ಲ, ಯಾರನ್ನೋ ಖೂನಿ ಮಾಡಿ ಹೀಗೆ ಹುಚ್ಚಿಯಂತೆ ನಟಿಸಿ ಓಡಾಡುತ್ತಿರುವೆ" ಎಂದು ಕೇಳಿದೊಡನೆ ಪ್ರತಿಭೆಗೆ ತಾನೆಲ್ಲಿದ್ದೇನೆಂಬುದರ ಅರಿವಾಯಿತು. ಎಷ್ಟು ಅತ್ತರೂ ಇನ್ಸ್‌ಪೆಕ್ಟರನು ಬಿಡಲಿಲ್ಲ. ತನಿಖೆಯಾಗುವುದರ ಮೊದಲಿನ ಕಾಲವನ್ನು ಅವಳು ಜೇಲಿನಲ್ಲಿ ಕಳೆಯಬೇಕಾಯಿತು.

ಇತ್ತ ಕಮಲೇಶನು ಹಿತ್ತಿಲ ಬಾಗಿಲಲ್ಲಿ ಆಡುತ್ತ ಕುಳಿತಿದ್ದ ೬ ವರ್ಷದ ಸಚ್ಚಿದಾನಂದ ಪುಟ್ಟ ಕೈಗಳಿಂದ ಬಾ ಎಂದೊಡನೆ ಬಂದು ಅವನನ್ನು ಎತ್ತಿಕೊಂಡು ಪುತ್ರಪ್ರೇಮದ ಚಿಲುಮೆಯೊಡೆದೊಡನೆ ಕರೆದುಕೊಂಡು

—೧೫ನೇ ಪುಟಕ್ಕೆ

ದೇಶಾಂತರಗಳಿಂದ

ಏಶಿಯದಲ್ಲಿ ಕಮ್ಯೂನಿಜಂ

ಕಮ್ಯೂನಿಜಂ ಒಪ್ಪುವ ಪ್ರಜಾಸತ್ತಾತ್ಮಕ ಆರ್ಥಿಕ ಸಾಮ್ಯ ಪದ್ಧತಿಯ ಗುಣದ ಆಕರ್ಷಕತೆಯ ಮೋರೆಗೆ ಅದು ಅದನ್ನು ಸಾಧಿಸುವ ಮತ್ತು ರಕ್ಷಿಸುವ ಉಗ್ರ ಸಾಧನವು ಮಸಿ ಬಳಿದಿದೆಯೆನ್ನಬಹುದು. ರಕ್ತಪಾತದ ಭಯವೇ ಇಂದು ಸಾಮ್ಯವಾದದಲ್ಲಿ ನಂಬಿಗೆಯುಳ್ಳ ಅನೇಕ ರಾಜ್ಯಗಳಿಗೆ ಕಮ್ಯೂನಿಜಮ್ಮಿನ ಬಗ್ಗೆ ಅಮಿತ್ರ ಭಾವವನ್ನು ತಾಳುವಂತೆ ಮಾಡಿದ್ದೆಂದರೆ ಯಾರೂ ಒಪ್ಪದಿರಲಾರರು. ಅಷ್ಟರಿಂದಲೇ ಕಮ್ಯೂನಿಸ್ಟರ ಏಳಿಗೆಯನ್ನು ಕಂಡಲ್ಲಿ ಅನೇಕ ಸರಕಾರಗಳ ತಲೆಯಲ್ಲಿ ಅಶಾಂತಿ ಪರ್ವ ಉದಯವಾಗುವುದು. ಇದೇ ದೃಷ್ಟಿಯಿಂದ ಲಂಡನ್ನಿನ "ದಿನ್ಯೂಸ್ಟೇಟ್ಸ್‌ಮನ್ ಎಂಡ್ ನೇಶನ್" ಪತ್ರಿಕೆ ಏಶಿಯದಲ್ಲಿ ಹೇಗೆ ಮತ್ತು ಏಕೆ ಕಮ್ಯೂನಿಜಂ ಪ್ರವೇಶಿಸಿ ತಲೆಯೆತ್ತುತ್ತಿದೆ? ಎಂಬುದನ್ನು ಚನ್ನಾಗಿ ವಿವರಿಸಿದೆ.

ಏಶಿಯದಲ್ಲಿ ಕಮ್ಯೂನಿಜಮ್ಮಿನ ಭವಿಷ್ಯವು ಕಡೆಯವಾಗಿ ನಿರ್ಣಯವಾಗುವುದು ಚೀನದಲ್ಲಿ. ಅಲ್ಲಿ ಹಾಸ್ಯಾಸ್ಪದವಾಗುವಷ್ಟು ಕಾರ್ಯಾಕ್ಷಮತೆಯುಳ್ಳ ಮತ್ತು ಕಲ್ಪನಾತೀತವೆಂಬಷ್ಟು ಲಂಚ ವಂಚನೆಗಳುಳ್ಳ ಸರಕಾರದ ಆಡಳಿತವೇ ಕಮ್ಯೂನಿಜಂ ಜನತೆಯ ಚಳವಳದ ಜೀವಾಳವೆನಿಸಿ ದೇಶದಲ್ಲಿ ಕಾಲಿಡಲು ಕಾರಣವಾಯಿತೆಂಬುದು ಜನರಲ್ ಮಾರ್ಶಲ್ಲರ ಗಮನಕ್ಕೆ ಬಂದಿತು. "ಅರಾಜಕತೆಗಿಂತ ಅನಾಗರಿಕವಾದರೂ ಚಿಂತೆಯಿಲ್ಲ, ಒಂದು ಕ್ರಮಬದ್ಧ ಆಡಳಿತಬೇಕು" ಎಂಬಷ್ಟು ನಿರಾಶೆಗೆ ಇಳಿದ ಚೀನೀಯರು ಸ್ವಾಭಾವಿಕವಾಗಿ ಕಮ್ಯೂನಿಜಮ್ಮನ್ನು ಸ್ವಾಗತಿಸಿದರು.

ಚೀನವಲ್ಲದೆ ಮಲಯ, ಸಯಾಂ, ಇಂಡೋಚೀನ, ಇಂಡೋನೇಶಿಯ ಮುಂತಾದ ರಾಷ್ಟ್ರಗಳೂ ಕಮ್ಯೂನಿಜಮ್ಮಿಗೆ ಎಡೆಗೊಡುತ್ತಿವೆ. ಕಮ್ಯೂನಿಜಮ್ಮಿನ ಪ್ರಸಾರಕ್ಕೆ ಬಹುಸಂಖ್ಯ ಜನರ ಅತೃಪ್ತ ಜೀವನವೇ ಕಾರಣ. ಚೀನದಲ್ಲಿ ಚಿಯಾಂಗ್‌ಕೈಶೇಕರ ಅವಲಕ್ಷಣದ ಕಾರಭಾರ ನಡೆದಿದ್ದರೆ, ಮಲಯದಲ್ಲಿ ಯುದ್ಧಾನಂತರ ಬ್ರಿಟಿಶರು ಸರಿಯಾದ ಆಡಳಿತ ನಡೆಸಲಿಲ್ಲ. ಅಲ್ಲಿ ಚೀನೀಯರೇ ಬಹುಸಂಖ್ಯರು; ತಮಿಳರೂ ಮಲಯದ ಮೂಲ ನಿವಾಸಿಗಳೂ ಮಿಕ್ಕವರು. ಅಲ್ಲಿಯ ಸಮಸ್ಯೆಯೆಂದರೆ ಬ್ರಿಟಿಶ ಬಂಡವಳಶಾಹಿ ಮತ್ತು ಚೀನೀ ರಾಷ್ಟ್ರೀಯತೆಗಳಲ್ಲಿ ಸ್ಪರ್ಧೆ. ಅದು ಅರ್ಧ ಬಂಡವಾಲಶಾಹಿಯ ಅರ್ಧ ಕಮ್ಯೂನಿಜಮ್ಮಿನ ಚಳವಳಕ್ಕೀಡಾಗಿದೆ.

ಇಂಡೋಚೀನದಲ್ಲಿ ಹೋಚಿಮಿನ್ನರ ಪ್ರಬಲ ಪಕ್ಷವು ಕಮ್ಯೂನಿಜಮ್ಮನ್ನು ಅವಲಂಬಿಸಿ ಫ್ರೆಂಚರೊಡನೆ ಹೋರಾಡುತ್ತಿದೆ. ಫ್ರೆಂಚರು ಇಂಡೋಚೀನದಲ್ಲಿ ಮಾಡಿದ ಮತ್ತು ಮಾಡುತ್ತಿರುವ ಅನ್ಯಾಯ ಅತ್ಯಂತ ನಿಷ್ಕಾರಣವಾದುದೂ ಅನ್ಯಾಯವಾದುದೂ ಎನಿಸಿದೆ. ಅವರು ಆ ನಾಡಿಗೆ ಅಪಾರ ಹಾನಿಯನ್ನುಂಟು ಮಾಡಿದ್ದಾರೆ. ಇಂಡೋನೇಶಿಯದಲ್ಲೂ ಹಾಗೇ ಡಚ್ಚರು ಅನವಶ್ಯಕವಾಗಿ ಕೊಲೆಸುಲಿಗೆ, ಕಷ್ಟನಷ್ಟಗಳಿಗೆ ನಾಡಿಗರನ್ನು ಗುರಿಪಡಿಸಿದ್ದಾರೆ. ಕಮ್ಯೂನಿಜಮ್ಮಿಗಿಂತ ಅಲ್ಲಿ ರಾಷ್ಟ್ರೀಯತೆಗೇ ಪ್ರಾಧಾನ್ಯವಿದೆ. ಸದ್ಯಕ್ಕೆ ಇಂಡೋನೇಶಿಯದಲ್ಲಿರುವ ತಮ್ಮ ಬಂಡವಾಳವನ್ನು ಕಳೆದುಕೊಂಬ ಹೆದರಿಕೆಯಿಂದ ಅವರು ಕುಂಟು ನೆವದಿಂದ ಒಪ್ಪಂದ ಮುರಿದು ತಮ್ಮ ಮೇಲು ದರ್ಜೆಯ ಜೀವನಮಟ್ಟವನ್ನು ಉಳಿಸಿಕೊಳ್ಳಲು ಬಲಪ್ರಯೋಗ ಮಾಡಿ ಇಂಡೋನೇಶಿಯನ್ ಸ್ವಾತಂತ್ರ್ಯವನ್ನು ಮನ್ನಿಸದಿದ್ದರೆ, ಇದರಿಂದ ಪಾಪಾ ಅನ್ನುವಷ್ಟರಲ್ಲಿ ಇಡೀ ಇಂಡೋನೇಶಿಯವು ಕಮ್ಯೂನಿಜಮ್ಮನ್ನು ಅಪ್ಪಬಹುದು. ರಶಿಯವು ತನ್ನ ಪ್ರತಿನಿಧಿಗಳನ್ನು ಬ್ಯಾಂಕಾಕ್, ರಂಗೂನ್ ಮುಂತಾದ ಸ್ಥಳಗಳಲ್ಲಿಟ್ಟು ತನ್ನ ಕಾರ್ಯ ಸಾಗಿಸುತ್ತಿದ್ದರೂ ಅದರಿಂದಲೇ ಕಮ್ಯೂನಿಜಂ ಪಸರಿಸುತ್ತಿದೆ ಎಂಬುದು ತಪ್ಪು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಪಾಶ್ಚಾತ್ಯ ಸಾಮ್ರಾಜ್ಯವಾದವು ಪೂರ್ವ ಏಶಿಯದಲ್ಲಿ ಹಿಂದೆ ಮಾಡಿದ ಪಾಪವೇ ಆಗಿದೆ. ಅವರಿಂದಲೇ ಆ ನಾಡಿಗರಿಗೆ ರಶಿಯವನ್ನು ಕಂಡರೆ ದೀನಬಂಧುವಿನಂತೆಯೂ ಪಾಶ್ಚಾತ್ಯ ಮಿತ್ರರನ್ನು ಕಂಡರೆ ಬನಿಯರು, ಬಲಾತ್ಕಾರ ಮಾಡುವವರು ಎಂದೂ ಕಾಣುತ್ತದೆ.

ಪಾಲಿಸ್ತಾನದ ರಾಡಿ

ಪಾಲಿಸ್ತಾನದಲ್ಲಿ ನಡೆದ ಅಂತಃಕಲಹದ ಪರಿಣಾಮವಾಗಿ ಯೆಹೂದಿ ಹಸ್ತಗತ ಪ್ರದೇಶದಲ್ಲಿ ೩ ಲಕ್ಷ ೩೦ ಸಾವಿರ ಅರಬನಿರಾಶ್ರಿತರೂ ಅರಬಹಸ್ತಗತಪ್ರದೇಶದಲ್ಲಿ ೬ ಸಾವಿರ ಯೆಹೂದಿ ನಿರಾಶ್ರಿತರೂ ಇದ್ದಾರೆ. ಇವರಿಗೆ ಧನದಾನದ ಮೂಲಕ ನೆರವೀಯಬೇಕೆಂದು ಸಂ. ರಾ. ಸಂಘದ ಮಧ್ಯಸ್ಥರಾದ ಕೌಂಟ್ ಬರ್ನದೊತ್ತೆಯವರು ಜಗತ್ತಿನ ರಾಷ್ಟ್ರಗಳಲ್ಲಿ ಅರಿಕೆ ಮಾಡಿಕೊಂಡದ್ದಕ್ಕೆ ಉತ್ತರವಾಗಿ ಭಾರತವು ೧ ಲಕ್ಷ ರೂಪಾಯಿಗಳನ್ನು ತನ್ನ ಪಾಲಿನ ಸಹಾಯಧನವೆಂದು ಅವರಿಗೆ ಅರ್ಪಿಸಿದೆ. ಸ್ವತಃ ಭಾರತವೇ ಆರ್ಥಿಕ ದುಃಸ್ಥಿತಿಯಲ್ಲಿ ಇರುವ ಈ ಕಾಲದಲ್ಲಿ ಇಷ್ಟನ್ನಾದರೂ ಸಹಾಯವೆಂದು ಸಲ್ಲಿಸಿದ್ದೇ ಹೆಚ್ಚೆನ್ನಬೇಕು.

● ಅಮ್ಮಾನ್ನಿನ ಸರಕಾರೀ ಭವನದ ಹತ್ತಿರ ಅರಬ ಯೆಹೂದಿ ಘರ್ಷಣ ನಡೆಯಿತೆಂದು ಸುದ್ದಿ. ಹೆಚ್ಚಿನ ವಿವರ ತಿಳಿದಿಲ್ಲ. ಇದರ ನಡುವೆ ಎಲ್ಲ ಅರಬ ಸೈನ್ಯಗಳನ್ನು ಒಟ್ಟುಗೂಡಿಸುವ ಮಾತುಕತೆ ನಡೆದೇ ಇದೆ.

● ಇಜಿಪ್ತದಲ್ಲಿ ಸರಕಾರವು ಸಾವಿರಾರು ಯೆಹೂದಿಗಳನ್ನು ಜೈಲಿಗೆ ಕಳಿಸುತ್ತಿದೆ. ಇತ್ತೀಚೆಗೆ ಸುಮಾರು ಸಾವಿರ ಯೆಹೂದಿಗಳನ್ನು ಸ್ಥಾನಬದ್ಧತೆಯಲ್ಲಿ ಇಡಲಾಗಿದೆಯಲ್ಲದೆ, ಅವರ ಅಪಾರ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ. ಇಜಿಪ್ತ ಸರಕಾರವು ಉಗ್ರವಾದ ಸುದ್ದಿನಿಯಂತ್ರಣವನ್ನು ಹಾಕಿ ಈ ಸುದ್ದಿಯನ್ನು ಗೌಪ್ಯವಾಗಿ ಇಟ್ಟಿದೆಯೆಂದು ಯೆಹೂದಿ ಕಾಂಗ್ರೆಸ್ಸಿನ ರಾಜಕೀಯ ಕಾರ್ಯದರ್ಶಿ ಅಲೆಕ್ಝಾಂಡರ್ ಈಸ್ಟರ್‌ಮನ್ನರೆನ್ನುತ್ತಾರೆ.

● ಪ್ಯಾರಿಸ್ಸಿನಲ್ಲಿ ಕೂಡಿದಾಗ ಸಂಯುಕ್ತರಾಷ್ಟ್ರಸಂಘದ ಸಭೆಯ ಇದಿರು ಕೌಂಟ್ ಫೋಕ್ ಬರ್ನದೊತ್ತೆಯವರು ಪರಿಸ್ಥಿತಿಯ ಸಂಪೂರ್ಣ ವಿವರವನ್ನು ವರದಿ ಮಾಡಲಿದ್ದಾರೆ. ಸದ್ಯದಲ್ಲಿ ಅರಬ ಮತ್ತು ಯೆಹೂದಿಗಳ ಒಪ್ಪಂದಕ್ಕೆ ಯಾವ ಆಶಾಲೇಶವೂ ಉಳಿದಿಲ್ಲವೆಂದು ಅವರು ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಜೆರೂಸಲೇಮಿನ ಬಗ್ಗೆಯೇ ಮುಖ್ಯವಾಗಿ ಪಕ್ಷದ್ವಯದಲ್ಲಿ ತಕರಾರಿದೆಯೆಂದೂ ಅದಕ್ಕಾಗಿ ಹಲವಾರು ವಿಕಲ್ಪ ಯೋಜನೆಗಳನ್ನು ಮುಂದಿಡಬಹುದೆಂದೂ ಅವರ ಮತ.

ಬರ್ಲಿನ್ ಪ್ರಕರಣ

ಬರ್ಲಿನ್ನಿನ ಬಿಕ್ಕಟ್ಟು ದಿನೇದಿನೇ ಹೆಚ್ಚುತ್ತ ಹೋಗಿದೆ. ಮೊನ್ನೆ ಆಂಗ್ಲೋ—ಅಮೇರಿಕನ್ ಮತ್ತು ರಶಿಯನ್ ಗಡಿಗಳ ನಡುವೆ ಅನೇಕ ಸಲ ಪೋಲೀಸರಲ್ಲಿ ಘರ್ಷಣ ಸಂಭವಿಸಿತು.

ಪಾಶ್ಚಾತ್ಯ ವಲಯದಲ್ಲಿಯ ಪೋಲೀಸರನ್ನು ಬಂಧಿಸುವುದು ಕೊಂಡೊಯ್ಯುವುದು, ಗುಂಡುಹಾರಿಸುವುದು ಮುಂತಾಗಿ ರಶಿಯನ್ನರು ಹಲ್ಲೆ ಮಾಡಿದ್ದಾಗಿ ಸುದ್ದಿಯಿದೆ. ಈ ಹಲ್ಲೆಯ ಪರಿಣಾಮವಾಗಿ ಅಲ್ಲಿ ನಿರಾತಂಕವಾಗಿ ಸಾಗುತ್ತಿದ್ದ ಕಳ್ಳಪೇಟೆಯ ವ್ಯಾಪಾರ ನಿಂತುಹೋಯಿತು. ರಶಿಯನ್ನರ ಪ್ರಕಾರ ತಾವು ಕಳ್ಳಪೇಟೆಯನ್ನು ಪ್ರತಿಬಂಧಿಸುವುದರ ಸಲುವಾಗಿ ಹಾಗೆ ದಾಳಿಡಬೇಕಾಯಿತೆಂಬ ಕಾರಣವನ್ನು ಮುಂದೊಡ್ಡಲಾಗಿದೆ. ಅದಕ್ಕಾಗಿ ೨॥ ಸಾವಿರ ಜನರನ್ನು ಬಂಧಿಸಿ ಪುನಃ ಬಿಡಲಾಗಿದೆ.

ಪಾಶ್ಚಾತ್ಯ ವಲಯದ ಪೋಲೀಸರು ರಶಿಯದ ಗುಪ್ತ ಪೋಲೀಸ ದಳದ ಮುಖಂಡನಾದ ಫಾನ್ ಏರ್ಡ್‌ಮನ್ನನನ್ನು ಸೆರೆಹಿಡಿದಿದ್ದಾರೆಂಬುದು ಇತ್ತೀಚಿನ ಸುದ್ದಿ.

ಬಿಕ್ಕಟ್ಟನ್ನು ಬಗೆಹರಿಸಲು ಮೊಲಟೋವರ ಮೂಲಕ ಜನರಲಿಸಿಮೋ ಸ್ಟಾಲಿನ್ನರನ್ನು ಕಾಣಲು ಪಾಶ್ಚಾತ್ಯ ಮಹಾರಾಷ್ಟ್ರ ಪ್ರತಿನಿಧಿತ್ರಯ ಪ್ರಯತ್ನಿಸುತ್ತಲೇ ಇದೆ. ಯಾವ ಚರ್ಚೆ ನಡೆಯಬೇಕಾದರೂ ಮೊದಲು ಮೊದಲು ರಶಿಯನ್ನರು ಬರ್ಲಿನ್ನಿನ ಮೇಲಿನ ದಿಗ್ಬಂಧನವನ್ನು ತೆಗೆಯಬೇಕೆಂಬುದು ಪಾಶ್ಚಾತ್ಯರ ಬಯಕೆ. ಬರ್ಲಿನ್ನಿನಿಂದ ಅವರನ್ನು ಸಂಪೂರ್ಣವಾಗಿ ಹೊರಹಾಕಬೇಕೆಂಬುದು ರಶಿಯನ್ನರ ಸಂಕಲ್ಪ. ಹಾಗೆ ಅವರನ್ನು ಒಮ್ಮೆ ಹೊರಗೆ ಹಾಕಿದ [illegible] ಆ ಬಳಿಕ [illegible] ನಡೆಸುವಂತೆ [illegible]. ಅವನ್ನು ಮತ್ತು ಯುರೋಪಿನಲ್ಲಿಯ ಒಂದು ಪ್ರಬಲ ರಾಷ್ಟ್ರವನ್ನಾಗಿ [illegible] ಎಂದು "ಸಂಯುಕ್ತ ಕಮೀಶನ್"ದ [illegible] ಪ್ರತಿನಿಧಿ ಬರೆದುದರಲ್ಲಿ [illegible].

ಘರ್ಷಣ ಪ್ರತಿ ಘರ್ಷಣಗಳು ಬೆಳೆಯುತ್ತ ಹೋಗಿ ೩ ನೆಯ ಮಹಾಯುದ್ಧಕ್ಕೆ [illegible] ಸಂಭವವಿದೆ ಎಂದು ಬರ್ಲಿನ್ನಿನ [illegible] ರಾಜಕಾರಣ ಬಲ್ಲ ಮುತ್ಸದ್ದಿಗಳು ಹೇಳಿದ್ದಾರೆ.

ಸೋವಿಯಟ್ ಪ್ರತಾಪ

ಮಾರ್ಶಲ್ ಟಿಟೋ ಅಂತಾರಾಷ್ಟ್ರೀಯ ಕಮ್ಯೂನಿಸ್ಟ ಸಂಘದ ಬಹಿಷ್ಕಾರಕ್ಕೆ ಬಲಿಯಾದುದು ಸುಸ್ಪಷ್ಟವಿದೆ. ಇದರ ಹಿನ್ನೆಲೆಯಲ್ಲಿ ಸೋವಿಯಟ ರಶಿಯವು ನಡೆಸುತ್ತಿರುವ ಉಚ್ಚಾಟನಾಕಾಂಡದ ಈಗ [illegible] ತೋರಿ ಬರುತ್ತಿದೆ. ಬಾಲ್ಕನ್ ರಾಷ್ಟ್ರಗಳನ್ನು ತನ್ನ



ಜನರಲಿಸಿಮೋ ಸ್ಟಾಲಿನ್

ಪ್ರಭಾವದಲ್ಲಿ ಒಂದುಗೂಡಿಸಿ ಸ್ವತಂತ್ರಿಸಿದೆ, ಯನ್ನು ಮೆರೆಯಿಸಬೇಕೆಂದು ಟಿಟೋ ಅವರ ಹಿಂದಕ್ಕೆ ಪ್ರತೀಕಾರರೂಪವಾಗಿ ರಶಿಯವು ಅವನ ಬೆಂಬಲಿಗರಲ್ಲಿ ಒಬ್ಬೊಬ್ಬರನ್ನೇ ಪದಭ್ರಷ್ಟಗೊಳಿಸಲು ಉಪಕ್ರಮಿಸಿದೆ ಎಂದು ಬಾಲ್ಕನ್ ಪ್ರದೇಶದಿಂದ ವರದಿ ಬಂದಿದೆ.

ಬಲ್ಗೇರಿಯದಲ್ಲಿ ನಾಳೆ ಹೊಸ ಚಳವಳ ಏಳಬಹುದೆಂದು ಊಹಿಸಲಾಗಿದೆ. ಅಲ್ಲಿಯದಲ್ಲಿ ಬಂದು ನೆಲೆಗೊಂಡ ಅಲ್ಲಿಯ ವಿರೋಧಿ ಮುಖಂಡ, ಅಂತಾರಾಷ್ಟ್ರೀಯ ಕಮ್ಯೂನಿಸ್ಟ ಸಂಘದ ಮುಖ್ಯಾಧಿಕಾರಿಯೂ ಅಲ್ಲಿಯ ಮುಖ್ಯ ಮಂತ್ರಿಯೂ ಆದ ಜಾರ್ಜ ಡಿಮಿಟ್ರೋವನನ್ನು ನಿಷ್ಪ್ರಭಗೊಳಿಸಲಾಗಿದೆ ಎಂದು ಹೇಳುತ್ತಾರೆ. ಅಧ್ಯಕ್ಷ ವಾಸಿಲ್ ಕೊಲಾರೋವನನ್ನೂ ಹಾಗೇ ನಿಸ್ತೇಜಗೊಳಿಸಲಾಗಿದೆಯಂತೆ. ಬಲ್ಗೇರಿಯವನ್ನೀಗ ನಿಜವಾಗಿ ಆಳುವವನೆಂದರೆ ಮಾರ್ಶಲ್ ಫಿಯೋಡರ್ ಕೊಲ್‌ಬುಖಿ. ಅವನ ಬೆಂಬಲಿಗಳು ಸಮರ್ಥರಾದ ಕಮ್ಯೂನಿಸ್ಟ ಪಕ್ಷದ ಬಲ್ಗೇರಿಯನ್ ಪಿತೃಭೂಮಿರಂಗದ ಕಾರ್ಯದರ್ಶಿನಿ ಶ್ರೀಮತಿ ತ್ಸೋಲಾ.

ಟಿಟೋವನ್ನು ಕ್ರೆಮ್ಲಿನ್ ಒಳಗೆ ಬಿಡಲಾರದೆಂದು ಬಾಲ್ಕನ್ನಿನಲ್ಲಿ ನಂಬಲಾಗಿದೆ. ಯುಗೋಸ್ಲೇವಿಯದ ಮೇಲೆ ರಶಿಯವು ಸೈನಿಕ ಒತ್ತಾಯವನ್ನು ತಂದೇ ತರುವುದೆಂದು ಹೇಳಲಾಗುತ್ತಿದೆ. ಡಾನ್ ನದಿಯ ಕೆಳಭಾಗಕ್ಕೆ ಸ್ಟಾಲಿನ್ನರು ತಮ್ಮ ವಿಶ್ವಸ್ತ ಸೇನಾಪತಿಯಾದ ಮೇಜರ್ ಜನರಲ್ ಕೋನ್ [illegible]ನನ್ನು ಕಳಿಸಿದ್ದಾಗಿ ಸುದ್ದಿಯಿದೆ.

ಪೋಲೆಂಡಿನ ವಿದೇಶ ಮಂತ್ರಿ ಜಿಗ್‌ಮುಂಟ್ ಮೊಡ್ಜೆಲೆವ್ಸ್ಕಿಗೆ ಪದಚ್ಯುತಿಯ ಭಯವುಂಟೆಂದು ಅಲ್ಲಿಯ [illegible] ಹೇಳಿದ್ದಾರೆ. ರುಮೇನಿಯದ ಹಿಂದಿನ ನ್ಯಾಯ ಖಾತೆಯ ಮಂತ್ರಿ ಪತ್ರಾಸ್ಕು ಮತ್ತು ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿ ಗಿಗೇರ್ಯು ದೇಜರನ್ನು ಆಗಲೇ ಉಚ್ಚಾಟನೆ ಮಾಡಲಾಗಿದೆ. ಟಿಟೋವಿನ ಗೆಳೆಯನೆಂದು ಹಾಗೇ [illegible] ಕ್ರೆಮ್ಲಿನ್ ಮುಖಂಡ ಮಥಿಯಾಸ್ ರಕೋಸಿ ಆಗಲೇ ಭಯಗ್ರಸ್ತರಾಗಿದ್ದಾರೆ.

ಆಂಗ್ಲೋ—ಅಮೇರಿಕನ್ ಮುತ್ಸದ್ದಿಗಳು ಲಂಚ ದಂಡನೆಗಳಿಂದ ನಾಗರಿಕತೆಯು ಹೋಗುತ್ತಿದೆಂದು ತಮ್ಮ ಪ್ರಭಾವವನ್ನು ಅನ್ಯರಾಷ್ಟ್ರಗಳಲ್ಲಿ ಹರಡುವದೆಂದು ಆಗಿ, ರಶಿಯನ್ನರು ಮೇಲೆ ಕಾಣುವಂತೆ [illegible] ವನ್ನವಲಂಬಿಸಿ ಶಸ್ತ್ರಬಲವನ್ನವಲಂಬಿಸಿ ತಮ್ಮ ದರ್ಪವನ್ನು ಪಸರಿಸುವುದು ಮತ್ತೊಂದು ಬಗೆ. ಒಟ್ಟಿನಲ್ಲಿ ಈ ಅಂತಾರಾಷ್ಟ್ರೀಯ ಸುಲಿಗೆಗಾರರಲ್ಲಿ ಒಬ್ಬರು ಕೆಟ್ಟವರು ಒಬ್ಬರು ಒಳ್ಳೆಯವರೆಂದು ಹೇಳಲು ಬರದು.

ಚೀನೀ ಯುದ್ಧಕಾಂಡ

[illegible] ರಾಜಧಾನಿಯಾದ [illegible] ವಶಪಡಿಸಿಕೊಳ್ಳುವದರ ಸಲುವಾಗಿ [illegible] ಸೈನ್ಯವನ್ನು ಕಮ್ಯೂನಿಸ್ಟರು [illegible] ಸರಕಾರೀ ಸುದ್ದಿಯಿದೆ. [illegible] ಪ್ರದೇಶದಲ್ಲಿ [illegible] ಕಮ್ಯೂನಿಸ್ಟ [illegible] ಸೈನ್ಯ [illegible] ಸರಕಾರೀ ಸೈನ್ಯ [illegible].

ಅಮೇರಿಕದ [illegible] ಸೈನ್ಯ [illegible] ಸುದ್ದಿ [illegible]. [illegible] ಹೊರಟಿಲ್ಲ. [illegible] ಅಮೇರಿಕ [illegible] "[illegible]" ಎಂದು [illegible] ತಮ್ಮ [illegible].

ನಗೆಯ ನೋಡಿ

ತಪ್ಪದು!

[illegible] — ಈ [illegible] ಆ [illegible] ಅವನನ್ನು [illegible] ಮೇಲೆ [illegible] ಈ [illegible]! ಎಂದುಕೊಂಡು [illegible] ನೆಂದುಕೊಂಡಿದ್ದನು. [illegible] ಮಾಗಿದ್ದ [illegible] ಮನೆಯನ್ನು [illegible] ಕಳುಹಿಸಿದನು. ಆಗ ಅವನು—[illegible] ಬಂದಿದ್ದಾರೆ ನೋಡು, [illegible] ರನ್ನು [illegible]—ಎಂದನು. ಅದಕ್ಕೆ ಅವನು ಇದೇ ಸಮಯ [illegible] ಬುದ್ಧಿ ಕಲಿಸಲು ಎಂದುಕೊಂಡು—[illegible] ನಾಯಿತಂತೆ? ಅಲ್ಲಿ ನನ್ನ ಜೊತೆಯೂ [illegible]—ಎಂದು [illegible] ಗಿಬಿಟ್ಟನಂತೆ!

ಮುಖಜ್ಯೋತಿಷ

ಇಬ್ಬರು ನಾಟಕಕರ್ತರಾದ ಗಂಡಹೆಂಡಿರು ಯುರೋಪಿನಲ್ಲಿ ಸಂಚಾರಕ್ಕೆ ಹೊರಟಾಗ ಜೊತೆಯ ಪ್ರಯಾಣಿಕರು ಪೂರ್ವಾಶ್ರಮದಲ್ಲಿ ಯಾವ ಅವತಾರದಲ್ಲಿದ್ದಿರಬಹುದೆಂಬುದನ್ನು ವಿನೋದಕ್ಕಾಗಿ ತರ್ಕಿಸಲು ಸುರು ಮಾಡಿದರು. ಇವನು ಕುದುರೆಯಾಗಿರಬಹುದು, ಇವಳು ಕಪಿಯಾಗಿರಬಹುದು ಎಂದು ಇಬ್ಬರೂ ಒಬ್ಬೊಬ್ಬರನ್ನೇ ಒಮ್ಮತದಿಂದ ವರ್ಗೀಕರಿಸುತ್ತ ಹೋದರು. ಕಡೆಗೊಬ್ಬಳು ಉಳಿದಳು. ಅವಳು ಮೊಲವಾಗಿರಬೇಕೆಂದು ಬ್ರಾಡ್ ಹರ್ಸ್ಟ್ ಹೇಳಿದ. ಅದು ಸರಿಯಲ್ಲ, ಅವಳು ಹೆಗ್ಗಣವಾಗಿರಬೇಕು ಎಂದು ಶ್ರೀಮತಿ ಬ್ರಾಡ್ ಹರ್ಸ್ಟ್ ವಾದಿಸಿದಳು. ಅಲ್ಲ, ಹೌದು ಎಂದು ಜಗಳಹತ್ತಿ ಜಗಳ ಕಾಯ್ದ ನಂತರ ಇಬ್ಬರೂ ಒಂದು ಒಪ್ಪಂದಕ್ಕೆ ಬಂದರು: 'ನಾಳೆ ಅವಳನ್ನು ಚಹಕ್ಕೆ ಕರೆಯುವಾ. ಆಗ ಅವಳ ಮುಂದೆ ಮೊಲತಿನ್ನುವ ಸೊಪ್ಪನ್ನೂ ಒಂದು ಬೆಣ್ಣೆಯ ಮುದ್ದೆಯನ್ನೂ ಇಡೋಣ. ಅವಳು ಯಾವದನ್ನು ಎತ್ತಿಕೊಳ್ಳುತ್ತಾಳೆ ಎಂಬುದರಿಂದ ತೀರ್ಮಾನಿಸೋಣ!'


ಹೇಗಿದ್ದರೂ ಚೆಂದ!

ಅವನು—ನಾನು ಅಮೇರಿಕನ್ ಕ್ರಾಪು ಬಿಡಿಸಲೋ, ಜರ್ಮನ್ ಕ್ರಾಪು ಬಿಡಿಸಲೋ ಹೇಳು ನೋಡೋಣ.

ಅವಳು—ನೀವು ಹೇಗಿದ್ದರೂ ಚಂದ. ಹೇಗೆ ಬೇಕೆಂದರೆ ಹಾಗೆ ಮಾಡಿರಿ.

ಅವನು—ನಾನು ಹೇಗಿದ್ದರೂ ಚಂದ ಎಂದ ಮೇಲೆ ನಾಳೆ ನಾಪಿತನ ಹತ್ತರ ಹೋಗಿ [illegible] ಒಂದು ಕತ್ತರಿ [illegible] ಕೊಂಡು ಬರುತ್ತೇನೆ. ಆಗಬಹುದೆ?

ಅವಳು—(ಆತಂಕದಿಂದ) ಅ..ಗ..ಬ..ಹು..ದು!



ಕುಟುಂಬದಲ್ಲಿ ಮಹಿಳೆಯರ ಕರ್ತವ್ಯ

ಬರೆದವರು:— ಶ್ರೀ. ವಿ. ಪುಟ್ಟನಾದಪ್ಪ

ಸಾಮಾನ್ಯವಾಗಿ ಪತಿಪತ್ನಿಯರನ್ನು ಒಂದು ತೇರಿನ ಗಾಲಿಗಳಿಗೆ ಹೋಲಿಸುವುದು ರೂಢಿ. ಸಂಸಾರದ ಸಜೀವ ತೇರಿನ ಗಾಲಿಗಳೆರಡೂ ಪರಸ್ಪರಾವಲಂಬಿಗಳಾಗಿ ಮುಂದೆ ಹೊರಳಿದ ಹೊರತು ತೇರು ಮುಂದೆ ಸಾಗುವುದು. ಅವಲ್ಲದೆ ಎರಡರಲ್ಲಿ ಒಂದೇನಾದರೂ ಊನಗೊಂಡರೆ ಮತ್ತೊಂದು ಸರಿಯಾಗಿದ್ದರೂ ತೇರಿನ ಮುನ್ನಡೆಗೆ ಸಹಾಯವಾಗದು. ಜೀವನದ ಮುನ್ನಡೆಗೂ ಜೀವನದಲ್ಲಿ ಸಮಭಾಗಿಗಳಾದ ಪತಿಪತ್ನಿಯರಿಬ್ಬರೂ ಪರಸ್ಪರ ಸೌಹಾರ್ದದಿಂದ ಅನ್ಯೋನ್ಯತೆಯಿಂದ ವರ್ತಿಸಬೇಕು; ಆಗಾಗ ಸಹಜವಾಗಿ ಉಂಟಾಗುವ ಒಡಕುಗಳನ್ನು ಮರೆತು, ಒಬ್ಬರನ್ನೊಬ್ಬರು ಹೊಂದಿಕೊಂಡು ಹೋಗಬೇಕು. ಪತಿಪತ್ನಿಯರಿಬ್ಬರಲ್ಲಿಯೂ ಕ್ಷಮೆ, ದಯೆ, ಪ್ರೀತಿಗಳಿಲ್ಲದೆ ಸುಗಮ ಜೀವನ ಸಾಗಿಸಲು ಅಸಾಧ್ಯ. ಇವೆಲ್ಲಕ್ಕಿಂತಲೂ ಮಿಗಿಲಾಗಿ ಒಬ್ಬರ ಮನವನ್ನೊಬ್ಬರು ಚೆನ್ನಾಗಿ ಅರಿತುಕೊಳ್ಳಬೇಕು. ಸಮಯೋಚಿತವಾಗಿ ಸ್ವಭಾವ, ವ್ಯಕ್ತಿತ್ವಗಳಿಗನುಗುಣವಾಗಿ ಇಬ್ಬರೂ ವರ್ತಿಸಬೇಕು. ಅದಲ್ಲದೆ ತನ್ನ ಮೂಗಿನ ನೇರಕ್ಕೇ ನಡೆಯುತ್ತೇನೆಂದು ಹೊರಟರೆ ಜೀವನಮಾಧುರ್ಯ ಕಹಿಯಾದೀತು.

ಸಂಸಾರದಲ್ಲಿ ಪ್ರೀತಿ, ಶಾಂತಿ ಮತ್ತು ಸುಖಗಳನ್ನು ರೂಢಿಸಲು ಗಂಡಸಿಗಿಂತಲೂ ಹೆಚ್ಚಾದ ಹೊಣೆ ಹೆಂಗಸಿನ ಹೆಗಲ ಮೇಲಿದೆ. ಪತಿಯ ಮನೋಗುಣವನ್ನರಿತು ಅದಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಳ್ಳುವುದೇ ಸದ್ಗೃಹಿಣಿಯ ಲಕ್ಷಣ. ಸದ್ಗೃಹಿಣಿಯ ಲಕ್ಷಣಗಳನ್ನು ಕಣ್ವ ಮಹರ್ಷಿ ಶಕುಂತಲೆಯನ್ನು ದುಷ್ಯಂತನ ಅರಮನೆಗೆ ಕಳುಹಿಸಿಕೊಡುವಾಗ ಮಾರ್ಮಿಕವಾಗಿ ವರ್ಣಿಸುತ್ತಾನೆ. ಆ ಗುಣಗಳೆಲ್ಲವನ್ನೂ ಪ್ರತಿಯೊಬ್ಬ ಮಹಿಳೆಯೂ ಓದುವುದು ಮಾತ್ರವೇ ಅಲ್ಲದೆ ಅನುಷ್ಠಾನಕ್ಕೂ ತರಬೇಕು. ಕುಟುಂಬಜೀವನದಲ್ಲಿ ಮಹಿಳೆಯ ಕರ್ತವ್ಯ ಅನೇಕವಿದೆ. ಹೆಂಗಸು ಕೇವಲ ಭೋಗ್ಯವಸ್ತುವಲ್ಲ. ಸದಾಕಾಲಗಳಲ್ಲಿಯೂ ದರ್ಪಣದ ಮುಂದೆ ನಿಂತು ದೈಹಿಕ ಸೌಂದರ್ಯವನ್ನು ಅಲಂಕಾರ ಸಲಕರಣೆಗಳಿಂದ ಹೆಚ್ಚಿಸಿಕೊಳ್ಳುವುದು ಗೃಹಿಣಿಯ ಲಕ್ಷಣವಲ್ಲ. ಅದು ವೇಶ್ಯೆಯ ಲಕ್ಷಣ. ಅಂದರೆ ಸ್ನಾನಾಲಂಕಾರವಿಲ್ಲದೆ ದಿನರಾತ್ರಿಯೂ ದುಡಿತದೆತ್ತಿನಂತೆ ಹೆಂಗಸು ಮನೆಗೆಲಸಗಳಲ್ಲಿ ನಿರತಳಾಗಿರಬೇಕೆಂದರೆ ಅದು ಕೇವಲ ನಿಂದಾಸ್ಪದ. ದಿನಗೆಲಸಗಳನ್ನು ಪ್ರಾರಂಭಿಸುವ ಮುನ್ನ ಸ್ನಾನಾಲಂಕಾರಗಳಾಗಬೇಕು. ಮಹಿಳೆಯರಲ್ಲಿ ಇರುವ ಒಂದು ವೈಯಕ್ತಿಕ ವೈಶಿಷ್ಟ್ಯ. ಇದಾದ ಬಳಿಕ ಮನೆಯ ಚೊಕ್ಕಟಕ್ಕೆ ಗಮನ ಕೊಡಬೇಕು. ಶುಭ್ರವಾಗಿರುವ ಯಾವ ವಸ್ತುವೇ ಆಗಲಿ ಮನಸ್ಸನ್ನು ಆಕರ್ಷಿಸುತ್ತದೆ. ಸ್ಥಳ ಸಂಕೋಚವಾದರೂ ಆಯಾ ವಸ್ತುಗಳನ್ನು ಓರಣವಾಗಿಟ್ಟು ಮನೆಯನ್ನು ಶುಭ್ರವಾಗಿಡಬೇಕು. ಮನೆಗೆಲಸಕ್ಕೂ ಸೇವಕರನ್ನು ಅವಲಂಬಿಸಿರುವುದು ಅನವಶ್ಯಕ. ನಾಗರಿಕತೆ ಬಲಿತಂತೆ ಮಹಿಳೆಯರೆಲ್ಲ ರಾಣಿಯರಂತೆ ಸುಖಜೀವನ ನಡೆಸಲು ಬಯಸುತ್ತಿದ್ದಾರೆ. ಇದು ಶೋಚನೀಯ. ತಮ್ಮ ಮನೆಗೆಲಸಗಳನ್ನು ತಾವೇ ಮಾಡಿಕೊಳ್ಳುವುದರಲ್ಲಿ ಅವಮಾನವೇನೂ ಇಲ್ಲ. ವಿದ್ಯಾಂಸರಾದ ಮಾತ್ರಕ್ಕೆ ಮನೆಗೆಲಸಗಳಿಗೆ ತಿಲಾಂಜಲಿಯಿತ್ತು ಕೇವಲ ಪಾರ್ಕು, ಕ್ಲಬ್ಬು ಮುಂತಾದ ತಾಣಗಳಲ್ಲಿ ಕಾಲಕಳೆಯುತ್ತಿದ್ದರೆ ಅದು ಡಾಂಭಿಕ ಜೀವನ ಮಾತ್ರವೇ ಅಲ್ಲದೆ ಅನೀತಿ ಮತ್ತು ಅಶ್ಲೀಲತೆಗಳೂ ಜೀವನದಲ್ಲಿ ತಲೆದೋರುತ್ತವೆ. ಹಾಗೂ, ಈಗಿನ ಓದು ಮಹಿಳೆಯರ ನೈತಿಕ ಮಟ್ಟವನ್ನು ಕುಗ್ಗಿಸಿದೆ ಎಂದರೆ ಅದರಲ್ಲೇನೂ ತಪ್ಪಿಲ್ಲ. ಓದು ಬರಹಗಳನ್ನು ಕಲಿತ ಮಾತ್ರಕ್ಕೆ ಪತಿಯೊಡನೆ ಸರ್ವ ವಿಷಯಗಳಲ್ಲೂ ಸಮತ್ವಕ್ಕೆ ಸೆಣಸಿದರೆ ಅದು ಕೊನೆಗೆ ಇಬ್ಬರಲ್ಲಿ ಒಬ್ಬರ ಅಭಿಮಾನಭಂಗದಲ್ಲಿ ಪರ್ಯವಸಾನಗೊಳ್ಳುವುದಂತೂ ಖಂಡಿತ. ಅದರೆ ಮಹಿಳೆಗೆ ವ್ಯಕ್ತಿಸ್ವಾತಂತ್ರ್ಯವಿಲ್ಲದೆ ಸರ್ವ ಭಾಗಗಳಲ್ಲೂ ಪರಾವಲಂಬಿಯಾಗಿ ಕೇವಲ ಜೀತದಾಳಿನಂತಿರಬೇಕು ಎಂದರೆ ಅದು ಪುರಾತನ ವಾದ. ಗತಕಾಲದ ಜನಜೀವನ ಪ್ರಸ್ತುತ ಕಾಲಕ್ಕೆ ಹೊಂದುವುದಿಲ್ಲ; ಹಾಗೂ ಜೀವನದ ಪ್ರಗತಿ ಸಹಾಯಕವಾಗಿಲ್ಲ. ಕಾಲಕ್ಕೆ ತಕ್ಕಂತೆ ಜನಜೀವನ ಬದಲಾಯಿಸಬೇಕು. ಆದುದರಿಂದ ಮಹಿಳೆಯರನ್ನು ಕೇವಲ ಜೀತದೆತ್ತುಗಳಂತೆ ಕಾಣುವುದು ಖಂಡನೀಯ.

ಪ್ರತಿಯೊಂದು ವ್ಯಕ್ತಿಯಲ್ಲಿಯೂ ಹಲವಾರು ವೈಶಿಷ್ಟ್ಯಗಳು ಸುಪ್ತವಾಗಿರುತ್ತವೆ. ಆ ಸುಪ್ತವಾಗಿರುವ ಭಾವಗಳನ್ನು ತಂದೆಯೋ ಅಥವಾ ತಾಯಿಯೋ ಅರಿತು, ಅವುಗಳ ಪ್ರಚೋದನೆಗೆ ಸದವಕಾಶಗಳನ್ನು ಕಲ್ಪಿಸಿ ಕೊಡಬೇಕು. ನಮ್ಮ ಜನಾಂಗದಲ್ಲಿ ಈ ಅರಿವು ಬಹಳ ವಿರಳ. ಪ್ರತಿಯೋರ್ವ ತಂದೆಯೂ ತಾಯಿಯೂ ತನ್ನ ಮಕ್ಕಳಲ್ಲಿ ಸಹಜವಾಗಿ ಅಡಕವಾಗಿರುವ ಹಲವು ಬಯಕೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಬೇಕು. ಮಕ್ಕಳಲ್ಲಿರುವ ಬಯಕೆ ತಂದೆಗಿಂತಲೂ ತಾಯಿಗೆ ಚೆನ್ನಾಗಿ ತಿಳಿಯುತ್ತದೆ. ತನ್ನ ಮಕ್ಕಳನ್ನು ಸುಮಾರ್ಗಕ್ಕೆ ತಂದು ಅವರ ಭವಿತವ್ಯವನ್ನು ಪ್ರಜ್ವಲಗೊಳಿಸುವ ಕಾರ್ಯ ತಾಯಿಯದು. ನೆಪೋಲಿಯನ್ ಒಮ್ಮೆ "ಮಗುವಿನ ಮುಂದಿನ ಜೀವನ ಅದರ ತಾಯಿಯ ಕೈಯಲ್ಲಿದೆ: ತಾಯಿ ಮಗುವಿಗೆಂತು ರೂಪುಗೊಟ್ಟಳೋ ಹಾಗೆಯೇ ಮಗುವಿನ ಭವಿಷ್ಯ ಜೀವನಕ್ಕೂ ರೂಪು ಕೊಡಬಲ್ಲಳು" ಎಂದಿದ್ದನು. ಮಕ್ಕಳಿಗೆ ತಾಯಿಯಷ್ಟು ಉತ್ತಮ ಶಿಕ್ಷಕಿ ಮತ್ತೊಬ್ಬಳು ಸಿಗಲಾರಳು. ಮನಸ್ಸು ಮಾಡಿದರೆ ಪ್ರತಿಯೊಬ್ಬ ಮಹಿಳೆಯೂ ಶಾಲಾಶಿಕ್ಷಣದ ಭಯಭೀತಿಗಳನ್ನು ತೋರಿಸದೆ ಪ್ರೇಮಮಾತ್ರದಿಂದ ಎಂತಹ ಒರಟು ಸ್ವಭಾವದ ಮಕ್ಕಳನ್ನೂ ಸುಶಿಕ್ಷಿತರನ್ನಾಗಿ ಮಾಡಬಹುದು. ಬಾಲ್ಯದಲ್ಲಿ ಕಲಿತ ಕೆಲವು ನೀತಿಗಳನ್ನು ಬೆಳೆದ ಮೇಲೂ ಮರೆಯಲಾಗುವುದಿಲ್ಲ. ಏಕೆಂದರೆ ಸಾಮಾನ್ಯವಾಗಿ ನಮ್ಮ ಜೀವನದಲ್ಲಿ ನಾವು ಕಲಿತ ಪ್ರಥಮ ಪಾಠಗಳು ಸದಾ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುತ್ತವೆ. ಆದುದರಿಂದ ಪ್ರತಿಯೊಬ್ಬ ಮಹಿಳೆಯೂ ತನ್ನ ಮಕ್ಕಳಲ್ಲಿ ನೀತಿ, ಸತ್ಯ, ಕಾರ್ಯತತ್ಪರತೆ ಮತ್ತು ಪರೋಪಕಾರಿ ಭಾವನೆಗಳ ಬೀಜಗಳನ್ನು ಬಿತ್ತಬೇಕು.

ಪ್ರಸ್ತುತವಾಗಿ ನಮ್ಮ ದೇಶದಲ್ಲಿನ ಆರ್ಥಿಕ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ರಿಕ್ತತೆ, ಕಾರ್ಪಣ್ಯ ಎತ್ತ ನೋಡಿದರೂ ಕಂಡು ಬರುತ್ತಿವೆ. ಈಗಿನ ಕಾಲದ ಜೀವನವಂತೂ ಬಹಳ ತುಟ್ಟಿಯಾಗುತ್ತಿದೆ. ಈ ಸನ್ನಿವೇಶಗಳಲ್ಲಿ ಸಂಸಾರವನ್ನು ಸಸೂತ್ರವಾಗಿ ನಡೆಸಲು ಗೃಹಿಣಿಯ ಬೆಂಬಲ ಅತ್ಯಗತ್ಯ. ಹೆಚ್ಚಿನದಕ್ಕೆ ಆಶಿಸದೆ ಇದ್ದುದರಲ್ಲಿಯೇ ತೃಪ್ತಿಗೊಳ್ಳುವುದನ್ನು ಕಲಿಯಬೇಕು ಮಹಿಳೆ. ಪತಿಯ ಆದಾಯಕ್ಕೂ ಮನೆಯ ವೆಚ್ಚಕ್ಕೂ ಸರಿಹೋಗಬೇಕು. ಪತ್ನಿ ಚತುರೆಯಾದಲ್ಲಿ ಸಂಸಾರಕ್ಕೆ ಬೇಕಾದ ಅತ್ಯಗತ್ಯ ಖರ್ಚು ವೆಚ್ಚಗಳಲ್ಲಿಯೂ ಉಳಿತಾಯ ಮಾಡಿ ಹಣವನ್ನು ಕೂಡಿಸಬಹುದು. ಹೀಗೆ ಕೂಡಿಟ್ಟ ಹಣ ಮುಂದೆ ಯಾವ ಸಂದರ್ಭಕ್ಕಾದರೂ ಸಹಾಯಕವಾದೀತು. ಗಂಡಸಿರುವುದು ದುಡಿದು ಸಂಪಾದಿಸಲಿಕ್ಕೆ—ಹೆಂಗಸು ಮನೆಯ ವಹಿವಾಟುಗಳನ್ನಷ್ಟೇ ನಡೆಸಿಕೊಂಡು ಹೋಗುವುದಕ್ಕೆ ಎಂದರೆ ಅದು ಸಮುದ್ದೃಷ್ಟಿಯಲ್ಲ. ಕಷ್ಟದ ದುಡಿಮೆಯಿಂದ ಹಣ ಸಂಪಾದಿಸುವ ಗಂಡಿನಷ್ಟೇ, ಅಥವಾ ಇನ್ನೂ ಹೆಚ್ಚಾದ ಬುದ್ಧಿಯನ್ನು ಉಪಯೋಗಿಸಿ ಪತ್ನಿಯಾದವಳು ಮನೆಯ ವಹಿವಾಟುಗಳಿಗೆಂದು ಮಾಡುವ ಖರ್ಚಿಗೂ ಒಂದು ಪರಿಮಿತಿಯಿರಬೇಕು.

ಕುಟುಂಬದಲ್ಲಿ ಮಹಿಳೆಯರ ಸ್ಥಾನವನ್ನು ಕುರಿತು ವಿವಿಧ ಪಂಡಿತರು ವಿವಿಧ ರೀತಿಯಲ್ಲಿ ಹೇಳಿದ್ದಾರೆ. ಇಂಗ್ಲೆಂಡಿನ ಪ್ರಸಿದ್ಧ ಕವಿಯಾದ ಮಿಲ್ಟನ್ "ಹೆಂಗಸು ಕೇವಲ ಮನೆಗೆಲಸಗಳಲ್ಲಿ ಮಾತ್ರ ತರಬೇತು ಹೊಂದಬೇಕು. ಮನೆಯನ್ನು ಶುಚಿಯಾಗಿಡುವುದು, ಮಕ್ಕಳಪೋಷಣೆ ಮತ್ತು ಗೃಹಕ್ಕೆ ಸಂಬಂಧಪಟ್ಟ ಇತರ ಸುವ್ಯವಸ್ಥೆಗಳಿಗೆಂದೇ ಸ್ತ್ರೀ ಹುಟ್ಟಿರುವುದು," ಎಂದು ಹೇಳಿರುವುದೂ ಅಲ್ಲದೆ ಪತಿ-ಪತ್ನಿಯರ ಸಂಬಂಧವನ್ನು ಕುರಿತು ಹೀಗೆ ಹೇಳಿದ್ದಾನೆ. "He for God only, and she for God in him" ಪ್ರಾಚೀನ ಕಾಲದಿಂದಲೂ ಭಾರತೀಯರು ಮಹಿಳೆಯರಿಗೆ ಸನ್ಮಾನ, ಗೌರವಗಳನ್ನು ಸಲ್ಲಿಸುತ್ತ ಬಂದಿದ್ದಾರೆ. ಅಂತೆಯೇ ಮಹಿಳೆಯರೂ ಪತಿಪರಾಯಣೆಯರಾಗಿ ಸದ್ಗೃಹಿಣಿಯರಾಗಿದ್ದಾರೆ. ಕುಟುಂಬದಲ್ಲಿ ಮಹಿಳೆಗೆ ಒಂದು ಉನ್ನತ ಸ್ಥಾನವಿದೆ. ಆ ಉನ್ನತ ಸ್ಥಾನಕ್ಕೆ ತಕ್ಕ ಅರ್ಹತೆಯನ್ನು ಪಡೆಯುವುದೂ ಆ ಸ್ಥಾನಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಳ್ಳುವುದೂ ಪ್ರತಿಯೊಬ್ಬ ಮಹಿಳೆಯೂ ಅರಿತಿರಬೇಕಾದ ಕರ್ತವ್ಯ; ತನ್ನ ಕುಟುಂಬದಲ್ಲಿ ತನ್ನ ಪತ್ನಿ ಕೇವಲ ಗಾಣದೆತ್ತಲ್ಲ. ಆಕೆಗೂ ಕೆಲವು ವಿಷಯಗಳಲ್ಲಿ ತನಗಿರುವಷ್ಟೇ ಸ್ವಾತಂತ್ರ್ಯವಿದೆ ಎಂಬುದನ್ನು ಪ್ರತಿಯೊಬ್ಬ ಪುರುಷನೂ ಗಮನಿಸಬೇಕು ಮತ್ತು ಪತ್ನಿಯ ಮನೋಗುಣವನ್ನರಿತು ಸಾಧ್ಯವಾದಷ್ಟು ಮಟ್ಟಿಗೆ ಅದರಂತೆ ನಡೆದುಕೊಳ್ಳಲು ಹವಣಿಸಬೇಕು. ಸಂಸಾರದಲ್ಲಿ ಪತಿಪತ್ನಿಯರ ಸ್ವಭಾವಗಳ ಐಕ್ಯತೆಯಿಲ್ಲದೆ ಹೋದರೆ ಮನಃಕ್ಲೇಶಗಳೂ ಕಲಹಗಳೂ ಹೆಚ್ಚುತ್ತವೆ. ಮೊದಲಬಾರಿಗೆ ಪತ್ನಿ ಮನೆಗೆ ಬರುವಾಗ ಪತಿಪತ್ನಿಯರ ಮನಸ್ಸು ಎಷ್ಟು ಸಂತೋಷವಾಗಿರುತ್ತದೋ, ಆಶಾದಾಯಕವಾಗಿರುತ್ತದೋ ಅದೇ ಸಂತೋಷ, ಆಸೆಗಳು ಕೊನೆಯ ವರೆಗೂ ಉಳಿದಿರಬೇಕು. ಒಟ್ಟಿನಲ್ಲಿ, ಮಹಿಳೆ ಮನೆಯನ್ನು ಸ್ವರ್ಗದಂತಾದರೂ ಮಾರ್ಪಡಿಸಬಲ್ಲಳು— ನರಕದಂತಾದರೂ ರೂಪುಗೊಳಿಸಬಲ್ಲಳು. ಸಂಸಾರದ ಗುಟ್ಟನ್ನು [illegible]ವಾಗಿ ಅರಿಯುವುದು ಮಹಿಳೆಯ ಕರ್ತವ್ಯ; ಅಳೆ ಸಲ್ಲಿಸಬೇಕಾದ ಸೇವೆ [illegible]ರವಾಗಿದೆ.

ಹೈದರಾಬಾದದ ಒಂದು ವಾರ

ಈ ಒಂದು ವಾರದಲ್ಲಿ ಹೈದರಾಬಾದ ಸಂಸ್ಥಾನದಲ್ಲಿ ಅನೇಕ ಅರಾಜಕ ಘಟನೆಗಳು ಸಂಭವಿಸಿವೆ. ಹಿಂದುಸ್ಥಾನದ ಏಜೆಂಟ ಜನರಲ್ ರಾದ ಶ್ರೀ. ಕೆ. ಎಂ. ಮುನಶಿಯವರು ತಾ. ೧೫ ರಂದು ತಮ್ಮ ನಿವಾಸವಾದ ದಕ್ಷಿಣ ಸದನದಲ್ಲಿ ಸ್ವಾತಂತ್ರ್ಯೋತ್ಸವದ ಸಮಾರಂಭ ಕೂಡಿದ್ದರು. ಆಗ ಹೈದರಾಬಾದದ ಮುಖ್ಯಮಂತ್ರಿಗಳೇ ಮೊದಲಾದವರು ಆಮಂತ್ರಿತರಾಗಿ ಬಂದಿದ್ದರು. ಈ ಸಮಾರಂಭಕ್ಕೆಂದು ಹೊರಟ ಜನರ ಮೇಲೆ ಲಾಲಗುಡಾ ಸ್ಟೇಶನ್ನಿನಲ್ಲಿ ರಜಾಕಾರ ಪುಂಡರು ಹಲ್ಲೆಮಾಡಿ ಬರ್ಚಿಯಿಂದ ಇರಿದು ಅನೇಕರನ್ನು ಗಾಯಗೊಳಿಸಿದರು. ಹೀಗೆ ಗಾಯಗೊಂಡವರಲ್ಲಿ ಪ್ರತಿಷ್ಠಿತರು ಇದ್ದರು. ಗಾಯಾಳುಗಳನ್ನು ಮೀರಲಾಯಕ ಅಲ್ಲಿ ಅವರು ಅಂದು ಕಣ್ಣಾರೆ ಕಂಡಿದ್ದಾರೆ. ಆದರೂ ಅದಕ್ಕೆ ತಕ್ಕ ವ್ಯವಸ್ಥೆ ಶಾಸನ ಪಮನಯವುದೂ ಆಗಲಿಲ್ಲ.

೧೬ ನೇ ತಾ. ರಜಾಕಾರರು ಕೊಪ್ಪಳದಲ್ಲಿ ದಾಳಿ ಮಾಡಿ ಲಕ್ಷ್ಮಣರಾವ ಮತ್ತು ಜನಾರ್ದನರಾವ ಎಂಬ ಪ್ರತಿಷ್ಠಿತ ವಕೀಲರನ್ನೂ ಸಂಗಪ್ಪಾ ಮುದಗಲ್ಲ ಎಂಬ ಓರ್ವ ಧನಾಢ್ಯರನ್ನೂ ಹೊಡೆದು ಬಡೆದು ಅಪಮಾನಗೊಳಿಸಿದರು. ಪುಂಡರು ಮುದಗಲ್ಲರ ಮನೆಯೊಳಕ್ಕೆ ಹೊಕ್ಕು ಪೂಜಾರ್ಥವಾಗಿ ಅವರಲ್ಲಿ ಆಗಮಿಸಿದ ಇಬ್ಬರು ಸ್ವಾಮಿಗಳನ್ನು ಸಹ ಚಿತ್ರಹಿಂಸೆಗೆ ಗುರಿಪಡಿಸಿ ಎಳೆದೊಯ್ದರು. ಕೈಗೆ ಸಿಕ್ಕದ್ದನ್ನೆಲ್ಲ ಸುಲಿಗೆ ಮಾಡಿದರು—ಸಂಗಪ್ಪನವರು ಎಂದಿನಿಂದಲೂ ನಿಜಾಮರಿಗೆ ಅತ್ಯಂತ ನಿಷ್ಠರಾಗಿದ್ದವರು. ಜನಸಾಮಾನ್ಯರ ಮನೆ ನುಗ್ಗಿ ಅವರನ್ನು ಹಿಂಸಿಸಿದ್ದಲ್ಲದೆ ಬಡವರ ಮನೆಗಳನ್ನು ಕೆಡವಿ ಬೀದಿಯಲ್ಲೆಲ್ಲ ಬಿಚ್ಚುಗತ್ತಿಯಿಂದ ಓಡಾಡಿ ಕೋಲಾಹಲವೆಬ್ಬಿಸಿದರು. ಕೊಪ್ಪಳದಲ್ಲಿ ನಡೆದ ಇನ್ನೊಂದು ವೈಶಿಷ್ಟ್ಯವೆಂದರೆ ನಿಜಾಮ ಸರಕಾರದ ನೌಕರನ್ನೂ ತಾರತಮ್ಯವಿಲ್ಲದೆ ಬೀದಿಯಲ್ಲಿ ಉರುಳಿಸಿ ಎಳದಾಡಿ ಮೈನುಗ್ಗಾಗುವಂತೆ ಹೊಡೆದುದು. ಇಷ್ಟಾದರೂ ಅಲ್ಲಿಯ ಮೇಲಾಧಿಕಾರಿಗಳು ಪೋಲೀಸರು ಇದನ್ನಾವುದನ್ನೂ ತಡೆಯಲು ಮುಂದೆ ಬರಲಿಲ್ಲ. ಈ ಒಂದು ವಾರದಲ್ಲಿ ಕೊಪ್ಪಳದಿಂದಲೂ ಸುತ್ತು ಮುತ್ತಲಿನ ಹಳ್ಳಿಗಳಿಂದಲೂ ೫-೬ ಸಾವಿರ ಜನರು ನಿರಾಶ್ರಿತರಾಗಿ ಒಕ್ಕೂಟದ ಊರಾದ ಗದಗಿಗೆ ಬಂದಿದ್ದಾರೆ. ಹೀಗೆ ಹೊರಟವರ ಸಂಗಡ ಒಂದು ಪಾತ್ರೆಯನ್ನಾಗಲೀ ಸ್ವಲ್ಪ ಹಣವನ್ನಾಗಲೀ ಅರಿವೆಗಳನ್ನಾಲೀ ಬಿಡುತ್ತಿಲ್ಲ.

ಹೈದರಾಬಾದದ ಯುವರಾಜರು ಮುಖ್ಯ ಸೇನಾಧಿಪತ್ಯದ ಪದವಿಗೆ ಕೊಟ್ಟ ರಾಜೀನಾಮೆಯನ್ನು ಹಿಂತೆಗೆದುಕೊಂಡ ವಾರ್ತೆ ಬಂದಿದೆ.

ಈ ವರೆಗೆ ಉಸ್ಮಾನಾಬಾದ ಜಿಲ್ಲೆಯಲ್ಲಿ ೧೮೭ ಹಳ್ಳಿಗಳು ಕಲಬುರಗಿ ಜಿಲ್ಲೆಯಲ್ಲಿ ೭೫ ಹಳ್ಳಿಗಳು ನಿಜಾಮರ ಪರಲು ಹರಿದು ಕೊಂಡು ಸ್ವಾತಂತ್ರ್ಯ ಸಾರಿದ ವರದಿ ಬಂದಿದೆ.

ನಿಜಾಮ ಸರಕಾರವು ಒಂದು ಪ್ರಕಟನೆ ಹೊರಡಿಸಿ ಹೈದರಾಬಾದ ಸಮಸ್ಯೆಯನ್ನು ಯುಕ್ತರಾಷ್ಟ್ರ ಸಂಘಕ್ಕೆ ಒಯ್ಯುವದಾಗಿ ಸಾರಿದೆ. ಈ ಅಂಶವನ್ನು ಹಿಂದುಸ್ಥಾನ ಮುಖ್ಯಮಂತ್ರಿ ಪಂ. ಜವಾಹರಲಾಲರಿಗೂ ತಿಳಿಸಲಾಗಿದೆ. ಈ ಪ್ರಶ್ನೆಯನ್ನು ಯು. ರಾ. ಸಂಘದೆದುರು ಸಿರಿಯಾ ಒಯ್ಯಲಿದೆಯೆಂದು ಹೈದರಾಬಾದ ಆಕಾಶವಾಣಿಯು ಹೇಳಿತ್ತು. ಆದರೆ ಸಿರಿಯಾದಲ್ಲಿ ಅಂತರಿಕ ಘಟನಾತ್ಮಕ ಬಿಕ್ಕಟ್ಟು ಉಂಟಾಗಿದ್ದರಿಂದ ಸಿರಿಯಾ ಈ ಇಲ್ಲದ ಉದ್ವೇಸೀರಿಗೆ ಹೋಗದೆಂದು ಇತ್ತೀಚೆ ವರದಿಯಾಗಿದೆ. ಅಲ್ಲದೆ ಅಂತರರಾಷ್ಟ್ರೀಯ ರಂಗದಲ್ಲಿ ಹೈದರಾಬಾದಕ್ಕೆ ಸ್ಥಾನವೇ ಇಲ್ಲದ್ದರಿಂದ ಯಾವ ಸದಸ್ಯ ರಾಷ್ಟ್ರವೂ ಈ ಪ್ರಶ್ನೆಯನ್ನು ಮಂಡಿಸಲು ಮುಂದೆ ಬರಲಾರದೆಂದು ಯು. ರಾ. ಸಂಘದ ತಜ್ಞರ ಅಭಿಪ್ರಾಯವಿದೆ. ಇಷ್ಟಾಗಿಯೂ ಯಾರಾದರೂ ಈ ಪ್ರಶ್ನೆಯನ್ನು ಮುಂದೆ ಚಾಚಿದ್ದಾದರೆ ಬ್ರಿಟನ್ನು ಪ್ರತಿಷೇಧಾಧಿಕಾರ (ವ್ಹಿಟೊ) ಪ್ರಯೋಗಿಸಿ ಈ ವಿಷಯದ ವಿಚಾರವೇ ಆಗದಂತೆ ಮಾಡಬಹುದೆಂದು ವಾರ್ತೆಯಿದೆ.

ಈ ವಾರದ ಅತ್ಯಂತ ಮಹತ್ವದ ಘಟನೆಯೆಂದರೆ ಮುಹಮುದಾಬಾದ ರಾಜಕುಮಾರ ಮುಹಮ್ಮದ ಅಮೀರ ಅಲಿಖಾನರು ತಾ ೨೧ ಕ್ಕೆ ಹೊರಡಿಸಿದ ಪ್ರಕಟನೆ. ಅವರು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಹೈದರಾಬಾದ ಉದ್ದಾಮತೆಯ ಬಗ್ಗೆ ಹೀಗೆ ಹೇಳಿದ್ದಾರೆ.

"ನಿಜಾಮರು ಯುಕ್ತರಾಷ್ಟ್ರ ಸಂಘಕ್ಕೆ ಸ್ವರ್ಗಕ್ಕೆ, ನರಕಕ್ಕೆ ಬೇಕಾದಲ್ಲಿ ಹೋಗಲು ನಿರ್ಧರಿಸಲಿ. ಆದರೆ ಹಿಂದ ಸರಕಾರವು ಹೈದರಾಬಾದ ಜನತೆಗೆ ಆಗುತ್ತಿರುವ ಹಿಂಸೆಯನ್ನು ತೆಪ್ಪಗೆ ಕುಳಿತು ನೋಡಕೂಡದು. ಅಲ್ಲಿಯ ಪ್ರಜಾರಕ್ಷಣೆಯ ಹೊಣೆ ಹಿಂದ ಸರಕಾರದ್ದು. ಆದ ಕಾರಣ ಈ ಬಗ್ಗೆ ಕಾಲವಿಲಂಬವಾದರೆ ಜಗತ್ತಿನ ನ್ಯಾಯಾಲಯದ ಮುಂದೆ ಹಿಂದುಸ್ಥಾನವು ಈ ಪ್ರಜೆಗಳ ಕೊಲೆಗೆ ಅವಕಾಶ ಕೊಟ್ಟ ಬಗ್ಗೆ ಉತ್ತರ ಕೊಡಬೇಕಾದೀತು. ಆದ್ದರಿಂದ ಹಿಂದ ಸರಕಾರವು ಕೂಡಲೇ ನಿಜಾಮರನ್ನು ಪದಚ್ಯುತಗೊಳಿಸಿ ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕು. ಹೈದರಾಬಾದವು ಯು. ರಾ. ಸಂ. ಕ್ಕೆ ದೂರು ಒಯ್ಯುವದರ ಉದ್ದೇಶವು ಕಾಲವಿಲಂಬವನ್ನು ಸಾಧಿಸುವದೇ ಆಗಿದೆ. ಈ ಅವಕಾಶ ಕೊಡಬಾರದು. ಯಥಾಸ್ಥಿತಿ ಒಪ್ಪಂದದ ಅವಧಿಯು ಮುಗಿದರೆ ಹೈದರಾಬಾದದ ಸ್ಥಾನಮಾನದಲ್ಲಿ ತುಸು ವ್ಯತ್ಯಾಸವಾಗಿ ಅದು ಹಿಂದುಸ್ಥಾನಕ್ಕೆ ಪ್ರತಿಕೂಲವಾಗಿ ಪರಿಣಮಿಸಬಹುದು." ಎಂದು ಮೊದಲಾಗಿ ಎಚ್ಚರಿಕೆ ಹೇಳಿದ್ದಾರೆ.

ಹೈದರಾಬಾದದ ಸ್ಥಳಿಕ ಉರ್ದು ದೈನಿಕ ಪತ್ರಿಕೆಯ ಸಂಪಾದಕರು ಹಿಂದುಸ್ಥಾನದ ಪರವಾಗಿ ಧೋರಣವಿಟ್ಟುಕೊಂಡುದಕ್ಕೆ ಅವರನ್ನು ತಾ. ೨೧ ಕ್ಕೆ ಕೊಲೆ ಮಾಡಲಾಯಿತು. (ಈ ವಾರ್ತೆ ಬೇರೆಡೆ ಕೊಟ್ಟಿದೆ.)

ಇತಿಹಾಸ ಪ್ರಸಿದ್ಧವಾದ ಅಜಂತಾದ ಎಡಬಲದ ಹಳ್ಳಿಗಳನ್ನೆಲ್ಲ ರಜಾಕಾರರು ಸುಟ್ಟಿದ್ದಾರೆಂದೂ ಅಲ್ಲಿಯ ಹೆಣ್ಣುಮಕ್ಕಳನ್ನು ಬಲಾತ್ಕಾರದಿಂದ ಭಂಗಿಸಿ ಅನೇಕರನ್ನು ಒತ್ತಾಯದಿಂದ ಮದುವೆ ಮಾಡಿಕೊಂಡಿದ್ದಾರೆಂದೂ ಮನೆ ಮನೆಗೆ ಹೆಣಗಳು ಬಿದ್ದಿದ್ದವೆಂದೂ ಅಲ್ಲಿಗೆಹೋದ ಪ್ರವಾಸಿಕರು ಕಣ್ಣಾರೆ ಕಂಡು ವರದಿ ಮಾಡಿದ್ದಾರೆ.

ಕೆಲವು ಕಡೆಗೆ ಕಿಸಾನ ದಳಗಳು ರಜಾಕಾರರನ್ನು ಯಶಸ್ವಿಯಾಗಿ ಪ್ರತಿಭಟಿಸಿ ಅನೇಕ ಪುಂಡರ ಸಂಹಾರ ಮಾಡಿದ್ದಾರೆ.

ತಾ. ೧೯ ಕ್ಕೆ ರಾಯಚೂರಲ್ಲಿ ರಜಾಕಾರ ಕಾರ್ಯಕರ್ತರ ಸಭೆ ನೆರೆದು ಖಾದಿಧಾರಿಗಳನ್ನೆಲ್ಲ ವೈರಿಗಳೆಂದೇ ತಿಳಿಯಬೇಕೆಂದು ನಿರ್ಧರಿಸಲಾಯಿತು. ಅವರಿಗೆ ಹೇಗೆ ಹಿಂಸೆ ಕೊಡಬೇಕು ಎಂಬ ಬಗ್ಗೆ ಒಂದು ಯೋಜನೆಯನ್ನೇ ನಿಶ್ಚಯಿಸಿದ್ದಾರೆಂದು ತಿಳಿಯುತ್ತದೆ.

ನಿಜಾಮರಿಗೆ ಶಸ್ತ್ರಾಸ್ತ್ರ ಒದಗಿಸಿದ ಸಿಡ್ನೀ ಕಾಟನ್ನನು ಈಗ ಕರಾಚಿಯಲ್ಲಿಯೇ ತಳ ಊರಿದ್ದು ಅಲ್ಲಿ ದೊಡ್ಡ ದೊಡ್ಡ ಅರಮನೆಯಂತಹ ಮನೆಕೊಳ್ಳಹತ್ತಿದ್ದಾನೆಂದೂ ಈಗ ನಿಜಾಮರ ಹತ್ತರ ೫೫ ಕೋಟಿ ರೂ. ಬೆಲೆಯ ಶಸ್ತ್ರಾಸ್ತ್ರ ಉಂಟೆಂದೂ ೫೦ ಸಾವಿರ ಸೈನಿಕರು ಸುಸಜ್ಜಿತರಾಗಿದ್ದಾರೆಂದೂ ವರದಿಯಾಗಿದೆ.

ಇಂಡೊನೇಶಿಯದಲ್ಲಿ ಸಾಮ್ರಾಜ್ಯವಾದಕ್ಕೆ ಮೇಲ್ಗೈ

ಒಪ್ಪಂದ ಮುರಿದು ಡಚ್ಚರು ಗಳಿಸಿದ ದುರ್ಲಾಭ—ಆಂಗ್ಲೋ—ಅಮೇರಿಕನ್ನರ ಮೌನದ ಸಮ್ಮತಿ

ಅಗಸ್ಟ ತಿಂಗಳ ಮಧ್ಯದಲ್ಲಿ ಇಂಡೊನೇಶಿಯದ ಪ್ರಜಾರಾಜ್ಯ ತನ್ನ ಸ್ವಾತಂತ್ರ್ಯೋತ್ಸವವನ್ನು ಆಚರಿಸಿತು. ಮೂರು ವರ್ಷದಹಸುಳೆಯಾದ ಈ ಪ್ರಜಾರಾಜ್ಯದ ವರ್ಧಂತ್ಯುತ್ಸವ ಈ ಬಾರಿ ಖಿನ್ನವಾಗಿತ್ತೆಂದೇ ಹೇಳಬೇಕು. ಡಚ್ಚರು ತಮ್ಮ ಅಧೀನದಲ್ಲಿರುವ ಪ್ರದೇಶಗಳಲ್ಲಿ ಸ್ವಾತಂತ್ರ್ಯೋತ್ಸವಕ್ಕೆ ಪ್ರತಿಬಂಧವನ್ನುಂಟುಮಾಡಿದ್ದರು. ಕ್ಯಾಂಬೆರಾದಲ್ಲಿ (ಆಸ್ಟ್ರೇಲಿಯಾ) ಇಂಡೋನೇಶಿಯದ ಪ್ರತಿನಿಧಿಗಳು ಅಂದು ಏರ್ಪಡಿಸಿದ ಸತ್ಕಾರ ಸಮಾರಂಭವನ್ನು ಬ್ರಿಟನ್, ಫ್ರಾನ್ಸ, ಹಾಲಂಡ ಮತ್ತು ಅಮೇರಿಕೆಯ ಪ್ರತಿನಿಧಿಗಳು ಬಹಿಷ್ಕರಿಸಿದ್ದರು. ಭಾರತ, ಆಸ್ಟ್ರೇಲಿಯಾ, ರಶಿಯಾ ಮೊದಲಾದ ಕೆಲವು ರಾಷ್ಟ್ರಗಳ ಪ್ರತಿನಿಧಿಗಳಷ್ಟೇ ಅದರಲ್ಲಿ ಭಾಗವಹಿಸಿದ್ದರು.



ಸುವರ್ಣಾತ್ರದ ಮೆಂಗಂಬಾಕ [illegible]

ಇಂಡೊನೇಶಿಯನ್ ಪ್ರಜೆಗಳು ಕಳೆದ ಮೂರು ವರ್ಷಗಳಿಂದ ಹಲವು ವಿಶ್ವಾಸಘಾತಗಳಿಗೆ ಒಳಗಾಗಿದ್ದಾರೆ. ಇಂದು ಅವರಿಗೆ ಭಾರತ ಮತ್ತು ರಶಿಯಾಗಳನ್ನು ಬಿಟ್ಟರೆ ಗೆಳೆಯರೇ ಇಲ್ಲದಂತಾಗಿದೆ. ಆಂಗ್ಲೋ ಅಮೇರಿಕನ್ನರೂ ಅವರ ಬಳಗದವರೂ ಡಚ್ ಸಾಮ್ರಾಜ್ಯವಾದಿಗಳು ಕಷ್ಟಕ್ಕೊಳಗಾಗುವಾಗ ಮಾತ್ರ ಮಧ್ಯಸ್ಥಿಕೆಯ ವೇಷಹಾಕಿ, ತಮ್ಮ ಗೆಳೆಯರ ಕೆಲಸವಾದ ಮೇಲೆ ಇಂಡೊನೇಶಿಯನ್ನರನ್ನು ಡಚ್ಚರ "ಖುಶಿ"ಗೆ ಬಿಟ್ಟು ತೆಪ್ಪಗಿರುವ ಆಟವನ್ನು ನಡೆಸಿದರು.

ಜುಲೈ ತಿಂಗಳಲ್ಲಿ ಹಾಲಂಡಿನಲ್ಲಿ ಮಹಾಚುನಾವಣೆಗಳಾದವು. ಇಂಡೊನೇಶಿಯದ ಬಗ್ಗೆ ಡಚ್ ಧೋರಣೆಯನ್ನು ಹೆಚ್ಚು ಉದಾರವಾಗಿ [illegible]ಡಬೇಕೆಂದು ವಾದಿಸಿ ಪ್ರಗತಿಪರರು ಚಳವಳಿ ಹೂಡಿದ್ದರು. ಆದರೆ ಚುನಾವಣೆಯ ಫಲಿತಾಂಶ ರಾಜಕೀಯ ತಕ್ಕಡಿಯನ್ನು ಬದಲಾಯಿಸಲಿಲ್ಲ; ಬದಲಾಯಿಸಿದ್ದರೆ ಪ್ರತಿಗಾಮಿಗಳ ಶಕ್ತಿಯನ್ನೇ ಅಲ್ಪಸ್ವಲ್ಪ ಹೆಚ್ಚಿಸಿತೆನ್ನಬಹುದು. ಪರಿಣಾಮವಾಗಿ ಡಚ್ ಮಂತ್ರಿಗಳು, ಇಂಡೊನೇಶಿಯದವರು ಬಗ್ಗದಿದ್ದರೆ ಬಲಪ್ರಯೋಗ ಮಾಡಲಾಗುವದು, ಎಂದು ಹೆದರಿಕೆ ಹಾಕುವಷ್ಟು ಸೊಕ್ಕು ತೋರಿಸಲು ಸಮರ್ಥರಾಗಿದ್ದಾರೆ.

ಬ್ರಿಟಿಶ ಬಲಗಳ ಬೆನ್ನ ಹಿಂದೆ ೧೯೪೫ ರಲ್ಲಿ ರಚ್ಚರು ತಮ್ಮ ಹಳೆಯ ಸಾಮ್ರಾಜ್ಯದಲ್ಲಿ ಕಾಲೂರತೊಡಗಿದಂದಿನಿಂದ ಸಂಧಾನ, ಸಂಧಿ, ಮಧ್ಯಸ್ಥಿಕೆಗಳ ಸೋಗೊಂದೆಡೆ, ಸೈನ್ಯಬಲ ಪ್ರಯೋಗ ಇನ್ನೊಂದೆಡೆ—ಹೀಗೆ ಭೇದ ದಂಡೋಪಾಯಗಳಿಂದ ಹೆಚ್ಚು ಹೆಚ್ಚು ಪ್ರದೇಶವನ್ನು ಆಕ್ರಮಿಸುವದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸಾಗಿರುವದು ಕಾಣಬರುತ್ತದೆ. ಅದಕ್ಕಾಗಿ ಅವರು ದಿನದಿನವೂ ಇಂಡೊನೇಶಿಯದಲ್ಲಿ ತಮ್ಮ ಸಶಸ್ತ್ರ ಬಲಗಳನ್ನು ಹೆಚ್ಚಿಸಿಕೊಳ್ಳುತ್ತಲೆ ಹೋದರು. ೧೯೪೫ ರ ಅಂತ್ಯದಿಂದ ೧೯೪೬ ನವೆಂಬರದಲ್ಲಿ ಡಚ್ಚರಿಗೆ ಇಂಡೊನೇಶಿಯದಲ್ಲಿ ಗಟ್ಟಿಯಾದ ನೆಲೆ ಸಿಗುವವರೆಗೆ ಬ್ರಿಟಿಶ ಬಲಗಳು ಇಂಡೊನೇಶಿಯನ್ ಸ್ವಾತಂತ್ರ್ಯವಾದಿಗಳ ಹತ್ತಿರ ಕಾದಾಡಿ ತಳಹಾಕಿದ ಮೇಲೆಯೆ ಅವು ಹಿಂತೆಗೆದುಕೊಳ್ಳಲ್ಪಟ್ಟವು. ಅಷ್ಟರೊಳಗೆ ಬಹಳ ಮಟ್ಟಿಗೆ ಅಮೇರಿಕೆಯಿಂದ ಮೊರೆತ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ೧,೦೦,೦೦೦ ಸೈನಿಕರನ್ನು ಡಚ್ಚರು ಆ ದ್ವೀಪಗಳಲ್ಲಿ ಸಂಗ್ರಹಿಸಿದ್ದರು. ಈ ಆಂಗ್ಲೊ ಅಮೇರಿಕನ್ ಸಹಾಯವಿಲ್ಲದಿದ್ದರೆ ಡಚ್ಚರು ಪ್ರಜಾರಾಜ್ಯವನ್ನು ಹಣಿಯುವ ಮೋಜು ನೋಡಬಹುದಾಗಿತ್ತು!

ಲಿಂಗಜ್ಜತಿ ಒಪ್ಪಂದ

ಇತ್ತ ಡಚ್ಚರು ಪ್ರಜಾರಾಜ್ಯದ ಪ್ರದೇಶದಲ್ಲಿ ಆಯಕಟ್ಟಿನ ಸ್ಥಾನಗಳನ್ನೇ ಲಕ್ಷ್ಯದಲ್ಲಿಟ್ಟು ಆಕ್ರಮಣ ವೃತ್ತಿಯನ್ನು ನಡೆಸುತ್ತಿದ್ದಾಗ ಅತ್ತ ಬ್ರಿಟಿಶ ಪ್ರತಿನಿಧಿ ಲಾರ್ಡ ಕಿಲರ್ನರು ಪ್ರಜಾರಾಜ್ಯಕ್ಕೂ ಅವರಿಗೂ ಮಧ್ಯಸ್ಥಿಕೆ ಮಾಡಲು ಯತ್ನಿಸಿದರು. ಪರಿಣಾಮವಾಗಿ ಮಾರ್ಚ ೧೯೪೭ ರಲ್ಲಿ ಲಿಂಗಜ್ಜತಿ ಒಪ್ಪಂದವಾಯಿತು. ಅದರ ಪ್ರಕಾರ, ಜಾವಾ ಸುಮಾತ್ರ ಮತ್ತು ಮದುರಾ ದ್ವೀಪಗಳ ಮೇಲೆ ಪ್ರಜಾರಾಜ್ಯ ಸರಕಾರದ "ವಾಸ್ತವಿಕ ಪ್ರಭುತ್ವ"ವನ್ನು ಒಪ್ಪಲಾಯಿತಲ್ಲದೆ, ಆ ದ್ವೀಪಗಳಲ್ಲಿ ಆಗ ಮಿತ್ರ ಮತ್ತು ಡಚ್ ಪಡೆಗಳ ಅಂಕೆಯಲ್ಲಿದ್ದ ಪ್ರದೇಶಗಳನ್ನು ಸಾವಕಾಶವಾಗಿ ಪ್ರಜಾರಾಜ್ಯ ಸರಕಾರದ ವಶಕ್ಕೆ ಬಿಟ್ಟುಕೊಡುವೆವೆಂದು ಡಚ್ಚರು ಅಂಗೀಕರಿಸಿದರು.

ಆದರೆ ಇದೂ ಒಂದು ಕಪಟಜಾಲವೆಂದು ಬೇಗನೆ ಸಿದ್ಧವಾಯಿತು. ರಬ್ಬರ್, ಚಹಾ ಮೊದಲಾದ ಭಾರಿ ಬ್ರಿಟಿಶ ಮತ್ತು ಡಚ್ ತೋಟಗಳೂ ಗಣಿಗಳೂ ಸಕ್ಕರೆ ಕಾರಖಾನೆಗಳೂ ಪ್ರಜಾರಾಜ್ಯ ಸರಕಾರದ ಪ್ರದೇಶಗಳಲ್ಲಿದ್ದವು. ಆದುದರಿಂದ ಪ್ರಜಾರಾಜ್ಯದ ವಶದಲ್ಲಿದ್ದ (ಜಪಾನರು ಪ್ರಜಾರಾಜ್ಯಕ್ಕೆ ವಶಪಡಿಸಿದ) ಸಾವಿರಗಟ್ಟಲೆ ಡಚ್ ಕೈದಿಗಳನ್ನು ಒಮ್ಮೆ ಬಿಡಿಸಿಕೊಳ್ಳುವದಾದ ಮೇಲೆ ಅವರು ಕಾಲುಕೆದರಿ ಜಗಳ ತೆಗೆದರು. ಪ್ರಜಾರಾಜ್ಯವು ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳಲು ತಪ್ಪಿದೆಯೆಂಬ ನೆವ ಹೇಳಿ ಒಪ್ಪಂದವಾದ ನಾಲ್ಕೇ ತಿಂಗಳುಗಳಲ್ಲಿ ಡಚ್ಚರು (ಜುಲೈ ೧೯೪೭) "ಪೋಲೀಸ್ ಚಟುವಟಿಕೆ"ಗಳೆಂಬ ಹೆಸರಲ್ಲಿ ದೊಡ್ಡ ಪ್ರಮಾಣದ ಯುದ್ಧವನ್ನು ಕೈಕೊಂಡು ಪೂರ್ವ ಮತ್ತು ಪಶ್ಚಿಮ ಜಾವಾ ದ್ವೀಪ, ಸುಮಾತ್ರದ ಪೂರ್ವ ಮತ್ತು ದಕ್ಷಿಣ ಭಾಗ ಇವುಗಳನ್ನು ಕಸಿದುಕೊಂಡರು. ಹೀಗೆ ಸಮೃದ್ಧವಾದ ಕೃಷಿ ಭೂಮಿಗಳೂ ಧಾತುಗಳ ಗಣಿಗಳೂ ಅವರ ಕೈಸೇರಿದವು. ತಮ್ಮ ಅಧೀನದಲ್ಲಿದ್ದ ಪ್ರದೇಶವನ್ನು ಪ್ರಜಾರಾಜ್ಯಕ್ಕೊಪ್ಪಿಸುವದಾಗಿ ಕೊಟ್ಟಿದ್ದ ವಚನವನ್ನು ಅವರು ಪಾಲಿಸಿದ್ದು ಹೀಗೆ!

ಸೌಹಾರ್ದ ಸಮಿತಿ

ಅಂತೂ ೧೯೪೭ ರ ಕೊನೆಯ ಭಾಗದಲ್ಲಿ ಡಚ್ಚರ ಈ ವಚನಭಂಗದ ದೂರು ಯುಕ್ತರಾಷ್ಟ್ರ ಸಂಘಕ್ಕೆ ಒಯ್ಯಲ್ಪಟ್ಟು, ಅದು ನೇಮಿಸಿದ ಸೌಹಾರ್ದ ಸಮಿತಿಯವರು ತಿಂಗಳುಗಟ್ಟಲೆ ಸಂಧಾನ ನಡೆಸಿನ್ನರ ಫಲವಾಗಿ ಜನವರಿ ೧೭, ೧೯೪೮ ಕ್ಕೆ ಉಭಯ ಪಕ್ಷಗಳಲ್ಲಿ ತಾತ್ಪೂರ್ತಿಕ ಸಂಧಿಯಾಗುವಷ್ಟರಲ್ಲಿ ಡಚ್ಚರು



[illegible]

(ಜನೆವರಿ) ಸಂಧಿಯಲ್ಲಿ ಇಡಿ ಇಂಡೊನೇಶಿಯದ ಮೇಲೆ ಡಚ್ಚರ ಪರಿಪೂರ್ಣ [illegible] ಯೆಂದು ಉಲ್ಲೇಖಿಸಲಾಗಿದೆ. ಹೀಗೆ ಪ್ರಜಾರಾಜ್ಯದ ಸ್ವಾಧೀನದಲ್ಲಿದ್ದ ಪ್ರದೇಶವನ್ನು ಕಸಿದುಕೊಂಡ ಡಚ್ಚರಿಗೆ ಈಗ ಒಪ್ಪಂದಕ್ಕೆ ಬರುವ ಆತುರ ಕಂಡುಬರುತ್ತಿಲ್ಲ. ಸೌಹಾರ್ದ ಸಮಿತಿ ಈ ಕಟ್ಟಿಯನ್ನು ಬಗೆಹರಿಸಲು ಮಾಡಿದ ಕೆಲ ಸೂಚನೆಗಳನ್ನು ಕಾರ್ಯಕ್ರಮದ ಯಾದಿಯಲ್ಲಿ ಸೇರಿಸಬೇಕೆಂದು [illegible]ದರೆ [illegible]ರೆಯವನ್ನು [illegible]ಂಡಪ್ಪಿಯುದುಕ್ತ[illegible].

ಬ್ರಿ. ವಸಾಹತು [illegible] ಬೆಂಬಲ?

[illegible]ಮುರ ವಿಜಯಂಟಿ ಜನ[illegible]ರ ನವಾಬಜಂಗರು [illegible]ನ ಸರಕಾರದ ಸಲ[illegible]ನಕ್ಕೆ ಮರೆ[illegible], ತಂಟೆ



ಇಂಡೊನೇಶಿಯದ ಬಲಿದ್ವೀಪದ ದೇವಾಲಯ [illegible] ನೃತ್ಯದ [illegible]

ತಮಗೆ ಬೇಕಾದುದರಲ್ಲಿ ಬಹು ಭಾಗವನ್ನು ಯುದ್ಧದ ಮೂಲಕ ಸಾಧಿಸಿಕೊಂಡು ಬಿಟ್ಟಿದ್ದರು. ೭ ಕೋಟಿ ಜನಸಂಖ್ಯೆಯುಳ್ಳ ಇಂಡೊನೇಶಿಯಾದಲ್ಲಿ ಕೇವಲ ಜವಾ ದ್ವೀಪದ ಪರ್ವತಮಯ ಮಧ್ಯ ಪ್ರದೇಶ ಮತ್ತು ಸುಮಾತ್ರದ ಕೆಲವು ಭಾಗಗಳು ಸೇರಿ ೩–೩½ ಕೋಟಿ ಜನಸಂಖ್ಯೆಯ ಪ್ರದೇಶ ಮಾತ್ರ ಇಂದು ಪ್ರಜಾರಾಜ್ಯದ ಕೈಯಲ್ಲಿ ಉಳಿದಿದೆಯೆಂಬದರಿಂದ ಪ್ರಜಾರಾಜ್ಯಕ್ಕೆ ಈ ವಿಶ್ವಾಸಘಾತದಿಂದಾದ ಹಾನಿಯನ್ನು ಊಹಿಸಬಹುದು. ಇಷ್ಟಾದ ಬಳಿಕ ಸಹಜವಾಗಿ ಸಂಧಿಗೆ ಒಪ್ಪಲು ಡಚ್ಚರಿಗೆ ಅಭ್ಯಂತರವೇನೂ ಕಾಣಲಿಲ್ಲ.

ಯಾವ ಕ್ಷಣಕ್ಕೂ ಸಿಟ್ಟಿಗೆ ಗೊಳ್ಳಬಹುದಾದ ಇಂಥ 'ಸಂಧಿ'ಯನ್ನು ಸ್ಥಾಪಿಸುವದಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡುವದರಲ್ಲಿ ಮಾತ್ರ ಯು. ರಾ. ಸಂಘದ ಸೌಹಾರ್ದ ಸಮಿತಿಗೆ ಯಶಸ್ಸು ದೊರೆತಿಲ್ಲ. ಯುದ್ಧದಲ್ಲಿ ತಮಗೆ ಮೇಲ್ಗೈಯಾದುದರಿಂದ ಡಚ್ಚರೀಗ ತಮ್ಮ ಬೇಡಿಕೆಗಳನ್ನು ಬಿಗಿಗೊಳಿಸಿದ್ದಾರೆ. ಅವರು ಕಸಿದುಕೊಂಡ ಪ್ರದೇಶಗಳನ್ನು ತಿರುಗಿ ಕೊಡಿಸುವ ಪ್ರಾಮಾಣಿಕತೆ ಸಮಿತಿ ತೋರಲೇ ಇಲ್ಲ. ಅಮೇರಿಕೆಯ ಪ್ರತಿನಿಧಿಯವರು, ಸಂಧಿಯ ಕರಾರುಗಳು "ಅತ್ಯಂತ ನ್ಯಾಯವೂ ವ್ಯವಹಾರ್ಯವೂ" ಆಗಿವೆಯೆಂದು ತಮ್ಮ ತುಂಬ ಮೆಚ್ಚುಗೆಯ ಪ್ರಶಸ್ತಿಪತ್ರ ಪ್ರದೇಶದ ಬಗೆಗೆ ಎಲ್ಲ [illegible] ಪ್ರಜಾರಾಜ್ಯದವರಿಗೆ ಬೋಧಿಸಿ ಕೊಟ್ಟರು! ಲಿಂಗಜ್ಜತಿ ಒಪ್ಪಂದದಲ್ಲಿ ದ್ವೀಪತ್ರಯದ ಮೇಲೆ ಪ್ರಜಾರಾಜ್ಯ ಸರಕಾರದ "ವಾಸ್ತವಿಕ ಪ್ರಭುತ್ವ"ವನ್ನು ಒಪ್ಪಿದ್ದರೆ ಮೊನ್ನೆಯ ರೆನ್‌ವಿಲ್ ಪ್ರಜಾರಾಜ್ಯ ಪ್ರತಿನಿಧಿಗಳು ಸೂಚಿಸಿದಾಗ "ಇದು ಬರಿ ಸಂಧಾನ ಸಮಿತಿ, ಮಧ್ಯಸ್ಥ ಸಮಿತಿಯಲ್ಲ," ಎಂದು ಡಚ್ಚರು ಸಮಿತಿಯ ಅಧಿಕಾರವನ್ನೇ ನಿರಾಕರಿಸಿದರು.

ಈಗ ಕೆನ್‌ವಿಲ್ ಸಂಧಿ ಮತ್ತು ಅದರೊಡನೆ [illegible] "ತತ್ವಗಳ ಉಲ್ಲೇಖ"ದ ಕರಾರುಗಳಿಗೂ ಗತಿಗಾಣಿಸಲು ಬೇಕಾದ ಎಲ್ಲ [illegible]ಯನ್ನು ಡಚ್ ಸಾಮ್ರಾಜ್ಯವಾದಿಗಳು [illegible]ದ್ದಾರೆ.

ಲಿಂಗಜ್ಜತಿ ಒಪ್ಪಂದದನ್ವಯ ೧೯೪೯ ಜನೆವರಿ ೧ ರೊಳಗೆ ಸ್ವತಂತ್ರ "ಇಂಡೊನೇಶಿಯದ ಸಂಯುಕ್ತ ಸಂಸ್ಥಾನ"ವನ್ನು ಸ್ಥಾಪಿಸಬೇಕು ಮತ್ತು [illegible] ಒಕ್ಕೂಟ[illegible]ವಾಗಿ ಘಟಿಸಲ್ಪಡಬೇಕು. ಆ ದಿನ ಹತ್ತಿರ ಬರುತ್ತಿದೆ. ಆದುದರಿಂದ ಆ "ಸಂಯುಕ್ತ ಸಂಸ್ಥಾನ"ದ ಸ್ಥಾಪನೆಯಾಗ ಅದು ತಮ್ಮ ಮುಷ್ಟಿ[illegible]" ಕೈಗೊಂಬೆಯಾಗುವಂತೆ ನೋಡಿಕೊಳ್ಳುವದಕ್ಕೆ ಇಷ್ಟೆಲ್ಲ ಪ್ರಯತ್ನ[illegible]. ಲಿಂಗಜ್ಜತಿ ಒಪ್ಪಂದದ ಈ "ಸಂಯುಕ್ತ ಸಂಸ್ಥಾನ"ವೆಂದರೆ ಒಂದು ಒಕ್ಕೂಟ [illegible]. ಪಶ್ಚಿಮ ಬೋರ್ನಿಯೊ ರಾಜ್ಯ, ಪೂರ್ವ ಇಂಡೊನೇಶಿಯ ರಾಜ್ಯ [illegible] ಸರಕಾರಗಳನ್ನು [illegible] ಪೂರ್ವ ಸುಮಾತ್ರ, [illegible] "ಪ್ರಜಾರಾಜ್ಯ" [illegible] ಸಂಯುಕ್ತ ರಾಜ್ಯದಾಗಬೇಕೆಂದು [illegible] [illegible] ಇಂಡೊನೇಶಿಯದ ದ್ವೀಪಗಳನ್ನು [illegible]

—ಮುಂದಿನ ಪುಟಕ್ಕೆ



ಜವಾದ್ವೀಪದ ಒಂದು ಸಂತೆ ಬೀದಿ: [illegible] ವ್ಯಾಪಾರಿ ತನ್ನ ಸರಕುಗಳನ್ನು ತೋರಿಸುತ್ತಿದ್ದಾನೆ.

ವಿವಿಧ ಪ್ರಪಂಚ

ಜಪಾನಿನಲ್ಲಿ ಮದುವೆ

ಕುಳ್ಳರಾದವರನ್ನು ಕಂಡು ಬೇಸತ್ತು ಜಪಾನೀ ಹುಡುಗಿಯರಿಗಿಂದು ಉದ್ದವಾದ ಗಂಡರ ಮೇಲೆ ಆಸೆ ಹೆಚ್ಚುತ್ತಿದೆ. ಹುಡುಗರಿಂದು ಧನಲಕ್ಷ್ಮಿಯರನ್ನೇ ಹೆಂಡತಿಯಾಗಿ ಪಡೆದುಕೊಳ್ಳಬೇಕೆಂಬ ಅವಲಂಬಿತೆಯನ್ನು ತೋರುತ್ತಿದ್ದಾರೆ. ಒಂದೊಂದು ದೇಶದಲ್ಲಿ ಒಂದೊಂದು ಕಾಲದಲ್ಲಿ ಮನುಷ್ಯರ ಆಸೆಗಳು ಒಂದೊಂದು ದಿಕ್ಕಿನಲ್ಲಿ ಹರಿಯುತ್ತವೆ!

ಸೆಂಟ್ರಲ್ ಟೋಕ್ಯೋದಲ್ಲಿ ನಗರಪಿತರು ಮದುವೆಯ ಸಂತೆಯನ್ನು ನಡೆಸುತ್ತಿದ್ದಾರೆ. ಹುಡುಗಿಯರು ಬಂದು ಅಲ್ಲಿ ಗಂಡಂದಿರನ್ನೂ ಹುಡುಗರು ಹೆಂಡತಿಯರನ್ನೂ ಆರಿಸಿಕೊಂಡು ಹೋಗುತ್ತಾರೆ. ಮದುವೆಯಾಗಲಿರುವ ತರುಣ ತರುಣಿಯರು ಹೃದಯದ ಗುರುತನ್ನು ತಮ್ಮ ಉಡುಪಿನ ಮೇಲೆ ಧರಿಸುತ್ತಾರೆ. ಯಾರ ಪರಿಚಯವನ್ನು ಬೇಕಾದರೂ ಅಧಿಕಾರಿಗಳು ಮಾಡಿಕೊಡುತ್ತಾರೆ. ಹುಡುಗ ಹುಡುಗಿಯರು ಸ್ವತಃ ಪರಸ್ಪರರನ್ನು ಆರಿಸಿಕೊಳ್ಳುವ ಪದ್ಧತಿ ಬಹಳ ಹೊಸದು ಜಪಾನಿಗೆ. ಮೊದಲು ಮಧ್ಯಸ್ಥರಿಂದಲೇ ಮದುವೆಗಳಾಗುತ್ತಿದ್ದವು. ಹೀಗೆ ಮದುವೆ ಗೊತ್ತುಪಡಿಸುವ ಕಂಪನಿಗಳು ಈಗ ಅಲ್ಲಿ ಒಂದರ ಮೇಲೊಂದು ಏಳುತ್ತಿವೆ. ಸರಕಾರದ ಯೋಗಕ್ಷೇಮ ಮಂತ್ರಾಲಯ ದಿನವೂ ೨೦೦೦ ಅರ್ಜಿಗಳನ್ನು ತರುಣ ತರುಣಿಯರಿಂದ ಸ್ವೀಕರಿಸುತ್ತಿದೆಯಂತೆ!

ಹುಡುಗರು ಧನಲಕ್ಷ್ಮಿಯರನ್ನು ಅಪೇಕ್ಷಿಸಿದರೆ ಹುಡುಗಿಯರು ಕಳ್ಳ ಪೇಟೆಯಲ್ಲಿ ಸೇರದವನ್ನು ನ್ಯಾಯವಾಗಿ ಉದ್ಯೋಗದಲ್ಲಿ ಹಿಗ್ಗು ಇಲ್ಲದೆ ಸಂಪಾದನೆ ಮಾಡುವ ವರರನ್ನು ಅಪೇಕ್ಷಿಸುತ್ತಾರೆ. ಜಪಾನೀ ಹುಡುಗಿಯರು ಉದ್ದವಾದ ಗಂಡಂದಿರು ಬೇಕೆಂದು ಆಂಗ್ಲೋ ಅಮೇರಿಕನ್ನರನ್ನು ಆರಿಸಿಕೊಳ್ಳುತ್ತಿದ್ದಾರೆ; ರೀತಿಯ ... ಹುಡುಗರು ಗಂಭೀರರೂ ವಿಧೇಯರು ಲಕ್ಷಣ. ... ದಂಪತಿಯರು ಯೋಗ್ಯರೆಂದು ... ಯುತ್ತಾರೆ. ಅರಮನೆಗೆ ಕಳುಹಿಸಿಕೊ... ಜಪಾನಿನಲ್ಲಿ ೧೬ ರಿಂದ ... ವಾಗಿ ವರ್ಣಿಸುತ್ತಾನೆ. ಅ... ಖರ್ಚಿದೆ— ಅಂದರೆ, ಪ್ರತಿಯೊಬ್ಬ ಮಹಿಳೆಯೂ ...ಗಳದು. ಅದರಲ್ಲಿ ಮಾತ್ರವೇ ಅಲ್ಲದೆ ಅನುಷ್ಠಾನಕ್ಕೂ ತರ... ಬೇಕು. ಕುಟುಂಬಜೀವನದಲ್ಲಿ ಮಹಿಳೆಯ ಷ್ಟೇ ... ಕರ್ತವ್ಯ ಅನೇಕವಿದೆ. ...೦ ಯೆನ್ ಸಂಬಳವೂ ಭೋಗ್ಯವಸ್ತುವಲ್ಲ. ಸ್ವ...ದರೆ, ಅವನು ವರನ ದರ್ಪಣದ ಮುಂದೆ ನಿಂತು ಸರಿಯಾಗಿ ತಿಳಿದವನ್ನು ಅಲಂಕಾರ ಸಲ್ಲ...ನಾಜಪನು. ಮಿತವ್ಯಯ ಕೊಳ್ಳುವುದು ಗೃಹಿಣಿಯ ಕಂಪನಿಯು ಸರ್ಪಕ್ಕೆ ವೇಶ್ಯೆಯ ಲಕ್ಷಣ ದಂಪತಿಗಳನ್ನು ಜೋಡಿಸುತ್ತದೆ. ವಿಲ್ಲದೆ ...ಒಂದು ಜೋಡಿಗೆ ೧೦ ಪೌಂಡು ಖರ್ಚು. ಮದುವೆಯ ಕಾಲ ೨ ಗಂಟೆ. ತರುಣ ತರುಣಿಯರ ಶಿರಃಪ್ರಸಾಧನಕ್ಕೆ ಅರ್ಧ ಗಂಟೆ. ಮದುವೆಯ ಉಡುಪಿಗೆ ೧೦ ನಿಮಿಷ. ಪೂಜೆಯ ಪ್ರತಿಕ್ಕೆ ೨೦ ನಿಮಿಷ. ದಂಪತಿಗಳ ಫೋಟೋ ತೆಗೆಯಲು ೧೦ ನಿಮಿಷ. ಮದುವೆಯ ಭೋಜನ ಸಮಾರಂಭಕ್ಕೆ ೩೦ ನಿಮಿಷ.

ಭಾರತದಲ್ಲೂ ಇನ್ನು ಮೇಲೆ ವಧೂವರರಿಗೆ ಅವರವರ ಮನೆತನದ ಪರಂಪರಾಶೃಂಖಲೆಯಿಂದ ಮುಕ್ತಿಕೊಟ್ಟು ಮದುವೆ ಮಾಡಿಸಲು ಕಂಪನಿಗಳು ಮುಂದೆ ಬರುವುದವಶ್ಯಕ. ಆದರೆ ಅಲ್ಲಿಯ ಹುಡುಗಿಯರಂತೆ ಇಲ್ಲಿಯವರು ಅನ್ಯದೇಶೀಯರನ್ನು ಅಪೇಕ್ಷಿಸಿದರೆ ಅದಕ್ಕಿಂತ ಹೆಚ್ಚು ರಾಷ್ಟ್ರೀಯ ಅಪಮಾನ ಇನ್ನೊಂದಾಗಲಾರದು.


ನಿಂದ್ಯ ಮತ್ತು ವಂದ್ಯ

ನಾಗರಿಕರ ನಡತೆಯ ಕಲ್ಪನೆ ಹೇಗೆ ವಿಚಿತ್ರವಾಗಿದೆಯೆಂಬುದನ್ನು ಬರ್ಬರಾ ಜಿ. ಬುಡನನ್ನಲು ಸೋದಾಹರಣವಾಗಿ ಬರೆಯುತ್ತಾರೆ.

ಜಗತ್ತಿನ ಜನಾಂಗಗಳೆಲ್ಲ ಸಾಮಾಜಿಕ ನೀತಿ ನಿಯಮವು ಅಥವಾ ಪರಂಪರಾಗ್ರಹಗಳಿಗೆ ಒಳಗಾಗಿ ಬಾಳುತ್ತಿವೆ. ಪ್ರಾಚೀನ ಕಾಲದಲ್ಲಿ ಜುಲೂ ಜಾತಿಯ ಗಂಡಸು ತನ್ನ ಅತ್ತೆಯನ್ನು ನೋಡಬಾರದು, ಮಾತಾಡಿಸಬಾರದು ಮತ್ತು ಅವಳ ಹೆಸರನ್ನು ಹೇಳಬಾರದು ಎಂಬ ನಿಯಮವಿತ್ತಂತೆ. ಈಗ ನಮ್ಮಲ್ಲಿಯ ಕೆಲ ಹಳಬರಾದ ಗಂಡಹೆಂಡಿರು ಹಾಗೇ ಪರಸ್ಪರರನ್ನು ಹೆಸರು ಹಿಡಿದು ಕರೆಯುವುದಿಲ್ಲ ಎಂಬುದು ಅನುಭವಸಿದ್ಧವಾದುದು. ಕೆಲಕಡೆ ಅಣ್ಣನು ತಮ್ಮನ ಹೆಂಡತಿಯನ್ನು ಮಾತಾಡಿಸಬಾರದೆಂಬುದು ಈಗಲೂ ಆಚರಣೆಯಲ್ಲಿದೆ.

ಟೀಶೀ ಹುಡುಗಿಯರು ತಮ್ಮ ಕುತ್ತಿಗೆಯನ್ನು ಬಟ್ಟೆಯಿಂದ ಮುಚ್ಚಿಕೊಳ್ಳದಿದ್ದಾಗ ಯಾರಾದರೂ ಕಂಡರೆ ಬಹಳ ಒದ್ದಾಡಿಬಿಡುವರಂತೆ! ಪಾಶ್ಚಾತ್ಯರಲ್ಲಿ ತದ್ವಿರುದ್ಧ: ಇಂದಿನ ವರೆಗೆ-ಕುತ್ತಿಗೆ ಮುಚ್ಚಿಕೊಳ್ಳುವುದೆಂದರೇ ಅವರಿಗೆ ಬೇಜಾರ! ಜಪಾನೀ ಹುಡುಗಿಯರು ಪಾರ್ಸೆಲ್ ಮಾಡಿದಂತೆ ಮೈತುಂಬ ಬಟ್ಟೆಯುಟ್ಟರೂ ಒಮ್ಮೊಮ್ಮೆ ಪೂರ ನಿರ್ವಾಣವಾಗಿ ಎಲ್ಲರೆದುರು ಸ್ನಾನ ಮಾಡಲು ನಾಚಿಕೆಪಡುವುದಿಲ್ಲವಂತೆ! ಇದಕ್ಕೇನೆನ್ನಬೇಕು?

ಪಾಶ್ಚಾತ್ಯರಲ್ಲಿ ಚಾಕರಿಮಾಡಿ ಸ್ವಶ್ರಮದಿಂದ ಹೊಟ್ಟೆಹೊರೆದುಕೊಳ್ಳುವ ನಾಗರಿಕ ಹುಡುಗಿಯರಿಗೆ ಸೈಯೆನ್ನುತ್ತಾರೆ. ಏಕೆಂದರೆ ಅವರು ಗಂಡಸರಂತೆಯೇ ಸ್ವತಂತ್ರ ಜೀವನವನ್ನು ಸಾಗಿಸುವಂತಾದರೆಂಬ ಭ್ರಾಂತಿಯಿಂದ. ಮುಚ್ಚಿಕೊಂಡಷ್ಟು ಆಕರ್ಷಣೀಯ, ಬೇಡವೆಂದಷ್ಟು ಬಲು ರುಚಿ-ಎಂಬುದರಿಂದಲೇ ಆಗಾಗ ನಿಂದ್ಯವೆಂದು ಹೀಗಳೆದ ನಡತೆಗಳನ್ನು ವಂದ್ಯವೆಂದೂ ಮತ್ತೆ ಕೆಲವೊಮ್ಮೆ ವಂದ್ಯವೆಂದವುಗಳನ್ನು ನಿಂದ್ಯವೆಂದೂ ತಿಳಿದು



೧೦ ಲಕ್ಷ ವೋಲ್ಟ್ ಶಕ್ತಿಯುಳ್ಳ ಜನರೇಟರ. ... ಇದನ್ನು ...ಕೆಂಡನ ಪ್ರಯೋಗ ಶಾಲೆಯಲ್ಲಿ ... ಆಗುತ್ತಿರುವ ಸಂಶೋಧನಕ್ಕೆ ಬಳಸಲಾಗುತ್ತಿದೆ!

ಆಚರಿಸುವ ಹುಡುಗಿಗೆ ಬೀಳುತ್ತಾರೆ ಜನರು. ಚಿಕ್ಕಂದಿನಿಂದ ಹಿರಿಯತನವೇ ಯೋಗ್ಯವೆಂದು ನಮಗೆ ಕಲಿಸಿದ್ದರೆ ಪ್ರಯತ್ನಪಟ್ಟು ನಾನಿಂದು ವಿನಯಶೀಲನಾಗುತ್ತಿದ್ದೆ; ಸತ್ಯ ಹೇಳಬಾರದೆಂದು ಕಲಿಸಿದ್ದರೆ ಸತ್ಯವನ್ನೇ ಹೇಳುತ್ತಿದ್ದೆವು' ಎಂಬುದು ಅನೇಕ ವೇಳೆ ನಿಜವಾಗಿರುತ್ತದೆ.

ಸಿಗ್ಮಂಡ್ ಫ್ರಾಯ್ಡರ ಮೊದಲ ಶಿಷ್ಯರಾದ ವಿಲ್‌ಹೆಲ್ಮ್ ಸ್ಟೆಕೆಲ್ ಎಂಬ ಮನೋವಿಜ್ಞಾನಿ ಇದೇ ಮಾತನ್ನು ಹೇಳುತ್ತಾರೆ. ಕೆಲವೊಂದು ನೀತಿಬಾಹಿರವೆಂದು ಹೇಳುವುದು ನಾಗರಿಕ ಜೀವನಕ್ಕೆ ಅವಶ್ಯವೇ; ಆದರೆ ಆ ನಿಷೇಧಗಳು ಸಕಾರಣವಿರಬೇಕು, ವೈಜ್ಞಾನಿಕವಿರಬೇಕು. ಹಿಂದಿನ ಮತ್ತು ಇಂದಿನವಂತೆ ಬುದ್ಧಿಹೀನತೆಯ ಗುರುತುಗಳಾಗಿರಬಾರದು; ಸಂಪೂರ್ಣ ನಾಗರಿಕತೆಯುಳ್ಳ ಗಂಡು ಹೆಣ್ಣುಗಳು ಒಂದಕ್ಕಿಂತ ಒಂದು ಹೆಚ್ಚು ದೇಹಭಾಗಗಳ ಮುಚ್ಚಿಕೊಳ್ಳುವುದು, ನಾಚಿಕೆಪಡುವುದು, ಗುಟ್ಟು ಇಟ್ಟುಕೊಳ್ಳುವುದು, ಸಬಲ ಮರ್ತ್ಯಲ ಕರ್ತವ್ಯಕರ್ಮವೆಂದು ತಿಂದುಕೊಳ್ಳುವುದು, ಭಾವ ಮತ್ತು ಇತರ ವಿಷಯಕ್ಕೆ ಈ ಬಂಧನ ನಡತೆಯುಳ್ಳವರಾಗಿರಬಾರದು ಎಂದು ಸ್ಟೆಕೆಲರು ಸಾರಿದ್ದಾರೆ.

ದುಷ್ಕಾರಣಜನ್ಯವಾದ ಅಶಾಂತಿಪ್ರವೃತ್ತಿ, ಅನಾವಶ್ಯಕ ದೇಹಭಾಗ ಪ್ರದರ್ಶನ ಮತ್ತು ಅಸ್ಪೃಶ್ಯನ, ಕೃತಕಾಲಂಕಾರ ಮತ್ತು ಕೃತಕತೆಯಿದ್ದೆ, ಆಸ್ಟ್ರೇಲಿಯನ್ನರ ಬದಲಿಗೆ ಹಿಂದಿನ ಕಟ್ಟುಪಾಡುಗಳಿಂದ ಆದ ನಾಗರಿಕತೆ ಹೆಚ್ಚು ಹಾನಿಯನ್ನು ನಾಗರಿಕತೆಗೆ ಉಂಟುಮಾಡಿದೆಯೆಂದು ಮನೋವಿಜ್ಞಾನಿಗಳೆನ್ನುತ್ತಾರೆ. ಇದನ್ನೇ ಪುರಂದರದಾಸರು—

"ನಗೆಯು ಬರುತಿದೆ ಎನಗೆ
ನಗೆಯು ಬರುತಿದೆ!
ಜಗದೊಳಗಿನ ಮನುಜರೆಲ್ಲ
ಹಗರಣಮಾಡುವುದ ಕಂಡು"

ಎಂದಿದ್ದಾರೆ!

ನಿದ್ರಾಗೃಹ

ಸಿನೆಮಾ ಗೃಹಗಳು ನಿದ್ರಾಗೃಹಗಳಾಗಿ ಹೋದ ಉದಾಹರಣೆ ಮೋಜಿನದಿದೆ. ಆಸ್ಟ್ರೇಲಿಯದಲ್ಲಿ 'ಕ್ಲೇರ್‌ಮೌಂಟ್' ಎಂಬ ಊರಿದೆ. ಅಲ್ಲಿ ವಸತಿಗೃಹಗಳ ಕೊರತೆ ಬಹಳ ಹೆಚ್ಚಿರುವುದರಿಂದ ಗಣಿ ಕೆಲಸಗಾರರು ತಿಕೀಟಿನ ಮೇಲೆ ತಿಕೀಟು ತೆಗೆದುಕೊಂಡು ಚಿತ್ರರಂಗದ ಒಳಗಿನ ಹಾಸಿಗೆಯ ಮೇಲೆಯೇ ಊಟ ಮಾಡುತ್ತ ಮಾಳಿಗೆಯ ಮೇಲಿನ ಸಿನೆಮಾ ನೋಡುವರಂತೆ!

ಕ್ಲೇರ್‌ಮಂಟಿನ ಚಿತ್ರರಂಗಗಳಲ್ಲಿ ರಾತ್ರಿ ೧೧ ತಾಸೂ ನೋಟದ ಮೇಲೆ ನೋಟ ಇಟ್ಟಿರುತ್ತಾರೆ. ಹಗಲಲ್ಲಿ ಯಾರೂ ಅಲ್ಲಿ ಚಿತ್ರ ನೋಡಲು ಹೋಗುವುದಿಲ್ಲ. ಸಂಜೆ ಹೋದರೆ ರಂಗದಲ್ಲೇ ಕಾಲ ಕಳೆದು ರಾತ್ರಿಯು ಎಲ್ಲ ನೋಟಗಳಲ್ಲೂ ಇದ್ದು ಬೆಳಿಗೆ ಎದ್ದು ಗುದ್ದಲಿಗಳನ್ನು ತೆಗೆದುಕೊಂಡು ಚಿನ್ನ ರತ್ನ ಮುಂತಾದವನ್ನು ಅಗೆಯಲು ಕೆಲಸಗಾರರು ಹೊರಡುತ್ತಾರೆ. ಈ ರಸಿಕರು ನಿದ್ರೆ ಮಾಡುತ್ತ ಆರಾಮ ಕುರ್ಚಿಗಳಲ್ಲಿ ಕುಳಿತಿರುವುದರಿಂದ ಎಷ್ಟು ಹಳೆಯ ಚಿತ್ರವನ್ನು ಬೇಕಾದರೂ ೩-೪ ಗಂಟೆಗಳ ಕಾಲ ತೋರಿಸುತ್ತ ಹೋಗುವರಂತೆ!

ಅಲ್ಲಿ ಮಲಗು-ಕುರ್ಚಿಗಳ ತಿಕೀಟಿಗೆ ಬಹಳ ಜನರ ಕೇಳಿಕೆಯಿದೆ. ಇದೀ ಸಮ್ಮಾನದ ತಿಕೀಟನ್ನು ಅನೇಕರು ಪಡೆಯುತ್ತಾರೆ. ತಿಕೀಟಿಗೆ ಕೇಳಿಕೆ ಬಹಳವಾಗಿ ಅದರಲ್ಲಿ ಕಳ್ಳಪೇಟೆ ಕೂಡ ನಡೆಯುವುದು.

ಬಹಳ ಏರಿಕೆಯ ಸೋಪಾನಗಳಲ್ಲಿ ಕುರ್ಚಿಗಳಿದ್ದು ಜನರು ಬೆನ್ನೂರಿ ಮಲಗಿ ಮಾಳಿಗೆಯಲ್ಲಿ ತೋರಿಸುವ ಚಿತ್ರವನ್ನು ನೋಡುವ ವ್ಯವಸ್ಥೆ ಅಲ್ಲಿಯ ರಂಗಗಳಲ್ಲಿದೆ; ಸಿನೆಮಾ ನೋಡುವುದಕ್ಕಿಂತ ಮಲಗುವುದರಲ್ಲೇ ಜನರು ಹೆಚ್ಚು ಆಸಕ್ತರಿರುವುದರಿಂದ ಎಲ್ಲ ಸ್ಥಳಗಳಿಗೂ ಒಂದೇ ದರವನ್ನು ಇಡಲಾಗಿದೆ. ಸಿನೆಮಾ ಮುಗಿದನಂತರ ಕೆಲಸದ ಹುಡುಗಿಯರು ಹೊಟೇಲುಗಳಿಂದ ತಿಂಡಿತೀರ್ಥಗಳನ್ನು ಏಳಬಾರದ ಪ್ರೇಕ್ಷಕರಿಗೆ ತಂದು ಕೊಡುತ್ತಾರೆ. ಅವರು ಅಲ್ಲೇ ಕುಳಿತು ತಿನಿಸುಗಳನ್ನು ತಿಂದು ಮತ್ತೆ ಕುಂಭಕರ್ಣಯೋಗದಲ್ಲಿ ಮಗ್ನರಾಗುತ್ತಾರೆ!

'ನಿದ್ರಾತುರಾಣಾಂ ನ ಸುಖಂ ನ ಶಯ್ಯಾ'

ಜನಮತ

[ಪ್ರಚಲಿತ ವಿಷಯಗಳ ಬಗ್ಗೆ ಓದುಗರು ಬರೆದ ಕಿರು ಪತ್ರಗಳನ್ನು ಈ ವಿಭಾಗದಲ್ಲಿ ಪ್ರಕಟಿಸಲಾಗುವುದು. ಪತ್ರಗಳು ಸಂಕ್ಷಿಪ್ತವಾಗಿರಬೇಕು. ವೈಯಕ್ತಿಕ ಟೀಕೆ-ಟಿಪ್ಪಣಿಗಳಿಗೆ ಎಡೆಗೊಡಲಾಗುವುದಿಲ್ಲ. ಪತ್ರ ಬರೆಯುವವರು ತಮ್ಮ ಪೂರ್ಣ ಹೆಸರು ವಿಳಾಸಗಳನ್ನು ಕೊಡಬೇಕು. ಹೆಸರು ಅಪ್ರಕಟಿಸಬೇಕೆಂದು ... (ಪ್ರಕಟನೆಗಲ್ಲ) ಹೆಸರು ವಿಳಾಸಗಳನ್ನು ಕೊಡಲೇಬೇಕು.]

ತಿರುಕರ ಪಿಡುಗು

ಮಹನೀಯರೆ:

ತಿರುಕತನವನ್ನು ಪ್ರತಿಬಂಧಿಸಬೇಕೆಂದು ಪ್ರತಿನಿಧಿಗಳ ಅಭಿಪ್ರಾಯವಾಗಿದ್ದರೆ ಅವಶ್ಯವಾದ ಉಪಾಯಗಳನ್ನು ಕೈಕೊಳ್ಳುವ ಒಪ್ಪಿಗೆ ಸರಕಾರಕ್ಕಿದೆಯೆಂದು ಓರಿಯೋಲಗದಲ್ಲಿ ತಿಳಿಸಲಾಯಿತೆಂದು ಕೇಳಿ ನನಗೆ ಬಹಳ ಆನಂದವಾಯಿತು. ಹಿಂದುಸ್ತಾನದಲ್ಲಿ ಅಸಂಖ್ಯ ತಿರುಕರು ಸಮಾಜದ ಬದನಿಕೆಗಳಾಗಿ ಜೀವಿಸುತ್ತಿದ್ದಾರೆ. ಯುದ್ಧಕಾಲದಲ್ಲಿ ಕೆಲಸಕ್ಕೆ ಯಾವ ಬರಗಾಲವೂ ಇಲ್ಲದಿದ್ದಾಗ ಕೂಡ ಟೊಣಪರಂಥ ತಿರುಕರು ಬಿಕ್ಕೆ ಬೇಡುತಿದ್ದುದನ್ನು ನೋಡಿದ್ದೇನೆ. ಬಿಕ್ಕೆ ಬೇಡುವದೇ ತನ್ನ ಜಾತಿಧರ್ಮವೆಂದು ಒಬ್ಬನು ನನಗೆ ಹೇಳಿದ್ದ! ಊಟ ಮಾಡುವ ಹೊತ್ತಿಗೆ "ಯವ್ವಾ, ಒಂದು ರೊಟ್ಟಿ ನೀಡಿರಿ" ಎಂದು ಹೊಟ್ಟೆಯನ್ನು ಕಲ... ವ್ಯಲಗೊಳಿಸುವಂಥ ಆರ್ತನಾದವನ್ನು ಕೇಳಿ ಅಸಹ್ಯಪಟ್ಟುಕೊಂಡವನು ನನ್ನಂತೆ ಹಲವರಿರಬಹುದು. ಇದು ನಮ್ಮ ದೇಶಕ್ಕೊಂದು ಕಲಂಕವೇ ಸರಿ. ತಿರುಕತನಕ್ಕಿರುವ ಪ್ರತಿಬಂಧ ದೇವರು ದಿಂಡರ ಹೆಸರಲ್ಲಿ ಬಿಕ್ಕೆ ಬೇಡುವವರಿಗೂ ಅನ್ವಯಿಸಬೇಕು. ಯಾವ ದೇವತೆಯ ಭಕ್ತರು ಅವನ ಕಾಲಬುಡಕ್ಕೆ ಬರುವದಿಲ್ಲವೊ ಅಂಥವನ ಪ್ರತಿನಿಧಿಗಳು ಅವನ ಹೆಸರಲ್ಲಿ ಕಪ್ಪ ಎತ್ತುವದು ಯೋಗ್ಯವಲ್ಲ.

ಧಾರವಾಡ — ಭಿಕ್ಷುಕವೈರಿ

೩೧—೮—೪೮

ಹೆಣ್ತನವಿಲ್ಲವೆ?

ಹೈದರಾಬಾದಿನ ರಜಾಕಾರರ ಅತ್ಯಾಚಾರವನ್ನು ದಿನಂಪ್ರತಿ ಕೇಳುತ್ತಿದ್ದೇವೆ. ಗಂಡಸರು ಶಕ್ತಿಯಿದ್ದಷ್ಟು ತಮ್ಮ ತಮ್ಮ ಹೆಂಗಸರನ್ನು ರಕ್ಷಿಸುತ್ತಿರುವುದು ಶ್ಲಾಘ್ಯವಿದೆ. ಆದರೆ ಹೆಂಗಸರು ತಂತಮ್ಮ ಗಂಡಸರನ್ನು ರಕ್ಷಿಸುವದಲ್ಲಿರಲಿ, ಆತ್ಮರಕ್ಷಣೆಗಾಗಿಯೂ ಸಂಘಟನೆ ಮಾಡಿಕೊಂಡ ಸುದ್ದಿಯಿದ್ದಿಲ್ಲ. ಆದರೆ ಗ್ರಾಮರಕ್ಷಕ ದಲಗಳಲ್ಲಿ ಹುಡುಗರು ತರಬೇತು ಪಡೆ... ಯುವತಿ ಹುಡುಗಿಯರು ಈಗೀಗ ಮುಂದೆ ಹೋಗಿ ಅವರಿಂದ ತರಬೇತುಪಡೆದ ಪ್ರಯತ್ನ ಮಾಡಿದ ಉದಾಹರಣೆ ಕೇಳಿ ಸ್ವಲ್ಪ ಸಂತೋಷವಾಗಿದೆ. ಇದು ಹೆಣ್ತನಕ್ಕೆ ಮಾನಾಸ್ಪದವಾದುದೆಂದು ನನ್ನ ದೃಢವಾದ ಅಭಿಪ್ರಾಯ; ಜಗತ್ತಿನಲ್ಲಿ ಗಂಡನು ವ್ಯಭಿಚಾರ ಮಾಡಿದರೆ ಅವನನ್ನು ನಿಂದಿಸುವ ಹೆಂಡತಿ ಸಿಗಬಹುದಾದರೂ ಸೂಳೆತನವನ್ನು ನಿಲ್ಲಿಸಲು ಚಳವಳ ಸಾಗಿಸುವ ಹೆಂಗಸು ದುರ್ಲಭಳಿರುವಂತೆ ಅತ್ಯಾಚಾರ ಮಗ್ನರಾದ ರಜಾಕಾರರನ್ನು ಮತ್ತು ಕೆಲವೊಮ್ಮೆ ತಮ್ಮನ್ನು ರಕ್ಷಿಸಲು ನ್ಯಾಯವಾಗಿ ಅಶಕ್ತರಾದ ತನ್ನ ಪುರುಷರನ್ನು ದೂರುವ ಬುದ್ಧಿಯನ್ನೇ ಆಧರಿಸಿ ನಿಲ್ಲುವದು ಹೆಂಗಸಿನ ದಾಸ್ಯದ ಅಡಿಗಲ್ಲಲ್ಲವೆ ಮತ್ತೇನು? ಈ ಬುದ್ಧಿ ಸುಧಾರಣೆಯಾಗಿ ನಿಜವಾದ ಹೆಣ್ತನವನ್ನು ಮೈಗೂಡಿಸಿಕೊಂಡಲ್ಲದೆ ಯಾವ ಕಾಯದೆಯಿಂದಲೂ ಸ್ತ್ರೀಸ್ವಾತಂತ್ರ್ಯ ದೊರಕಲಾರದು. ಇಂಥ ಸನ್ನಿವೇಶ ಹುಟ್ಟಿಸಲು ನಮ್ಮ ಮಹಿಳಾಸಮಾಜಗಳು ಇಂದು ಯಾವ ಪ್ರಯತ್ನವನ್ನು ಮಾಡುತ್ತಿವೆ ಎಂಬುದನ್ನು ನನ್ನ ಮಹಿಳೆಯರು ತಿಳಿಸಬಲ್ಲರೆ?

ಹಾದು ಹಸೆಗಳು ಆತ್ಮರಕ್ಷಣೆಯು ಮುಂದೆ ... ಭೋಗ್ಯತೆಯೊಂದೇ ಯೋಗ್ಯತೆ ಎಂದು ತಿಳಿದವಳು ಬದುಕಿನಂತೆ ಅನಾಹ್ಯ ವಸ್ತುವೇ ಸರಿ!

ಹುಬ್ಬಳ್ಳಿ — ಸುಭದ್ರೆ

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨೬

ದೇಶದ ಕೆಡುತ್ತಿರುವ ಆರ್ಥಿಕ ಪರಿಸ್ಥಿತಿಯನ್ನು ವಿಚಾರಿಸಲು ಅರ್ಥಶಾಸ್ತ್ರಜ್ಞರ ಒಂದು ಸಮಿತಿಯನ್ನು ಸರಕಾರದವರು ನೇಮಿಸಿದ್ದು ಆ ಸಮಿತಿ ಎಲ್ಲ ಜೀವನೋಪಯೋಗಿ ವಸ್ತುಗಳ ಮೇಲೆ ಪೂರ್ಣ ನಿಯಂತ್ರಣ ಹೇರಬೇಕೆಂದು ಸೂಚಿಸಿರುವದೆಂದು ಸಂಶಯವಾಗಿದೆ. ಇದರಿಂದ ಪೇಟೆಯಲ್ಲಿ ಶಿಥಿಲತೆಯುಂಟಾಗಿದೆ. ಪಾಲುಗಳೆಲ್ಲ ಬಹುತರವಾಗಿ ಇಳಿಮುಖವಾಗಿವೆ. ಇಂದಿನ ಕೊನೆಯ ದರಗಳಿಂತಿವೆ.

ಜವಳಿ

ಅಹಮದಾಬಾದ ಅಡ್ವಾನ್ಸ	೨೭೭-೮-೦
ಬಾಂಬೆ ಡಾಯಿಂಗ್	೧೦೬೭-೦-೦
ಸೆಂಟ್ರಲ ಇಂಡಿಯಾ	೨೭೪-೦-೦
ಸೆಂಚುರಿ	೫೨೩-೧೨-೦
ಗೋಕಾಕ	೩೦೪-೦-೦
ಕೋಹಿನೂರು	೩೦೭-೦-೦
ಫಿನಿಕ್ಸ	೪೪೬-೪-೦
ಸ್ವದೇಶಿ	೩೦೪-೦-೦

ಇತರ

ಬೇಲಾಪೂರ ಸಕ್ಕರೆ	೨೬೩-೦-೦
ಬಾಂಬೇ ಬರ್ಮಾ	೪೧೦-೪-೦
ಟಾಟಾ ಸ್ಟೀಲ ಡೆಫರ್ಡ	೧೫೭೭-೮-೦
ಇಂಡಿಯನ್ ಆಯರ್ನ	೨೫-೧೨-೦
ಅಸೊ. ಸಿಮೆಂಟ್ಸ	೨೬೦-೧೨-೦
ಸೆಂಟ್ರಲ ಬ್ಯಾಂಕ್	೫೫-೦-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೨೦೨೫-೦-೦
ಇಂಡಿಯನ್ ಬ್ಯಾಂಕ	೨೦೩-೮-೦
ರಿಝರ್ವ ,,	೧೧೩-೮-೦

ಚಿನ್ನ--ಬೆಳ್ಳಿ

ಆರ್ಥಿಕ ಸಲಹೆ ಸಮಿತಿಯವರು ನೋಟುಗಳನ್ನು ಬದಲಾಯಿಸಬೇಕೆಂದು ಸೂಚಿಸಿದ್ದಾರೆಂಬ ಸುಳ್ಳುಸುದ್ದಿಯಿಂದ ಬಂಗಾರ ಕೊಳ್ಳುವವರ ರಭಸ ಹೆಚ್ಚಾಯಿತು. ಮುಂದೆ ಇದು ಸುಳ್ಳೆಂದು ತಿಳಿದು ಬಂದರೂ ಬಡ್ಡಿ ದರ ಹೆಚ್ಚಿಸುವರೆಂಬವೇ ಮೊದಲಾದ ಅನೇಕ ಸುದ್ದಿಗಳು ಹಬ್ಬಿ ಚಿನ್ನದ ಬೆಲೆ ಏರಿಕೆಯಲ್ಲೇ ಉಳಿಯಿತು. ಇಂದಿನ ಕೊನೆಯ ದರಗಳು ಹೀಗಿದ್ದವು.

ತಯಾರಿ ಚಿನ್ನ	೧೧೬-೮-೦
ವಾಯದಾ ಚಿನ್ನ	೧೧೧-೪-೦
ತಯಾರಿ ಬೆಳ್ಳಿ	೧೭೫-೩-೦
ವಾಯದಾ ,,	೧೭೩-೪-೦

ಅರಳೆ

ಅರಳೆ ಬೆಲೆಯನ್ನು ನಿಯಂತ್ರಿಸಬೇಕೆಂದು ಸರಕಾರ ನಿರ್ಣಯಿಸಿದ್ದರಿಂದ ಪೇಟೆ ತೀರ ಕುಗ್ಗಿ ಹೋಗಿದೆ. ಸೆಪ್ಟೆಂಬರ ವಾಯಿದೆ ಅರಳೆ ಇಂದು ೫೧೧-೦-೦ ಯಲ್ಲಿ ಕೊನೆಗೊಂಡಿತು.

ಎಣ್ಣೆಕಾಳು

ಶೇಂಗಾ ಹೊಸ ಮತ್ತು ಹಳೆ	೧೫೩-೮-೦
ಅಗಸಿ	೨೬-೨-೦
,, (ಹೊಸ)	೨೬-೯-೦
,, ಎಣ್ಣೆ	೧೬-೮-೦

ಶಿವಮೊಗ್ಗ ಅಡಿಕೆ

ತಾ. ೨೪

ದೇಶಾವರ ನಂ. ೧ ಮಣ ೧ ಕ್ಕೆ	೩೩-೩೫
,, ,, ೨	೩೦-೩೩
ರಾಜಾಅಲವು	೨೬-೩೩
ತೊರೆಸಾಲು	೨೪-೩೦
ಬೆಟ್ಟೆ ವಂತಿ	೧೮-೨೦
ಬೆಟ್ಟೆ	೧೬-೧೯

ಸಾಂಗಲಿ

ತಾ. ೨೪

ಅರಸಿಣ ಹೊಸ (ಪೇರು)	೧೩೨-೧೩೩
ಮೆಣಸಿನಕಾಯಿ ಹೊಸ ,,	೧೭೫
ಬೆಲ್ಲ ,,	೬೫
ಶೇಂಗಾ ಬಿಂಜ	೨೨೫

ಹುಬ್ಬಳ್ಳಿ

ಕನಿಷ್ಠ ಮತ್ತು ಪರಮಾವಧಿ ಧಾರಣೆಯನ್ನು ಸರಕಾರದವರು ಠರಾಯಿಸಿದ್ದರಿಂದ ಅದರ ಪರಿಣಾಮ ಮಾರ್ಕೆಟಿನ ಮೇಲೆ ಆಗಿ ಈ ವಾರದಲ್ಲಿ ಏನೂ ವ್ಯವಹಾರವಾಗಿಲ್ಲ.

ಅಂದಾಜ ಧಾರಣೆ

ಜಯವಂತ ಹತ್ತಿ	೧	೩೫೦-೩೭೫
ಅಪಲಂಡ ಹತ್ತಿ	೧	೩೪೦-೩೬೦
ಜಿನ		೨೫೦-೨೭೫
ಆ. ಡಬಲರೋಲ		೨೪೦-೨೫೫

ನಾಲ್ಕು ಮಾತು — ರಂಗನಾಥ ದಿವಾಕರ

೧ ನಮ್ಮ ಸಮಾಜ

ಸ್ವಾತಂತ್ರ್ಯ ದೊರೆಯುವ ವರೆಗೆ ಅದಕ್ಕಾಗಿ ಹೋರಾಟ ನಡೆಯಿತು. ಇಷ್ಟರಲ್ಲಿ ಪರಕೀಯರು ಹೋಗಿ ಒಂದು ಪರ್ವವಾಗಿ ಹೋಯಿತು. ಇನ್ನು ನಡೆಯತಕ್ಕ ಹೋರಾಟವು ನಮ್ಮಲ್ಲಿ ಒಂದು ಆದರ್ಶ ಸಮಾಜವು ನಿರ್ಮಾಣವಾಗಬೇಕೆಂದು. ಆ ಆದರ್ಶಸಮಾಜದ ವರ್ಣನೆಗಳನ್ನು ಮುಂದಿಟ್ಟುಕೊಂಡು ನಾವು ನಡೆಯುವದು ಒಳ್ಳೆ ಯೋಗ್ಯವಾಗುವದು. ಬೇರೆ ಬೇರೆ ಶಬ್ದಗಳಲ್ಲಿ ಆದರ್ಶ ಸಮಾಜದ ವರ್ಣನೆ ಮಾಡಿರುವರು. ಆದರೆ ಅವೆಲ್ಲವುಗಳ ಮೂಲ ಅರ್ಥವೆಲ್ಲ ಒಂದೇ ಇರುವದೆಂದು ಹೇಳಬಹುದು.

× × ×

ಒಮ್ಮೆ ಅವರು ಸ್ವರಾಜ್ಯಕ್ಕೆ ರಾಮರಾಜ್ಯ ಎಂದಿರುವರು. ಆ ಬಗ್ಗೆ ಎಷ್ಟೋ ಜನರು ಅವರನ್ನು ಟೀಕಿಸುವರು. ಇಪ್ಪತ್ತನೆ ಶತಮಾನದಲ್ಲಿ ನಮಗೆ ಅರಸೊತ್ತಿಗೆ ಏತಕ್ಕೆ, ಎಂದೆನ್ನುವರು. ಆದರೆ ರಾಮರಾಜ್ಯ ಎಂದರೆ ನ್ಯಾಯದ ರಾಜ್ಯ, ಸತ್ಯದ ರಾಜ್ಯ, ಸರಲತೆಯ ರಾಜ್ಯ, ಧರ್ಮದ ರಾಜ್ಯ, ಯಾವ ರಾಜ್ಯದಲ್ಲಿ ಯಾರಿಗೂ ಅನ್ಯಾಯವಾಗುವದಿಲ್ಲವೊ ಅಂಥ ರಾಜ್ಯ. ಕೇವಲ ಒಬ್ಬ ಅಗಸನ ಸಂಶಯಕ್ಕಾಗಿ ತನ್ನ ಸ್ವಂತ ಹೆಂಡತಿಯನ್ನೆ ತೊರೆಯಲು ಸಿದ್ಧನಾದ ರಾಮನ ರಾಜ್ಯದಲ್ಲಿ ಅನ್ಯಾಯಕ್ಕೆ ಎಡೆ ಇರಬಲ್ಲದೆ?

× × ×

ಇನ್ನೊಮ್ಮೆ ಗಾಂಧೀಜಿಯವರು ನಮಗೆ ಇಷ್ಟವಾದ ಸಮಾಜವು ಜಾತಿವರ್ಗವಿಹೀನವಿರತಕ್ಕದ್ದು ಎಂದಿರುವರು. ಜಾತಿಗಳು ನಮ್ಮಲ್ಲಿ ನೂರಾರು ಇರುವವು. ಜಾತಿಯ ವಿಷಯದಲ್ಲಿ ಬರೆದವರೊಬ್ಬರು ೮೩೨ ಜಾತಿ ಉಪಜಾತಿಗಳು ಹಿಂದುಸ್ತಾನದಲ್ಲಿರುವವೆಂದು ಹೇಳಿರುವರು! ಜಾತಿಗಳೊಡನೆ ಉಚ್ಚ ನೀಚ ಭಾವವು ತುಂಬಿಕೊಂಡಿದೆ, ವಿಷಮತೆ ಹರಡಿದೆ. ನಮ್ಮಲ್ಲಿ ಪರಕೀಯರು ಆಳುತ್ತಿರುವಾಗ ಅವರು ಈ ಭೇದಗಳ ಪೂರ್ಣ ಲಾಭವನ್ನು ಪಡೆಯಲೆತ್ನಿಸಿದರು. ಜಾತೀಯತೆಯ ಬೆಳವಣಿಗೆ ಪರಕೀಯರ ಪ್ರಯತ್ನಗಳ ಫಲವೇ ಇರುವದು. ಈ ಜಾತಿಗಳು, ಜಾತಿಭೇದಗಳು, ಜಾತಿ ಮತ್ಸರಾದಿಗಳು ಹೋಗಬೇಕು ಎಂಬುದೇ ಗಾಂಧೀಜಿಯವರ ಮನೀಷೆ. ಜಾತಿಗಳೆಲ್ಲ ಮನುಷ್ಯನಿರ್ಮಿತವಾದವುಗಳು. ದೇವರು ಗಂಡು ಹೆಣ್ಣು ಎರಡೇ ಜಾತಿಗಳನ್ನು ಮಾಡಿರುವನು. ಉಳಿದವುಗಳನ್ನೆಲ್ಲ ನಾವು ಹೋಗಲಾಡಿಸುವದು ಅವಶ್ಯ.

× × ×

ಇನ್ನು ವರ್ಗವಿಹೀನ ಸಮಾಜವೆಂದರೇನು? ಬಡವರು ಸಿರಿವಂತರು, ಇದ್ದವರು ಇಲ್ಲದವರು ಎಂದು ಎರಡು ವರ್ಗಗಳು ನಮ್ಮ ಸಮಾಜದಲ್ಲಿರುವವು. ಆರ್ಥಿಕ ವಿಷಮತೆಯೆ ಈ ವರ್ಗಗಳಿಗೆ ಕಾರಣ. ಈ ವರ್ಗಗಳ ಮೂಲಕ ಸಮಾಜದಲ್ಲಿ ಮತ್ಸರ, ದ್ವೇಷ, ಅಸೂಯೆ ಇವೆಲ್ಲ ತುಂಬಿಕೊಂಡಿವೆ. ವಿಷಮತೆಯ ತಳಹದಿಯ ಮೇಲೆ ಇರುವ ಈ ವರ್ಗಗಳು ಹೋಗಬೇಕು ಎಂಬುದೆ ಗಾಂಧೀಜಿಯವರ ಉದ್ದೇಶವು. ಸಮತಾವಾದಿಗಳು (ಕಮ್ಯುನಿಸ್ಟರು) ಸಹ ವರ್ಗರಹಿತ ಸಮಾಜವನ್ನೆ ಕಟ್ಟಬೇಕೆನ್ನುವರು. ಆದರೆ ಅವರು ಎರಡು ವರ್ಗಗಳಲ್ಲಿ ಒಂದು ವರ್ಗವನ್ನು ಹಿಂಸಾಚಾರದಿಂದ ನಷ್ಟಪಡಿಸಿ ಒಂದೇ ವರ್ಗವನ್ನು ಉಳಿಸಬೇಕೆನ್ನುವರು. ಗಾಂಧೀಜಿಯು ಹಿಂಸೆಯ ಅತ್ಯಂತ ವಿರೋಧಿಗಳಿದ್ದುದರಿಂದ ಅಹಿಂಸೆಯ ಮೂಲಕವೆ ವರ್ಗರಹಿತ ಸಮಾಜವನ್ನು ರಚಿಸುವದು ಅವಶ್ಯವೆಂದು ಪ್ರತಿಪಾದಿಸಿದರು. 'ಹಿಂಸಾರಹಿತ ಸಮತಾವಾದಿ ನಾನು' ಎಂದು ಅವರು ಹೇಳಿಕೊಳ್ಳುತ್ತಿದ್ದರು.

× × ×

ಇನ್ನು ಒಂದು ಪ್ರಸಂಗದಲ್ಲಿ ಅವರು ಕಿಸಾನ ಪ್ರಜಾರಾಜ್ಯವಿರಬೇಕೆಂದು ಪ್ರತಿಪಾದಿಸಿದರು. ಉತ್ಪಾದಕರು, ದುಡಿಯುವವರು, ಶ್ರಮಜೀವಿಗಳು ರಾಜರಿರಬೇಕು ಎಂಬುದೆ ಇದರ ಅರ್ಥ. ಎಲ್ಲ ಅಧಿಕಾರಗಳು ಶ್ರಮಜೀವಿಗಳ ಕೈಯಲ್ಲಿದ್ದರೆ ಅವರಿಗೆ ಯಾವ ಅನ್ಯಾಯವೂ ಆಗದು. ಈಗ ಆಗತಕ್ಕ ಅನ್ಯಾಯಗಳೆಲ್ಲ ಬಹುತರವಾಗಿ ಬಡವರ ಮೇಲೆ, ಶ್ರಮಜೀವಿಗಳ ಮೇಲೆ ಆಗುವವು. ಅವು ತಪ್ಪಬೇಕಾದರೆ, ಕೋಟಿಕೋಟಿಯ [illegible] ಶ್ರಮಜೀವಿಗಳಿಗೂ ಅವರಿಗೆ ತಕ್ಕ ಕೂಲಿ ಸಿಗಬೇಕಾದರೆ [illegible] ರಾಜ್ಯವೇ ಬೇಕು.

× × ×

ಇನ್ನೊಂದು ಪ್ರಸಂಗದಲ್ಲಿ ಅವರು ಸರ್ವೋದಯ ಸಮಾಜವೆ ಉತ್ತಮ ಸಮಾಜ ಎಂದಿರುವರು. ಸಮಾಜದಲ್ಲಿರುವ ಎಲ್ಲರ ಉದಯವಾಗುವಂತೆ ಸಮಾಜರಚನೆ ಮಾಡುವದೆ ಸರ್ವೋದಯ ತತ್ವದ ಉದ್ದೇಶವು. ಎಲ್ಲರ ಉದಯವೂ ಸಮಸಮಾನವಾಗಿ ಆಗಬಲ್ಲದು, ಯಾರೂ ಯಾರನ್ನೂ ನಷ್ಟಪಡಿಸುವ ಕಾರಣವಿಲ್ಲ, ಯಾರೂ ಯಾರನ್ನೂ ಶೋಷಿಸುವ ಕಾರಣವೂ ಇಲ್ಲ, ಎಂಬುದೆ ಸರ್ವೋದಯ ಧರ್ಮದ ಅರ್ಥವು.

× × ×

ವಿಧವಿಧದಿಂದ ಬಣ್ಣಿಸಿದರೂ ಒಟ್ಟಿಗೆ ತಾತ್ಪರ್ಯವೇನು? ಸತ್ಯ ಅಹಿಂಸೆಗಳ ತಳಹದಿಯ ಮೇಲೆ ಸಮಾಜವನ್ನು ರಚಿಸತಕ್ಕದ್ದು ಎಂಬುದೇ ಮಥಿತಾರ್ಥವು. ಅಂಥ ಸಮಾಜ ರಚನೆಗಾಗಿಯು ಅತ್ಯಂತ ಪಟ್ಟೋತ್ಸಾಹದಿಂದ ದುಡಿಯುವ ವೀರರು ಈಗ ಬೇಕು. ಅಂದರೆ ಮಾತ್ರ ಸಮಾಜದ ಹೆಜ್ಜೆ ಮುಂದೆ ಬೀಳಬಲ್ಲದು.

೨ ಮಾಧ್ಯಮ ಅಥವಾ ಬೋಧಕಭಾಷೆ

ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯೆ ಮಾಧ್ಯಮವಿರಬೇಕೆಂದು ಮಧ್ಯವರ್ತಿ ಸರಕಾರದವರು ಸಾರಿ ತಮ್ಮ ಶೈಕ್ಷಣಿಕ ಧೋರಣವನ್ನು ಸ್ಪಷ್ಟಪಡಿಸಿರುವರು. ಆದರೆ ಇಷ್ಟರಿಂದ ಕೆಲಸವು ಬಗೆಹರಿಯದು. ಇಡೀ ಶಿಕ್ಷಣವು ಮುಗಿಯುವ ವರೆಗೆ ಯಾವ ಕಾಲಕ್ಕೆ ಯಾವ ಮಾಧ್ಯಮವಿರಬೇಕು ಎಂಬ ಮುಂತಾದ ಮಾತುಗಳನ್ನೂ ಸ್ಪಷ್ಟ ಮಾಡುವದು ಅವಶ್ಯವಿರುವದು. ಇದನ್ನೆಲ್ಲ ಒಂದು ನಿಶ್ಚಿತವಾದ ಧ್ಯೇಯವನ್ನು ಮುಂದಿಟ್ಟುಕೊಂಡು ಮಾಡಬೇಕಾಗುವದು. ಆ ಧ್ಯೇಯವೆಂದರೆ ಹಿಂದುಸ್ತಾನದ ಜನರ ಬೌದ್ಧಿಕ ಬೆಳವಣಿಗೆ ಉತ್ತಮ ರೀತಿಯಿಂದ ಆಗುವದಲ್ಲದೆ ಆ ಬೌದ್ಧಿಕ ಬೆಳವಣಿಗೆಯು ಜ್ಞಾನ ವಿಜ್ಞಾನಗಳನ್ನೂ ಒಂದೇ ಅಳತೆಯಿಂದ ಅಳೆಯಲು ಅನುವು ಇರಬೇಕು. [illegible] ಅತ್ಯುಚ್ಚ ಶಿಕ್ಷಣವೆಂಬುದು [illegible] ಭಾಷೆಯಲ್ಲಿ ಅರ್ಥಾತ್ ರಾಷ್ಟ್ರಭಾಷೆಯಲ್ಲಿ ನಡೆಯಬೇಕು. ಇದೇ ವಿಚಾರವನ್ನು ಲಕ್ಷದಲ್ಲಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯವರು 'ಪೋಸ್ಟ್ ಗ್ರ್ಯಾಜ್ಯುಯೇಟ್' ಮತ್ತು 'ರಿಸರ್ಚ್' ಶಿಕ್ಷಣವೆಲ್ಲ ರಾಷ್ಟ್ರಭಾಷೆಯಲ್ಲಿ ನಡೆಯಬೇಕು ಎಂದು ಪ್ರತಿಪಾದಿಸಿರುವರು. ಅದೇ ಕಾಲಕ್ಕೆ ಅಂತರ್ರಾಷ್ಟ್ರೀಯ ಸಂಬಂಧಕ್ಕಾಗಿ ಆ ವಿದ್ಯಾರ್ಥಿಗಳು ಇಂಗ್ಲಿಷ ಭಾಷೆ ಕಲಿಯಬೇಕು.

× × ×

ಅದೇ ಕಾಲಕ್ಕೆ ಶೀಘ್ರವಾಗಿ ಬೆಳೆದು ನಿಂತ ಪ್ರಾಂತೀಯ ಭಾಷೆಗಳ ಬೆಳವಣಿಗೆಗೆ ಯಾವ ಆತಂಕವೂ ಬರಕೂಡದು ಎಂಬ ದೃಷ್ಟಿಯಿಂದ ಕಾಲೇಜುಗಳ ಶಿಕ್ಷಣವು ಪ್ರಾಂತೀಯ ಭಾಷೆಗಳಲ್ಲಿ ನಡೆಯತಕ್ಕದ್ದು. ಆದರೆ ಕಾಲೇಜ ವಿದ್ಯಾರ್ಥಿಗಳಿಗೆ ರಾಷ್ಟ್ರಭಾಷೆಯ ಪರಿಚಯವು ಚನ್ನಾಗಿ ಇರಬೇಕು, ಇಡೀ ಹಿಂದುಸ್ತಾನದಲ್ಲಿ ಅವರು ಯಾವದೇ ಪ್ರಾಂತಕ್ಕೆ ಹೋದರೂ ಅಲ್ಲಿಯ ಜನರೊಡನೆ ವಿಚಾರ ವಿನಿಮಯ ಮಾಡಲು ಅನುಕೂಲವಾಗಬೇಕು, ಎಂದು ರಾಷ್ಟ್ರ ಭಾಷೆಯ ಅಭ್ಯಾಸವು ಕಾಲೇಜಗಳಲ್ಲಿ ನಡೆಯಬೇಕು. ಮಾಧ್ಯಮಿಕ ಶಾಲೆಗಳಲ್ಲಿ ಪ್ರಾಂತೀಯ ಭಾಷೆಯೆ ಮಾಧ್ಯಮವಿರಬೇಕು. ಈ ರೀತಿ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ, ಆದರೆ ಪ್ರಾಂತ ಭಾಷೆಯ ಪರಿಚಯ; ಮಾಧ್ಯಮಿಕ ಶಾಲೆಗಳಲ್ಲಿ ಪ್ರಾಂತ ಭಾಷೆಯ ಮುಖಾಂತರ ಶಿಕ್ಷಣ ಆದರೆ ರಾಷ್ಟ್ರಭಾಷೆಯ ಪರಿಚಯ; ಕಾಲೇಜಗಳಲ್ಲಿ ಪ್ರಾಂತ ಭಾಷೆಯ ಮುಖಾಂತರ ಶಿಕ್ಷಣ, ಆದರೆ ರಾಷ್ಟ್ರಭಾಷೆಯ ಅಭ್ಯಾಸ; ಕಾಲೇಜೋತ್ತರ ಕಾಲದಲ್ಲಿ ರಾಷ್ಟ್ರಭಾಷೆಯಲ್ಲಿಯೆ ಶಿಕ್ಷಣ, ಆದರೆ ಇಂಗ್ಲಿಷಿನ ಅಭ್ಯಾಸ; ಈ ರೀತಿ ಸಾಗಿದರೆ ಮಾತೃಭಾಷೆ, ಪ್ರಾಂತ ಭಾಷೆ, ರಾಷ್ಟ್ರಭಾಷೆ, ಅಂತರರಾಷ್ಟ್ರೀಯ ಭಾಷೆ ಇವೆಲ್ಲವುಗಳ [illegible]

× × ×

[illegible]

× × ×

ಇನ್ನು [illegible] ಭಾಷೆಗಳಿಗೆ [illegible] ಹಿಂದುಸ್ಥಾನದಲ್ಲಿ [illegible] ಬೌದ್ಧಿಕ ಬೆಳವಣಿಗೆಗೆ [illegible] ಕಲ್ಪಿಸಿ ಆಯಾ ಮಾತೃಭಾಷೆಯ ಮುಖಾಂತರ ಜ್ಞಾನವನ್ನು ಕೊಡಲಬಹುದು. [illegible] ಬೇಕು. [illegible] ಅಲ್ಪ ಸಂಖ್ಯಾಕರಿದ್ದರೆ ಆಯಾ ಭಾಷೆ ಬೇಕಾದಷ್ಟು ಒಳ್ಳೆಯದಿದ್ದರೂ ಶಿಕ್ಷಣವನ್ನು ಕೊಡುವದು ಕಠಿಣವಾಗಿ ಬಿಡುವದು.

× × ×

ಇನ್ನು ಪ್ರಾಂತಿಕ ಭಾಷೆಗಳ ಬಗ್ಗೆ ಈ ಅಡಚಣೆ ಬರುವದಿಲ್ಲ. ಯಾವ ಪ್ರಾಂತದಲ್ಲಿ ಯಾವುದು ಪ್ರಾಂತ ಭಾಷೆ ಎಂಬುದು ಒಮ್ಮೆ ನಿಶ್ಚಿತವಾಯಿತೆಂದರೆ ಸಮಸ್ಯೆ [illegible]. ಆದರೆ ನಮ್ಮ ರಾಷ್ಟ್ರಭಾಷೆ ಹಿಂದುಸ್ಥಾನಿಯಲ್ಲಿ ಅಷ್ಟೊಂದು ಪ್ರೌಢಾವಸ್ಥೆಗೆ ಮುಟ್ಟಿದೆ ಇದ್ದುದರಿಂದ ಹಲವೊಂದು [illegible] ಆಗಬೇಕಾದೀತು. ಅಲ್ಲಿಯ ವರೆಗೆ ಈಗ ನಡೆದಿರುವಂತೆ ಇಂಗ್ಲೀಷದಲ್ಲಿಯೇ ಕಾಲೇಜೋತ್ತರ ಶಿಕ್ಷಣವನ್ನು ಸಾಗಿಸಬೇಕಾದೀತು. ಆದರೆ ಇವೆಲ್ಲ ಅಡಚಣಿಗಳು. ಒಮ್ಮೆ ಧೋರಣವನ್ನು ನಿಶ್ಚಯಿಸಿ ಅದರಂತೆ ಮುಂದುವರಿಯುತ್ತ ಹೋಗುವದೇ ಕ್ಷೇಮಕರ.

ನಿಜಾಮರಿಗೆ ಬ್ರಿ. ವಸಾಹತು ಮಂತ್ರಿಯ ಬೆಂಬಲ?

ಲಂಡನದಲ್ಲಿಯ ನಿಜಾಮರ ಏಜಂಟ [illegible] ಹೈದರಾಬಾದ ಸರಕಾರವು [illegible] ಪ್ರಸಿದ್ಧವಾದದ್ದು [illegible] ಹೈದರಾಬಾದದ ಪ್ರಶ್ನೆಯನ್ನು ಯುನೋ ರಾಷ್ಟ್ರ ಸಂಘದಲ್ಲಿ ಮುಂದಿಡಲು [illegible]

ಬ್ರಿಟಿಶ ಕಾನ್ಸರ್ವೇಟಿವ್ [illegible] ಪ್ರಾನ್ಸಿನ [illegible] ನಿಜಾಮರ [illegible] ಹೈದರಾಬಾದ ಪ್ರಶ್ನೆಯನ್ನು ಯುನೋ ರಾಷ್ಟ್ರ ಸಂಘದ [illegible]

ಬ್ರಿಟಿಶ [illegible]

[illegible]

ಕರ್ಮವೀರ

ಶ್ರೀಮುಖ್ಯಾಲುಳ್ಳ ಶಿಕ್ರಮ ವರ್ಷ ೪೬೬
ಶ್ರಾವಣ ಬ೫ ೧೦ ಸೋಮವಾರ

ಮತ್ತೆ ನಿಯಂತ್ರಣವೇ ?

ಹಿಂದುಸ್ತಾನದಲ್ಲಿ ಸರಕುಗಳ ಬೆಲೆ ಮಿತಿಮೀರಿ ಏರುತ್ತಿವೆ; ವಿನಿಯಂತ್ರಣದಿಂದ ಪರಿಸ್ಥಿತಿ ಸುಧಾರಿಸಬಹುದೆಂದು ನಂಬಿ, ಮಹಾತ್ಮರ ಸಲಹೆಯಂತೆ ಸರಕಾರದವರು ನಿಯಂತ್ರಣಗಳನ್ನು ತೆಗೆದು ಹಾಕಿದ್ದರು. ಆದರೆ ಲಾಭಬಡಕರ ದುರಾಸೆಯಿಂದ ಪರಿಸ್ಥಿತಿ ಅತ್ಯಂತ ನಿಕೃಷ್ಟವಾಗಿದೆ. ಪದಾರ್ಥಗಳ ಬೆಲೆಗಳನ್ನು ಹೇಗೆ ಸ್ತಿಮಿತಕ್ಕೆ ತರಬೇಕು, ಅತಿಪ್ರಸರಣದ ಅನರ್ಥಗಳನ್ನು ಹೇಗೆ ಹೋಗಲಾಡಿಸಬೇಕೆಂಬ ವಿವಂಚನೆ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳಿಗೆ ಉಂಟಾಗಿದೆ. ಈ ಸಂಬಂಧದಲ್ಲಿ ಸರಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಸರಕಾರದವರು ದೇಶದಲ್ಲಿಯ ಪ್ರಮುಖ ಒಂಭತ್ತು ಜನ ಅರ್ಥಶಾಸ್ತ್ರಜ್ಞರನ್ನು ದಿಲ್ಲಿಗೆ ಕರೆಸಿಕೊಂಡಿದ್ದರು. ಅವರು ಸರಕಾರಕ್ಕೆ ವರದಿಯೊಂದನ್ನು ಒಪ್ಪಿಸಿರುವರೆಂದು ತಿಳಿಯುತ್ತದೆ. ಅದರ ವಿವರಗಳು ಅಧಿಕೃತವಾಗಿ ಪ್ರಕಟಿಸಲ್ಪಟ್ಟಿಲ್ಲವಾದರೂ ಸುದ್ದಿಗಾರರ ತರ್ಕದಂತೆ ಅದರಲ್ಲಿಯ ವಿಷಯಗಳು ಮುಖ್ಯವಾಗಿ ಇಂತು ಇವೆಯೆಂದು ತಿಳಿಯುತ್ತದೆ.

ಅತಿಪ್ರಸರಣವೇ ಸರಕುಗಳ ಬೆಲೆಯು ಏರಿಕೆಗೆ ಮುಖ್ಯಕಾರಣವಾದ್ದರಿಂದ ಅದನ್ನು ತಡೆಯಲು ಧಾನ್ಯಗಳ ಮತ್ತು ಇತರ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸುವದು ಅತ್ಯವಶ್ಯವಾಗಿದೆ, ಬೆಲೆಗಳನ್ನು ಮತ್ತೆ ನಿಯಂತ್ರಿಸಿ, ಆಹಾರ ಪದಾರ್ಥಗಳ, ಬಟ್ಟೆ ಮೊದಲಾದ ಅವಶ್ಯಕ ಉಳಿದ ಸರಕುಗಳ ಹಂಚಿಕೆಯನ್ನು ನಿಯಂತ್ರಿಸುವದು, ಸಾರಿಗೆಯ ವ್ಯವಸ್ಥೆಯಲ್ಲಿ ಹೆಚ್ಚು ಸುಧಾರಣೆ ಮಾಡುವದು, ಜನತೆಯಲ್ಲಿ ಹೆಚ್ಚಿಗೆ ಉಳಿದ ಹಣವನ್ನು ಒತ್ತಾಯದ ಉಳಿಕೆಗಳಲ್ಲಿ ತೊಡಗಿಸುವದು ಅವಶ್ಯವೆಂದೂ ಈ ಅರ್ಥಶಾಸ್ತ್ರಜ್ಞರು ಸೂಚಿಸಿರುವರಂತೆ. ರಿಜರ್ವ ಬ್ಯಾಂಕಿನ ಕೇಂದ್ರಮಂಡಲದವರೂ ಹಿಂದೆ ಇದೇ ಆಶಯದ ಉಪಾಯಗಳನ್ನು ಸೂಚಿಸಿದ್ದು ವಾಚಕರ ನೆನಪಿನಲ್ಲಿರಬಹುದು. ಹೀಗೆ ಸಲಹೆ ಸೂಚನೆಗಳೇನೋ ಸರಕಾರದ ಮುಂದೆ ಬೇಕಾದಷ್ಟು ಇವೆ. ಆದರೆ ಅವುಗಳನ್ನು ಕಾರ್ಯಕ್ಷಮ ರೀತಿಯಲ್ಲಿ ಹೇಗೆ ಬಳಕೆಯಲ್ಲಿ ತರಬೇಕೆಂಬುದು ಮಹತ್ವದ ಮಾತಾಗಿದೆ.

ಸರಕುಗಳ ಹುಟ್ಟುವಳಿ ಹೆಚ್ಚಬೇಕಾದರೆ ಬಂಡವಲುದಾರರು ಹೆಚ್ಚು ಆಸ್ಥೆಯಿಂದ ತಮ್ಮ ಹಣವನ್ನು ವಿವಿಧ ಉದ್ಯೋಗಗಳಲ್ಲಿ ತೊಡಗಿಸಲು ಮುಂದೆ ಬರಬೇಕಾಗುವದು. ಆ ಬಗೆಯ ಅನುಕೂಲತೆಗಳನ್ನು ಕಲ್ಪಿಸಿ ಕೊಡುವದು ಸರಕಾರದ ಕರ್ತವ್ಯವಾಗಿದೆ. ದವಸ—ಧಾನ್ಯಗಳ ಉತ್ಪಾದನೆ ಹೆಚ್ಚಬೇಕಾದರೆ ಒಕ್ಕಲಿಗರಿಗೆ ಬೇಕಾದ ಸಹಾಯ ಸೌಕರ್ಯಗಳನ್ನು ಸರಕಾರದವರು ಒದಗಿಸಿ ಕೊಡಬೇಕಾಗುವದು. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ದವಸ-ಧಾನ್ಯಗಳ ಬೆಲೆಗಳನ್ನು ಯೋಜಿಸಬೇಕಾಗುವದು. ಅವರಿಗೆ ಅವಶ್ಯವಾಗಿ ಬೇಕಾಗುವ ಸರಕುಗಳಿಗೆ ಕಳ್ಳಪೇಟೆಯಲ್ಲಿ ಹೆಚ್ಚು ಬೆಲೆ ಕೊಡುವ ಪ್ರಸಂಗವಿರುವಾಗ ಅವರ ಉತ್ಪಾದನೆಯ ಬೆಲೆಗಳನ್ನು ಮಾತ್ರ ನಿಯಂತ್ರಿಸುವದೇಕೆ? ಕೂಲಿಕಾರರು ಹೆಚ್ಚು ದುಡಿಯಬೇಕಾದರೆ ಅವರ ಕಷ್ಟನಷ್ಟಗಳನ್ನು ನಿವಾರಿಸಬೇಕಲ್ಲದೆ, ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸುವದು ಅವರ ಕರ್ತವ್ಯವೆಂಬುದರ ಅರಿವು ಅವರಲ್ಲಿ ಉಂಟಾಗುವಂತೆ ಸರ್ವವಿಧದಿಂದ ಪ್ರಯತ್ನಿಸಬೇಕು. ಹೀಗೆ ಉತ್ಪಾದನೆಯನ್ನು ಹೆಚ್ಚಿಸುವ ಜೊತೆ ಆಯಾ ಉತ್ಪಾದಕರ ಮೇಲೆ ನಿಯಂತ್ರಣವಿರುವಂತೆ ಸರಕಾರದ ಮೇಲೆಯೂ ಇರುವದು. ಏಕೆಂದರೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡುವವರು ಸರಕಾರದವರು. ಅರ್ಥಶಾಸ್ತ್ರಜ್ಞರು ಸೂಚಿಸಿದಂತೆ ಸಾರಿಗೆ ಸಂಪರ್ಕದ ವ್ಯವಸ್ಥೆಯೂ ಸುಧಾರಣೆ ಹೊಂದಲಿಕ್ಕೆ ಬೇಕು. ಇದೆಲ್ಲ ಸಸೂತ್ರವಾಗಿ ಉತ್ಪಾದನೆ ಹೆಚ್ಚಿದ ನಂತರ ವ್ಯಾಪಾರಸ್ಥರ ಮತ್ತು ಬಳಸುವವರ ಸಹಕಾರವು ಅತ್ಯವಶ್ಯವಾಗಿದೆ. ಸದ್ಯಕ್ಕೆ ಉತ್ಪಾದನೆಯು ಅಷ್ಟೊಂದು ಕಡಿಮೆಯಾಗಿರದಿದ್ದರೂ ಧಾರಣೆಗಳು ಮಿತಿಮೀರಿ ಏರಬೇಕಾದರೆ ಕಳ್ಳಪೇಟೆಯವರ ಮತ್ತು ಸಂಗ್ರಹಕಾರರ ಕೈವಾಡವೇ ಕಾರಣವೆಂಬುದು ನಿರ್ವಿವಾದವಾಗಿದೆ. ಇದು ನಿರ್ಮೂಲವಾಗುವಂತೆ ಯೋಜಿಸಬೇಕು. ಸರಕಾರದ ಯಾವದೇ ಯೋಜನೆಯು ಯಶಸ್ವಿಯಾಗಬೇಕಾದರೆ ಜನತೆಯ ಸಹಕಾರವಂತೂ ಅತ್ಯವಶ್ಯವಾಗಿಬೇಕು. ಇದೆಲ್ಲ ಸಾಧ್ಯವಾಗದಿದ್ದರೆ ಸದ್ಯದ ಪರಿಸ್ಥಿತಿ ಸುಧಾರಿಸದು. ಶಾಂತಿ ಕಾಲದಲ್ಲಿ ನಿಯಂತ್ರಣವನ್ನು ಹೇರುವದು ಸಮಂಜಸವಾಗಲಾರದು. ಆದುದರಿಂದ ಪುನರ್ನಿಯಂತ್ರಣದಂಥ ಕೊನೆಯ ಉಪಾಯ ಕೈಕೊಳ್ಳುವ ಮೊದಲು ಉಳಿದೆಲ್ಲ ಮಾರ್ಗಗಳಿಂದ ಪರಿಸ್ಥಿತಿ ಸುಧಾರಿಸುವಂತೆ ನೋಡಿಕೊಳ್ಳಬೇಕು.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ರಾಜಾಜಿ



ಹಿಂದುಸ್ತಾನದ ಗವರ್ನರ ಜನರಲ ರಾಜಾಜಿಯವರನ್ನು ಮೈಸೂರಿನ ಮಹಾರಾಜರು ಸ್ವಾಗತಿಸುತ್ತಿರುವದು.

ವಾರದ ಸಿಂಹಾವಲೋಕನ

ಗವರ್ನರ ಜನರಲರ ಸಂಚಾರ

ಗವರ್ನರ ಜನರಲ್ ಮಾನ್ಯ ರಾಜಗೋಪಾಲಾಚಾರಿಯವರು ಕಳೆದ ವಾರ ಬೆಂಗಳೂರು ಮೈಸೂರು, ತ್ರಿವೇಂದ್ರಮ, ಮದರಾಸು ಮೊದಲಾದ ಭಾಗಗಳನ್ನು ಸಂಚರಿಸಿದರು. ಮಾನ್ಯ ರಾಜಾಜಿಯವರು ಗವರ್ನರ ಜನರಲ್‌ರೆಂದು ಇದೇ ಮೊದಲ ಸಲ ಈ ಭಾಗಕ್ಕೆ ಭೆಟ್ಟಿ ಕೊಟ್ಟದ್ದರಿಂದ ಎಲ್ಲೆಲ್ಲಿಯೂ ಅವರಿಗೆ ಸಂಭ್ರಮದ ಸ್ವಾಗತ ಮಾಡಲಾಯಿತು. ಮಾನಪತ್ರಗಳು ಸಮರ್ಪಿಸಲ್ಪಟ್ಟವು. ಅವರ ಉಪದೇಶಾಮೃತವನ್ನು ಜನರು ಒಳ್ಳೆ ಆಸ್ಥೆಯಿಂದ ಪಾನಮಾಡಿದರು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಮಹಾತ್ಮರ ಭಾವಚಿತ್ರದ ಅನಾವರಣವನ್ನೂ ಅವರು ಮಾಡಿದರು. ಮಹಾತ್ಮರ ಭಾವಚಿತ್ರಗಳನ್ನು ಪ್ರದರ್ಶಿಸಿ ಅವರು ಉಪದೇಶಿಸಿದಂತೆ ನಡೆಯದಿದ್ದರೆ ರಾಷ್ಟ್ರಘಾತ ಮಾಡಿದಂತೆಯೆಂದೂ ಆಲಸ್ಯವನ್ನು ತೊರೆದು ವಿಧಾಯಕ ಕಾರ್ಯವನ್ನು ಯಶಸ್ವಿಗೊಳಿಸಿ ಭಾರತದ ಭಾಗ್ಯವನ್ನು ಹೆಚ್ಚಿಸಿ ಜಗತ್ತಿನಲ್ಲಿ ಇದು ಆದರ್ಶ ರಾಷ್ಟ್ರವಾಗುವಂತೆ ನೋಡಿಕೊಳ್ಳಬೇಕೆಂದೂ ಹೇಳಿದರು. ಶಿಕ್ಷಣದಲ್ಲಿ ಮಾತೃಭಾಷೆಯ ಸ್ಥಾನವನ್ನು ಪ್ರಸ್ತಾಪಿಸುತ್ತ ತಾಯಿಯೇ ಮಕ್ಕಳಿಗೆ ಮಾತೃಭಾಷೆಯ ಜ್ಞಾನವನ್ನು ಮಾಡಿಕೊಡಬೇಕೆಂದೂ ಇದಕ್ಕೆ ಒತ್ತಾಯ ಬೇಡೆಂದೂ ಹೇಳಿದರು. ಭಾಷೆಗೆ ರಾಜಕೀಯ ಸ್ವರೂಪ ಕೊಟ್ಟು ಬಡಿದಾಟ ಹೆಚ್ಚಿಸುವದು ಯೋಗ್ಯವಲ್ಲೆಂದೂ ಅಭಿಪ್ರಾಯ ಪಟ್ಟರು. ಕರ್ನಾಟಕ ಏಕೀಕರಣದ ಬಗ್ಗೆ ಕೇಳಿದಾಗ ಮುಖ್ಯವಾದ ಸಮಸ್ಯೆಗಳ ಪರಿಹಾರವಾದ ಮೇಲೆ ಈ ಪ್ರಶ್ನೆಯತ್ತ ಗಮನಿಸಲಾಗುವದು; ಈಗ ಎಲ್ಲರೂ ದೇಶದ ರಕ್ಷಣೆ ಮತ್ತು ಭದ್ರತೆಯ ಬಗ್ಗೆ ಗಮನಿಸಬೇಕೆಂದೂ ಉಪದೇಶಿಸಿದರು. ಮಹಾತ್ಮರ ಆದೇಶಕ್ಕನುಸಾರವಾಗಿ ಎಲ್ಲರೂ ಪ್ರೇಮದಿಂದ ಇದ್ದು ರಾಷ್ಟ್ರದ ಸಾರ್ವಾಂಗಿಕ ಅಭಿವೃದ್ಧಿಯನ್ನು ಮಾಡಬೇಕೆಂಬುದೇ ಅವರೀ ಸಂಚಾರದಲ್ಲಿಯ ಉಪದೇಶದ ಸಾರಸರ್ವಸ್ವವೆಂದು ಹೇಳಬಹುದು.

ಬ್ರಿಟಿಶರ ಕುತಂತ್ರ

ಬ್ರಿಟಿಶರು ಭಾರತದಿಂದ ಕಾಲ್ದೆಗೆಯುವಾಗ ಸಂಸ್ಥಾನಗಳಿಗೆ ಸಾರ್ವಭೌಮಾಧಿಕಾರವಿದೆಯೆಂದು ಸಾರಿದ್ದು, ಒಡಕು ಹುಟ್ಟಿಸಿ ಆಳುವ ಅವರ ದುರ್ನೀತಿಗೆ ಉಚಿತವೇ ಆಗಿದೆ. ಬ್ರಿಟಿಶರ ಈ ಕುತಂತ್ರವನ್ನು ಹಿಂದುಸ್ತಾನದ ಗವರ್ನರ ಜನರಲ್‌ರಾದ ರಾಜಾಜಿಯವರು ಎರ್ನಾಕುಲಂದಲ್ಲಿಯ ತಮ್ಮ ಭಾಷಣದಲ್ಲಿ ಬಯಲಿಗಿಟ್ಟರು. ಇಪ್ಪತ್ತು ವರುಷಗಳ ಹಿಂದೆ ಪರಕೀಯ ಬ್ರಿಟಿಶ ಪ್ರಭುತ್ವದ ಉಚ್ಚಾಟನೆಗಾಗಿ ಆಂದೋಲನ ನಡೆದಾಗ ಒಂದಿಲ್ಲೊಂದು ರೂಪದಲ್ಲಿ ತಮ್ಮ ಪ್ರಭುತ್ವವು ಹಿಂದುಸ್ತಾನದಲ್ಲಿ ಉಳಿಯುವದೆಂದು ಅವರಿಗೆ ಆಸೆ ಇದ್ದಿತು. ಅಂತೆಯೆ ಆಗಿನ ಕಾಯದೆ ಪಂಡಿತರೂ ವೈಸರಾಯರೂ ಹಿಂದುಸ್ತಾನ ಕೇಂದ್ರ ಸರಕಾರದ ಪ್ರಭುತ್ವವು ಸಂಸ್ಥಾನಗಳ ಮೇಲೆ ಇರತಕ್ಕದ್ದೇ ಎಂದು ವಾದಿಸಿದ್ದಲ್ಲದೆ ಸಂಸ್ಥಾನಗಳು ಎಂದೂ ಸಾರ್ವಭೌಮಾಧಿಕಾರವನ್ನು ಪಡೆದಿಲ್ಲ, ಅವುಗಳಿಗೆ ಅದು ಸಿಕ್ಕಲಾರದು ಎಂದು ಘಂಟಾಘೋಷವಾಗಿ ಸಾರಿದ್ದರು. ಪ್ರತ್ಯಕ್ಷವಾಗಿ ಅಧಿಕಾರವನ್ನು ವರ್ಗಾಯಿಸುವ ಪ್ರಸಂಗ ಬಂದಾಗ ಮಾತ್ರ ಬ್ರಿಟಿಶರು ಈ ಮಾತನ್ನು ಮರೆತು ಸಂಸ್ಥಾನಗಳಿಗೆ ಸಾರ್ವಭೌಮಾಧಿಕಾರವಿದೆಯೆಂದು ಸಾರಿ ವಿಷ ಬೀಜವನ್ನು ನಟ್ಟು ಹೋದರು. ಆದರೆ ಈ ಅವಿಚಾರಿ ತತ್ವಕ್ಕೆ ಮಣ್ಣುಗೊಟ್ಟು ಭಾರತದ ಐಕ್ಯವನ್ನು ಪ್ರಸ್ಥಾಪಿಸಲು ನರೇಂದ್ರರು ಸಹಕರಿಸಿದ್ದಕ್ಕೆ ಭಾರತೀಯರು ಅವರಿಗೆ ಕೃತಜ್ಞರಾಗಿರುವರು. ತಮ್ಮ ಪ್ರಭುತ್ವದ ಕೂಡ ಭಾರತದಲ್ಲಿ ಐಕ್ಯ ಪ್ರಸ್ಥಾಪಿತವಾಗಿದ್ದು ತಾವು ಅದನ್ನು ಬಿಟ್ಟು ಹೋಗುವಾಗ ಆ ಐಕ್ಯವನ್ನು ನಾಶ ಮಾಡಬೇಕೆಂಬ ಕುವಿಚಾರದಿಂದ ಬ್ರಿಟಿಶ ಕಾಯದೆ ಪಂಡಿತರು ಹೀಗೆ ಮಾಡಿದರೆಂದು ಹೇಳಬಹುದು ಎಂದು ಮುಂತಾಗಿಯೂ ರಾಜಾಜಿಯವರು ಅಭಿಪ್ರಾಯ ಪಟ್ಟರು ಆದರೆ ಬ್ರಿಟಿಶರ ಈ ಕುತಂತ್ರ ಕಾರ್ಯಕಾರಿಯಾಗದಿದ್ದುದು ಹಿಂದುಸ್ತಾನದ ಮಹತ್ ಭಾಗ್ಯವೆಂದೇ ಹೇಳಬೇಕಾಗುವದು.

ಅನುಕರಣೀಯ

ಮದರಾಸ ಸರಕಾರವು ಬರುವ ಅಕ್ಟೋಬರ ತಿಂಗಳಿಂದ ಪ್ರಾಂತದಲ್ಲಿ ಇನ್ನುಳಿದ ಎಂಟು ಜಿಲ್ಹೆಗಳಲ್ಲಿ ಮತ್ತು ಮದರಾಸು ನಗರದಲ್ಲಿ ಮದ್ಯಪಾನವನ್ನು ಪ್ರತಿಬಂಧಿಸಬೇಕೆಂದು ಶಾಸನಸಭೆಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಪ್ರಚಂಡ ಬಹುಮತದಿಂದ ಸೂಚಿಸಲಾಗಿದೆ. ಶಾಸನಸಭೆಯಲ್ಲಿ ಇದರ ವಿಚಾರವಾಗಿ ಮಸೂದೆ ಸ್ವೀಕೃತವಾದರೆ, ಇಡೀ ಪ್ರಾಂತವು ನಿರ್ಮಾದಕ ಪ್ರದೇಶವಾಗುವದು. ಮದ್ಯದಿಂದ ಸರಕಾರಕ್ಕೆ ಬಹಳಷ್ಟು ಉತ್ಪನ್ನ ಬರುವದೆಂಬುದು ನಿಜ. ಆದರೆ ಜನತೆಯ ನೀತಿಮತ್ತೆಯನ್ನು ಕಡೆಗಣಿಸಿ ಅಬಕಾರಿ ಉತ್ಪನ್ನವನ್ನು ಪಡೆಯುವದು ಸುಸಂಸ್ಕೃತ ರಾಷ್ಟ್ರಕ್ಕೆ ಒಗ್ಗದು. ಇದನ್ನು ನೆನೆದೇ ಮಹಾತ್ಮಾ ಗಾಂಧಿಯವರು ತಮ್ಮ ವಿಧಾಯಕ ಕಾರ್ಯಕ್ರಮಗಳಲ್ಲಿ ಮದ್ಯಪಾನ ಪ್ರತಿಬಂಧಕ್ಕೆ ಅಗ್ರಸ್ಥಾನ ಕೊಟ್ಟಿದ್ದರು. ಕುಡುಕರು ಈ ಬಗ್ಗೆ ಎಷ್ಟೊಂದು ಕೂಗೆಬ್ಬಿಸಿದರೂ ತಮ್ಮ ಪಾನಸ್ವಾತಂತ್ರ್ಯದ ಮೇಲೆ ಗದಾಪ್ರಹಾರವಾದಂತಾಗುವದೆಂದು ಎಷ್ಟೊಂದು ಆಕ್ರೋಶ ಮಾಡಿದರೂ ಸಮಾಜ ಸ್ವಾಸ್ಥ್ಯಕ್ಕೆ ಅತ್ಯವಶ್ಯವಾಗಿರುವ ಈ ಸುಧಾರಣೆಯನ್ನು ಕಾಂಗ್ರೆಸ ಸರಕಾರ ಕೈಕೊಂಡದ್ದು ಅಭಿನಂದನೀಯವಾಗಿದೆ. ಎಲ್ಲ ಕಾಂಗ್ರೆಸ ಸರಕಾರಗಳು ಈ ತತ್ವವನ್ನೊಪ್ಪಿಕೊಂಡರೂ ಉತ್ಪನ್ನ ಕಡಮೆಯಾಗುವದೆಂದು, ಕುಡುಕರ ವಿರೋಧ ಹೆಚ್ಚುವದೆಂದು ಒಮ್ಮೆಲೆ ಈ ಅವಶ್ಯಕ ಸುಧಾರಣೆಯನ್ನು ಕೈಕೊಳ್ಳಲಾರದವಾಗಿವೆ. ಕ್ರಮಶಃ ಮದ್ಯಪಾನವನ್ನು ಪ್ರತಿಬಂಧಿಸಬೇಕೆಂದು ಇಟ್ಟುಕೊಂಡಿವೆ. ಆದರೆ ಮದರಾಸ ಪ್ರಾಂತವು ಸಂಪೂರ್ಣ ಮದ್ಯಪಾನವನ್ನು ಪ್ರತಿಬಂಧಿಸಿ ಇಡೀ ರಾಷ್ಟ್ರಕ್ಕೇ ಮಾರ್ಗದರ್ಶನ ಮಾಡಿಕೊಡಲಣಿಯಾದುದು ಅಭಿನಂದನೀಯ ಮತ್ತು ಅನುಕರಣೀಯವಾಗಿದೆ. ಕಾಂಗ್ರೆಸ್ಸಿನ ಈ ಧ್ಯೇಯವು ಸಾಧ್ಯವಾಗಬೇಕಾದರೆ, ಬಹಳ ದಿನಗಳಿಂದ ಬೇರೂರಿದ ಈ ದುಷ್ಟ ಚಟವು ಇಲ್ಲದಂತಾಗಬೇಕಾದರೆ ಬರಿ ಕಾಯದೆ ಕಾರ್ಯಕಾರಿಯಾಗಲಾರದು. ಜನತೆಯ ಹಾರ್ದಿಕ ಸಹಕಾರವೂ ಅತ್ಯವಶ್ಯ. ಆ ಬಗೆಯ ಸಹಕಾರವನ್ನು ಮದರಾಸ ಪ್ರಾಂತದ ಜನರು ಸರಕಾರಕ್ಕೆ ನೀಡಿ ಮದ್ಯಪಾನವನ್ನು ನಿರ್ಮೂಲಗೊಳಿಸಿ ಮಹಾತ್ಮರ ಆತ್ಮಕ್ಕೆ ಶಾಂತಿಯುಂಟುಮಾಡಿದ ಶ್ರೇಯಸ್ಸಿಗೆ ಪಾತ್ರರಾಗಬೇಕೆಂದುದು ಕರ್ತವ್ಯವಾಗಿದೆ.

ಮುದ್ರಣ ಸ್ವಾತಂತ್ರ್ಯ

ಜನಸಾಮಾನ್ಯದಲ್ಲಿ ತಮ್ಮ ಅನ್ಯಾಯದ ಆಡಳಿತದ ವಿರುದ್ಧ ಪ್ರಚಾರವಾಗಿ ತಮ್ಮ ಪ್ರಭುತ್ವಕ್ಕೆ ಎಲ್ಲಿ ಲೋಪ ಬರುವದೋ ಎಂದು ಬ್ರಿಟಿಶ ಸರಕಾರವು ಮುದ್ರಣ ಕಾಯದೆಯನ್ನು ಬಲಗೊಳಿಸಿ ಪ್ರಕಟನೆಯ ಮೇಲೆ ಬಗೆ ಬಗೆಯ ನಿರ್ಬಂಧಗಳನ್ನು ಹೇರಿದ್ದರು. ಆದರೆ ಹಿಂದುಸ್ತಾನವು ಸ್ವತಂತ್ರವಾಗಿ ಪ್ರಜಾಪ್ರಾತಿನಿಧಿಕ ಸರಕಾರವು ಇಲ್ಲಿ ಅಸ್ತಿತ್ವದಲ್ಲಿ ಬಂದ ಕೂಡಲೆ ಈ ಮುದ್ರಣ ಕಾಯದೆಯ ಸಂಬಂಧದಲ್ಲಿ ವಿಚಾರ ಮಾಡಿ ಸರಕಾರಕ್ಕೆ ವರದಿ ಮಾಡಬೇಕೆಂದು ಸಮಿತಿಯೊಂದನ್ನು ನೇಮಿಸಲಾಗಿತ್ತು. ಆ ಸಮಿತಿ ಈಗ ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿದ್ದು ಅದರ ವಿಚಾರವನ್ನು ಸರಕಾರ ನಡೆಸಿದೆಯಂತೆ. ೧೯೩೧ ನೇ ಇಸ್ವಿಯ ಮುದ್ರಣ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಆ ಸಮಿತಿಯು ಸೂಚಿಸಿದೆಂದು ತಿಳಿಯುತ್ತದೆ. ಈ ಕಾಯದೆಯು ಎಷ್ಟೊಂದು ಘಾತಕ ಮತ್ತು ಪತ್ರಿಕಾಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹದಾಗಿದೆಂಬುದು ಅಂದಿನಿಂದ ಇಂದಿನ ವರೆಗೆ ಅದರ ವಿರುದ್ಧ ನಡೆದ ನಿಷೇಧ ಪ್ರದರ್ಶಕ ಅಭಿಪ್ರಾಯಗಳಿಂದ ಸ್ಪಷ್ಟವಾಗಿದೆ. ಸಮಿತಿಯು ಮಾಡಿದ ಈ ಸೂಚನೆಯು ಗಮನಾರ್ಹವಾಗಿದ್ದು ಸರಕಾರದವರು ಕೂಡಲೆ ಆ ಕಾಯಿದೆಯನ್ನು ರದ್ದುಪಡಿಸುವದು ಕರ್ತವ್ಯವಾಗಿದೆ. ಯಾವದೊಂದು ಪತ್ರಿಕೆಯ

—೧೦ನೆಯ ಪುಟಕ್ಕೆ

ಚರಖಾ ಜಯಂತಿ

ಹಲವಾರು ವರುಷಗಳಿಂದ ನಾವು ಬಾಪೂವಿನ ಜಯಂತ್ಯುತ್ಸವವನ್ನು ಹಿಂದುಸ್ತಾನದ ಪ್ರತಿಯೊಂದು ಭಾಗದಲ್ಲಿ ಆಚರಿಸುತ್ತ ಬಂದಿದ್ದೇವೆ. ಈಯೆಲ್ಲ ವರುಷ ಅವರು ನಮ್ಮೊತ್ತಿದ್ದರು. ಅವರ ಮರಣದ ತರುವಾಯ ನಾವು ಅದನ್ನು ಆಚರಿಸುತ್ತಿರುವದು ಇದೇ ಮೊದಲನೆಯ ಸಲ.

ಈ ದಿನೋತ್ಸವದ ಆಚರಣೆಗೆ ಗಾಂಧೀಜಿ ತಮ್ಮ ಒಪ್ಪಿಗೆ ಕೊಟ್ಟಿದ್ದರು. ಅವರು ಒಂದು ಬರೆಹದಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

"ನನ್ನ ಜನ್ಮದಿನೋತ್ಸವಕ್ಕೆ ನಾನು ಖಾದೀ ಸಪ್ತಾಹವೆಂದು ಕರೆಯುತ್ತಿರುವೆ. ಜನನ ಮರಣಗಳು ಜೊತೆ ನನ್ನ ಮರಣದ ನಂತರ ಈ ವಾರ್ಷಿಕೋತ್ಸವವನ್ನು ಮರೆತುಬಿಟ್ಟಿದ್ದಾದರೆ ನನಗೆ ವಿಷಾದವೆನಿಸುವದು. ಅಂತೆಯೇ ನಾನು ನನ್ನ ಜಯಂತ್ಯುತ್ಸವವನ್ನು ಖಾದೀ ಸಪ್ತಾಹದ ರೂಪದಲ್ಲಿ ಆಚರಿಸುವದಕ್ಕೆ ನಾನು ಪ್ರೋತ್ಸಾಹ ಕೊಟ್ಟೆ."

ಹಿಂದುಗಡೆ ಅವರು ಖಾದೀ ಸಪ್ತಾಹವೆಂಬದನ್ನು ಚರಖಾ ಜಯಂತಿ ಅಂದರೆ ರಾಟಿಯ ಮಹೋತ್ಸವ ಎಂದು ಕರೆದರು. ೧೯೪೬ರಲ್ಲಿ 'ಹರಿಜನ'ದಲ್ಲಿ ಮತ್ತೆ ಬರೆಯುತ್ತ ಅವರು ಹೀಗೆ ಅಭಿಪ್ರಾಯಪಟ್ಟರು.

"ನನಗೆ ಗೊತ್ತಿದ್ದ ಮಟ್ಟಿಗೆ ನನ್ನ ಜಯಂತಿ ಮತ್ತು ಚರಖಾಜಯಂತಿ ಒಂದೇ ತಾರೀಕಿಗೆ ಮೇಳಗೊಳ್ಳುವ ಮೊದಲು ಅದು ಎಂದೂ ಆಚರಿಸಲ್ಪಡುತ್ತಿರಲಿಲ್ಲ. . . ಇಲ್ಲಿ ಹಿಂದುಸ್ತಾನದಲ್ಲಿ ಚರಖಾ ಜಯಂತಿಯ ಸಂಗಡ ಅದನ್ನು ಕೂಡಿಸಲಾಯಿತು."

ಅದುದರಿಂದ ಜಯಂತಿಯನ್ನು ಆಚರಿಸುವಾಗ ಜನರು ಗಾಂಧೀಜಿಯ ಆಸೆ ಆಕಾಂಕ್ಷೆಗಳನ್ನು ಈಡೇರಿಸತಕ್ಕದ್ದು. ಚರಖಾಸಂಘವು ಈ ಸಂಬಂಧದಲ್ಲಿ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿದೆ.

"ಗಾಂಧೀಜಿ ಅತ್ಯಂತ ಆಳವಾಗಿ ಪ್ರೀತಿಸುತ್ತಿದ್ದ ಮತ್ತು ತಾವೇ ಅದಕ್ಕೆ ಚರಖಾ ದ್ವಾದಶಿ ಎಂದು ನಾಮಕರಣವಿತ್ತು ಅದರ ಮಹತ್ವವನ್ನು ಹೆಚ್ಚಿಸಿದ್ದ ಚರಖಾ ಜಯಂತಿಯನ್ನು ಮುಂದೆಯೂ ಆಚರಿಸತಕ್ಕದ್ದೆಂದು ವಿಶ್ವಸ್ತಮಂಡಳದ ಅಭಿಪ್ರಾಯವಿದೆ. ಮತ್ತು ಚರಖಾದ ಸಂದೇಶದಲ್ಲಿ ಯಾರಿಗೆ ವಿಶ್ವಾಸವಿದೆಯೋ ಅವರು ಈ ಮೊದಲಿಗಿಂತ ಹೆಚ್ಚು ಪ್ರತ್ಯಕ್ಷ ಕಾರ್ಯ ಮಾಡಿ ಅದನ್ನು ಆಚರಿಸತಕ್ಕದ್ದು. ಆದುದರಿಂದ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಚರಖಾ ಜಯಂತಿಗೆ ಒಂದು ಶಾಶ್ವತವಾದ ಸ್ಥಾನವನ್ನು ಕೊಡಬೇಕೆಂದು ಚರಖಾ ಸಂಘವು ಜನತೆಗೆ ಬಿನ್ನವಿಸಿಕೊಳ್ಳುತ್ತದೆ."

ಪ್ರತಿಯೊಂದು ಮನೆಯಲ್ಲಿ ಮತ್ತು ಪ್ರತಿಯೊಂದು ಹಳ್ಳಿಯಲ್ಲಿ ಈ ಉತ್ಸವವನ್ನು ಗಾಂಧೀಜಿಯವರು ಬಯಸಿದಂತೆ ಆಚರಿಸುವದು ಅವರ ಶಾಶ್ವತ ಸ್ಮಾರಕದ ಮಾರ್ಗಗಳಲ್ಲಿ ಒಂದು ಮತ್ತು ಘನವಾದ ಮಾರ್ಗವು. ಶ್ರೇಷ್ಠ ವಿಭೂತಿಗಳ ಸ್ಮಾರಕವೆಂದರೆ, ಅದನ್ನು ಶಾಶ್ವತಗೊಳಿಸುವದೆಂದರೆ ಅವರು ಬೋಧಿಸಿದ ಮತ್ತು ಆಚರಿಸಿದ ತತ್ವಗಳಂತೆ ನಡೆಯುವದೇ ಆಗಿದೆ. ಗಾಂಧೀಜಿಗೆ ಅತ್ಯಂತ ಪ್ರಿಯವಾದ ವಸ್ತು ಎಂದರೆ ಚರಖಾ ಎಂಬುದು ನಮ್ಮೆಲ್ಲರಿಗೆ ಗೊತ್ತು. ಅವರ ನಿಷ್ಠೆಯ ಪ್ರತೀಕವೇ ಅದಾಗಿತ್ತೆಂಬುದೂ ನಮಗೆಲ್ಲ ಗೊತ್ತಿದೆ.

ಈ ವರುಷ ಸಪ್ಟಂಬರ ೨೬ ರಿಂದ ಅಕ್ಟೋಬರ ೨ ರ ವರೆಗೆ (ಎರಡು ದಿನ ಸೇರಿ) ಜನರು ಈ ಜಯಂತಿಯನ್ನು ಆಚರಿಸಬೇಕೆಂದು ಚರಖಾ ಸಂಘವು ಅಪೇಕ್ಷಿಸುತ್ತದೆ. ಆ ದಿನ ಮಾಡತಕ್ಕ ಕಾರ್ಯಕ್ರಮ ಇಂತಿರಬೇಕೆಂದು ಅದು ಸೂಚಿಸಬಯಸುತ್ತದೆ.

೧) ಈ ಸಪ್ತಾಹದಲ್ಲಿ ಶಕ್ಯವಿದ್ದಷ್ಟು ನೂಲು ತೆಗೆಯತಕ್ಕದ್ದು.

೨) ಸಾಮೂಹಿಕ ಸೂತ್ರಯಜ್ಞದ ಸಂಘಟನೆ, ನೂಲುವ ಸ್ಪರ್ಧೆ, ಅಖಂಡ ಸೂತ್ರಯಜ್ಞ, ಇಂತಿಷ್ಟು ನೂಲು ತೆಗೆದೇ ತೀರುವ ನಿರ್ಧಾರ ಮತ್ತು ಉಳಿದ ಮಾರ್ಗಗಳಿಂದ ಸೂತ್ರಯಜ್ಞವನ್ನು ನಡೆಸತಕ್ಕದ್ದು. ಸ್ವತಃ ತಯಾರಿಸಿದ ಹಂಜಿಗಳಿಂದಲೇ ಇಂಥ ಸೂತ್ರಯಜ್ಞವನ್ನು ನಡೆಸತಕ್ಕದ್ದೆಂದು ಸೂಚಿಸಲಾಗಿದೆ ಶಕ್ಯವಿದ್ದರೆ ನೇಯುವ ಕಾರ್ಯಕ್ರಮವನ್ನೂ ಇಟ್ಟುಕೊಳ್ಳತಕ್ಕದ್ದು.

೩) ರಾಟಿಯಿಂದ ನೂಲು ತೆಗೆಯುವದು ಮತ್ತು ಕೈಮಗ್ಗಗಳಲ್ಲಿ ನೇಯುವದು ಮೊದಲಾದ ವಿಷಯಗಳ ಬಗ್ಗೆ ವಾಚನ, ಭಾಷಣ, ಚರ್ಚೆ ಮೊದಲಾದವುಗಳನ್ನು ಏರ್ಪಡಿಸತಕ್ಕದ್ದು. ಸದ್ಯದ ಸಾಮಾಜಿಕ ಮತ್ತು ಆರ್ಥಿಕ ರಚನೆಯಲ್ಲಿ, ಗ್ರಾಮೋದ್ಧಾರ ಕಾರ್ಯದಲ್ಲಿ ಚರಖಾದ ಮಹತ್ವವನ್ನು ಜನತೆಗೆ ತಿಳಿಸಿಕೊಡತಕ್ಕದ್ದು. ಪರಿಹಾರ ಕಾರ್ಯದಲ್ಲಿ ಮತ್ತು ಖಾದಿ ಸ್ವಾವಲಂಬನ ಧ್ಯೇಯದಲ್ಲಿ ಖಾದಿಗಿರುವ ಸ್ಥಾನಮಾನ ನೇಯ್ಗೆಯ ಉನ್ನತಿಯಲ್ಲಿ ಅಷ್ಟೇ ಅಲ್ಲದೆ ಉಳಿದ ಉದ್ಯೋಗ ಧಂದೆಗಳಲ್ಲಿಯೂ ಅದು ಸಹಾಯಕವಾಗುವದರ ಮಹತ್ವವನ್ನು ಮತ್ತು ಎಲ್ಲ ವಿಧಾಯಕ ಕಾರ್ಯಕ್ರಮಗಳ ಕೇಂದ್ರ-ಬಿಂದು ಖಾದಿಯೆಂಬುದನ್ನು ತಿಳಿಸಿಕೊಡತಕ್ಕದ್ದು. ಚರಖಾದ 'ಶೈಕ್ಷಣಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಹತ್ವ, ಸ್ವಾಭಿಮಾನವನ್ನು ಹೆಚ್ಚಿಸಲು ಸ್ವಾವಲಂಬನದ ಪಾಠವನ್ನು ಬೋಧಿಸಲು ಮತ್ತು ಮನಸ್ಸನ್ನು ಉನ್ನತಗೊಳಿಸಿ ಶೀಲ ಸಂವರ್ಧನೆ ಮಾಡಲು ಅದರಲ್ಲಿರುವ ಮಹತ್ವ ಮುಂತಾದ್ದನ್ನೆಲ್ಲ ವಿವರಿಸಿ ಹೇಳತಕ್ಕದ್ದು.

೪) ಚರಖಾ ಸಂದೇಶವನ್ನು ಜನತೆಯಲ್ಲಿ ಬೀರಲು ಶಕ್ಯವಿದ್ದಷ್ಟು ಹೆಚ್ಚು ಹಳ್ಳಿಗಳಿಗೆ ಹೋಗತಕ್ಕದ್ದು.

೫) ಹಳ್ಳಿಗಳಲ್ಲಿ ಸ್ವಚ್ಛತೆ ಮತ್ತು ಕಸಗುಡಿಸುವ ಕಾರ್ಯಕ್ರಮವನ್ನು ಸಂಘಟಿಸತಕ್ಕದ್ದು.

೬) ಚರಖಾ ಸಂಘದ ಪ್ರತಿಯೊಂದು ಶಾಖೆಯು ಹಳ್ಳಿಗಳ ಸ್ವಚ್ಛತೆಯ ಕಾರ್ಯಕ್ರಮವನ್ನು ಸಂಘಟಿಸತಕ್ಕದ್ದು. ತನ್ನ ಭಾಗದಲ್ಲಿಯ ಕನಿಷ್ಠ ೧೦ ಹಳ್ಳಿಗಳಲ್ಲಿಯಾದರೂ ಚರಖಾ ದುರಸ್ತಿ, ನೇಯುವದರ ಪ್ರಚಾರ ಮತ್ತು ಪ್ರಾರ್ಥನಾ ಸಭೆಗಳನ್ನು ಏರ್ಪಡಿಸತಕ್ಕದ್ದು. ಉಳಿದ ವಿಧಾಯಕ ಕಾರ್ಯಕರ್ತರ, ಕಾಂಗ್ರೆಸ ಸಮಿತಿಗಳ ಮತ್ತು ಉಳಿದ ಸಂಸ್ಥೆಗಳ ಸಹಾಯವನ್ನೂ ಈ ಕಾರ್ಯದಲ್ಲಿ ಪಡೆಯತಕ್ಕದ್ದು.

೭) ಚರಖಾ ಸಂಘಕ್ಕೆ ಶಕ್ಯವಿದ್ದಷ್ಟು ಹೆಚ್ಚು ಸಹಯೋಗಿ ಸದಸ್ಯರನ್ನು ಮಾಡಿಕೊಳ್ಳತಕ್ಕದ್ದು. (ಚರಖಾ ಸಂಘದ ಸಹಯೋಗಿ ಸದಸ್ಯನು ಪ್ರತಿ ತಿಂಗಳು ಅ. ಭಾ. ಚ. ಸಂಘಕ್ಕೆ ಸ್ವತಃ ನೂತ ಅರ್ಧ ಲಡಿ ಅಂದರೆ ೩೨೦ ಸುತ್ತು ನೂಲನ್ನು ಕೊಡತಕ್ಕದ್ದು.)

ಹಿಂದೆ ಚರಖಾ ಸಂಘದ ವರ್ಗಣಿಯೆಂದು ಲಡಿಗಳನ್ನು ಸಂಗ್ರಹಿಸಲಾಗುತ್ತಿದ್ದಿತು. ಆದರೆ ಈ ವರುಷ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣವನ್ನು ಸಂಗ್ರಹಿಸುವದಿದ್ದುದರಿಂದ ನೂಲು ಕೊಡಿರೆಂದು ಕೇಳಿಕೊಳ್ಳಬಾರದೆಂದು ನಿರ್ಧರಿಸಲಾಗಿದೆ. ಚರಖಾ ಸಪ್ತಾಹದಲ್ಲಿ ಜನರು ಗಾಂಧೀ ನಿಧಿಗೆ ಹಣವನ್ನುಸಂಗ್ರಹಿಸುವ ಕಾರ್ಯವನ್ನು ಒಳ್ಳೆ ಆಸ್ಥೆಯಿಂದ ಮಾಡತಕ್ಕದ್ದೆಂದು ಕೋರಲಾಗಿದೆ. ಆದರೆ ಕಾರ್ಯಕರ್ತರು ಚರಖಾದ ಪ್ರಚಾರ ಕಾರ್ಯದಲ್ಲಿ ಹೆಚ್ಚು ಗಮನ ಕೊಡತಕ್ಕದ್ದು. ಸಹಯೋಗಿ ಸದಸ್ಯರನ್ನು ಮಾಡಿಕೊಳ್ಳುವ ಕಾರ್ಯಕ್ರಮ ಇದೇ ವರ್ಷ ಕೈಕೊಳ್ಳಲಾಗಿದೆ. ಗಾಂಧೀಜಿಯ ಧ್ಯೇಯಕ್ಕನುಗುಣವಾಗಿ, ಚರಖಾದ ಮುಖಾಂತರ ಅಹಿಂಸೆಯ ತಳಹದಿಯಲ್ಲಿ ಸಮಾಜವನ್ನು ರಚಿಸುವದಕ್ಕಾಗಿ, ಹಳ್ಳಿಗಳ ಸರ್ವಾಂಗೀಣ ಸಂಘಟನೆಗೆ ಸಾವಿರಾರು ಕಾರ್ಯಕರ್ತರು ಮತ್ತು ಸಹಯೋಗಿಗಳು ಬೇಕಾಗಿರುವದರಿಂದ ಸಹಯೋಗೀ ಕಾರ್ಯಕರ್ತರನ್ನು ಮಾಡಿಕೊಳ್ಳುವ ಈ ಹೊಸ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಗಾಂಧೀಜಿಯು ನಮ್ಮನ್ನು ಬಿಟ್ಟು ಹೋದ್ದರಿಂದ, ಚರಖಾದ ಸಂದೇಶವು ಪ್ರತಿಮನೆಗೆ ಮತ್ತು ಪ್ರತಿಹಳ್ಳಿಗೆ ಮುಟ್ಟಿಸುವ ಹೊಣೆಯು ಗಾಂಧೀಜಿಯನ್ನು ಪ್ರೀತಿಸುವೆವು, ಆದರಿಸುವೆವು ಎಂದು ಹೇಳಿಕೊಳ್ಳುವವರ ಮೇಲೆ ಬೀಳುತ್ತದೆ. ಪ್ರತಿಹಳ್ಳಿಗೂ ಚರಖಾದ ಮುಖಾಂತರ ಸ್ವಾವಲಂಬನ ಮತ್ತು ಸ್ವಯಂಪೂರ್ಣತೆಯ ಸಂದೇಶವನ್ನು ಮುಟ್ಟಿಸುವದಕ್ಕಾಗಿ ಏಳು ಲಕ್ಷ ಕಾರ್ಯಕರ್ತರು ಬೇಕೆಂದು ಅವರು ಹೇಳುತ್ತಿದ್ದರು. ಸದ್ಯದ ವಾತಾವರಣ ಮತ್ತು ಪರಿಸ್ಥಿತಿಯನ್ನು ಲಕ್ಷಿಸಿದರೆ ಇಡೀ ದಿನ ಕೆಲಸ ಮಾಡುವ ಏಳು ಲಕ್ಷ ಹಳ್ಳಿ ಕೆಲಸಗಾರರು ಸಿಕ್ಕುವದು ಕಠಿನ. ಚರಖಾ ಸಂಘಕ್ಕೆ ಹೆಚ್ಚು ಸಹಯೋಗಿ ಸದಸ್ಯರನ್ನು ದೊರಕಿಸಿದ್ದಾದರೆ ಈ ಪ್ರಚಂಡ ಕಾರ್ಯದಲ್ಲಿ ಪ್ರಾರಂಭದ ಹೆಜ್ಜೆಯನ್ನಿಟ್ಟಂತೆ ಆಗುವದು.

ಸೇವಾಗ್ರಾಮ
೨೫—೭—೪೮ — ಧೀರೇಂದ್ರ ಮಜುಮದಾರ
(ಹಿಂದುಸ್ತಾನಿ ಮೂಲದಿಂದ ಅನುವಾದಿತ)

ಭಾಷಾಮೂಲಕ ಐಕ್ಯ

[illegible] ಹಿರಿಯರೊಬ್ಬರು ಹೀಗೆ ಬರೆದಿದ್ದಾರೆ:

"ಭಾಷಾಸಮಸ್ಯೆಯ ಬಗ್ಗೆ ಹರಿಜನದಲ್ಲಿ ಪ್ರಕಟವಾಗುವ ಲೇಖನಗಳನ್ನು ಕೂಲಂಕಷವಾಗಿ ಓದಿದ್ದೇನೆ ಮತ್ತು ದೇಶವ್ಯಾಪಿಯಾಗಿ ಹಬ್ಬಿದ ಈ ವಾದವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದೇನೆ.

"ಬ್ರಿಟಿಶ ರಾಜ್ಯವು ಅಸ್ತಂಗತವಾದ ಮೇಲೆ ನಾವೆಲ್ಲರೂ ದಾಸ್ಯದ ಬಂಧನವನ್ನು ಹರಿದೊಗೆದೆವೇನೋ ನಿಜ. ಆದರೆ ಜಾತಿ, ಮತ, ಪಂಥ, ಪ್ರಾಂತ ಇವುಗಳನ್ನೆಲ್ಲ ಮೀರಿ ನಮ್ಮೆಲ್ಲರನ್ನೂ ಒಂದುಗೂಡಿಸಿ ಬಂಧಿಸಬಲ್ಲ ಏಕಸೂತ್ರತೆಯನ್ನು ನಾವಿನ್ನೂ ಹುಡುಕಿ ತೆಗೆದಿಲ್ಲ. ಭೇದಾತ್ಮಕ ಪ್ರವೃತ್ತಿಗಳು ತಲೆಯೆತ್ತಿ ಹಿಂದೀ ಒಕ್ಕೂಟವೀಗ ಗಂಡಾಂತರದಲ್ಲಿ ಕಾಲಿಡತೊಡಗಿದೆ. ಎಲ್ಲರೂ ತಮ್ಮ ತಮ್ಮ ಜಾತಿ ಧರ್ಮ ಪ್ರಾಂತ ಇವುಗಳನ್ನು ಆಧರಿಸಿ ವಿಚಾರ ಮಾಡಹತ್ತಿದ್ದಾರೆ. ಭಾರತ ದೇಶದ ನಾಗರಿಕರು ನಾವೆಂದು ಭಾವಿಸುತ್ತಿಲ್ಲ. ನಮ್ಮ ಜಗತ್ತು ಸಂಕುಚಿತವಾಗಿ ಅಂಗೈ ಅಗಲದ ಸೀಮೆಯಾಗಿ ಪಕ್ಷ ಪಂಗಡಗಳಲ್ಲಿ ಅಡಗಿಕೊಳ್ಳತೊಡಗಿದೆ.

"ಅನೇಕ ಉಪಾಯಗಳಲ್ಲಿ ಸಾಮಾನ್ಯ ಭಾಷೆಯೂ ಒಂದಾಗಿದೆ. ಬೇಗ ಹಿಂದುಸ್ತಾನಿಗೆ ನಾವು ಯೋಗ್ಯ ಸ್ಥಾನವನ್ನು ಕಲ್ಪಿಸಿದಷ್ಟೂ ಕ್ಷೇಮಕರ. ನಾನು ಈ ವಿಷಯದಲ್ಲಿ ತಜ್ಞನಲ್ಲವಾದರೂ ಒಬ್ಬ ಸಾಮಾನ್ಯ ನಿರೀಕ್ಷಕನಾಗಿ, ಹಿಂದುಸ್ತಾನಿಗೆ ಸಲ್ಲತಕ್ಕ ಸ್ಥಾನಮಾನವನ್ನು ಕೊಡಲಾಗಿಲ್ಲವೆಂದು ಹೇಳಬಲ್ಲೆ. ಹಿಂದುಸ್ತಾನಿಯ ವ್ಯಾಪ್ತಿಯನ್ನು ಬಹಳ ಸೀಮಿತಗೊಳಿಸಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಪ್ರಾಂತೀಯ ಭಾವನೆಯಿಂದ ಹುಟ್ಟಿದ ಮಾತ್ಸರ್ಯವು, ವೈರವು ರಾಷ್ಟ್ರೀಯ ಭಾವವನ್ನೇ ಮಸಳಿಸಿಬಿಟ್ಟಿದೆ. ಇದನ್ನು ಸಾಮಾನ್ಯ ಭಾಷೆಯು ಅಳಿಸಿ ಬಿಡಬಹುದಲ್ಲದೆ ರಾಷ್ಟ್ರೀಯ ಐಕ್ಯಕ್ಕೆ ಪೋಷಕವೂ ಆಗುವದು. ಹಿಂದುಸ್ತಾನಿಯು ಹಿಂದುಸ್ತಾನದ ರಾಷ್ಟ್ರಭಾಷೆಯಾಗಬೇಕೆಂಬುದು ನಿರ್ವಿವಾದವಾಗಿ ಹೋಗಿದೆ. ಪ್ರಾಥಮಿಕ ಶಿಕ್ಷಣದ ಮೇಲಿನ ಶಿಕ್ಷಣಕ್ಕೆಲ್ಲ ಹಿಂದುಸ್ತಾನಿಯೇ ಮಾಧ್ಯಮವಾಗಬೇಕಲ್ಲದೆ ಎಲ್ಲ ಪ್ರಾಂತಗಳಲ್ಲಿಯೂ ಸರಕಾರಿ ಮತ್ತು ಕೋರ್ಟ ಭಾಷೆ ಕೂಡ ಇದೇ ಆಗಬೇಕೆಂದು ನನ್ನ ಮತ. ಗ್ರಾಮ ಪಂಚಾಯತಿಯ ಪದ್ಧತಿಯು ಬಳಕೆಯಲ್ಲಿ ಬರುತ್ತಲೇ—ಇಷ್ಟರಲ್ಲಿ ಅದು ಬರಲಿದೆ—ಕೋರ್ಟುಗಳ ಕೆಲಸ ಮತ್ತು ವ್ಯಾಪ್ತಿ ಕಡಿಮೆಯಾಗಹತ್ತುವದು. ಆಗ ಜನರಿಗೆ ಯಾವ ಆತಂಕವೂ ಇಲ್ಲದೆ ಸುಲಭವಾಗಿ ಹಿಂದುಸ್ತಾನಿಯನ್ನು ಬಳಕೆಗೆ ತರಬಹುದು. ಇದು ಸರಕಾರೀ ಕಚೇರಿಗಳಿಗೂ ಅನ್ವಯಿಸುವದು.

"ಕೆಲವರು ಪುರಸ್ಕರಿಸುವಂತೆ ಪ್ರಾದೇಶಿಕ ಭಾಷೆಯನ್ನೇ ಬಳಕೆಗೆತರುವದರಲ್ಲಿ ಅರ್ಥವಿಲ್ಲ. ಇದರಿಂದ ಪ್ರಾಂತೀಯಭಾವ ಹೆಚ್ಚಿ ಈ ಭಾಷೆ ಪ್ರಾದೇಶಿಕ, ಆ ಭಾಷೆ ಪ್ರಾದೇಶಿಕ ಎಂಬ ಗಲಭೆ ಏಳುವ ಸಂಭವವಿದೆ. ಅಸಾಮದ ಅಥವಾ ಓರಿಸಾದ ಹಳ್ಳಿಗರಿಗೆ ಹಿಂದುಸ್ತಾನಿಯು ಚನ್ನಾಗಿ ಅರ್ಥವಾಗುತ್ತದೆ.

"ಲಿಪಿಯ ಬಗ್ಗೆಯೂ ಹೀಗೇ ಹೇಳಬಹುದು. ಹಿಂದುಸ್ತಾನಕ್ಕೆಲ್ಲ ಒಂದೇ ಲಿಪಿಯಾದರೆ ಬೇರೆ ಬೇರೆ ಭಾಷೆಗಳನ್ನೂ ಸಾಹಿತ್ಯವನ್ನೂ ಕಲಿಯಲು ಅನುಕೂಲವಾಗುವದು. ಇಂದಿನ ಪರಿಸ್ಥಿತಿಯಲ್ಲಿ ಎಲ್ಲರನ್ನೂ ಒಟ್ಟುಗೂಡಿಸಿ ಬೆಸುಗೆಗೊಳಿಸಲು ಏಕಲಿಪಿಯೂ ಒಂದು ಪ್ರಬಲ ಸಾಧನವಾಗುವದು. ಕ್ರಮೇಣ ದೇವನಾಗರಿ ಲಿಪಿಯನ್ನು ಎಲ್ಲ ಲಿಪಿಗಳ ಬದಲು ಉಪಯೋಗಿಸುತ್ತ ಹೋದರೆ ಹಾನಿಯೇನಿಲ್ಲ. ಸಾಂಸ್ಕೃತಿಕ ದೃಷ್ಟಿಯಿಂದಲೂ ಪರಂಪರಾಗತ ಸಂಪ್ರದಾಯ ದೃಷ್ಟಿಯಿಂದಲೂ ಈ ಲಿಪಿಗೆ ಯಾರೂ ಆಕ್ಷೇಪಿಸಲಾರರು.

"ತಜ್ಞರು ಈ ವಿಷಯದ ಯುಕ್ತಾಯುಕ್ತತೆಯನ್ನು ತೂಗಿ ನೋಡುವರೆಂದು ನಾನು ನಂಬಿದ್ದೇನೆ"

ಮೇಲ್ಕಾಣಿಸಿದ ಸೂಚನೆಗಳನ್ನೆಲ್ಲ ನಾನು ಬಾಹ್ಯತಃ ಒಪ್ಪದಿದ್ದರೂ ಅವುಗಳಲ್ಲಿ ಅಡಕವಾದ ಮೂಲಭಾವಕ್ಕೆ ನಾನು ಸರ್ವಥಾ ಒಪ್ಪುತ್ತೇನೆ. ನಾನು ಈ ಬಗ್ಗೆ ಹಿಂದೊಮ್ಮೆ ಹೇಳಿದಂತೆ ಹಿಂದುಸ್ತಾನಿಯು ಬೆಳೆದು ಪರಿಪುಷ್ಟ ಭಾಷೆಯಾಗಬೇಕಾದರೆ ಅದಕ್ಕೆ ಹೆಚ್ಚಿನ ವ್ಯಾಪ್ತಿಯು ದೊರಕಲೇಬೇಕು. ನಾವು ಹೆಚ್ಚು ಪ್ರಮಾಣದಲ್ಲಿ ದ್ವಿಭಾಷಾಜ್ಞರಾಗಬೇಕಾಗುವದು. ಶಾಲೆ ಕಾಲೇಜುಗಳಲ್ಲಿ ಪ್ರಾದೇಶಿಕ ಭಾಷೆಯನ್ನೇ ಪ್ರಮುಖ ಮಾಧ್ಯಮವಾಗಿ ಬಳಸಬಹುದಾದರೂ ಸರ್ವ ಸಮ್ಮತವಾದ ಪ್ರದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾದೇಶಿಕ ಭಾಷೆಯ ಜೊತೆಗೆ ಹಿಂದುಸ್ತಾನಿಗೂ ಅಷ್ಟೇ [illegible] ಬಹುದು. ಉದಾಹರಣಾರ್ಥ [illegible] ಹಿಂದುಸ್ತಾನಿ ಶಾಲೆ ಕಾಲೇಜುಗಳ [illegible] ಬಹುದು. ಬೇರೆ ಪ್ರಾಂತಗಳಿಂದ [illegible] ವರನ್ನು ಬರಮಾಡಿಕೊಳ್ಳುವ ವಿಶ್ವವಿದ್ಯಾಲಯಗಳಲ್ಲಿ ಹಿಂದುಸ್ತಾನಿಯು [illegible] ಶಿಕ್ಷಣ ಜರಗಿ [illegible] ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು [illegible] ಪ್ರಾದೇಶಿಕ ಭಾಷೆಯಲ್ಲಿಯೇ [illegible] ಉತ್ತರ ಬರೆಯಬಹುದಾದರೂ ಹಿಂದುಸ್ತಾನಿಯಲ್ಲಿ ಹೇಳಿದ ವ್ಯಾಖ್ಯಾನಗಳನ್ನು [illegible] ಕೊಳ್ಳುವಷ್ಟು ಹಿಂದುಸ್ತಾನಿಯು ಅವರಿಗೆ [illegible] ಬರಲೇಬೇಕು.

ಹಿಂದುಸ್ತಾನಿಗೂ ಮತ್ತು ಇತರ ಪ್ರಾದೇಶಿಕ ಭಾಷೆಗೂ ಸಂಬಂಧ [illegible] ಮೈತ್ರಿ ಉಂಟು. ಇಂಗ್ಲೀಷು ಮತ್ತು [illegible] ತರ ಭಾರತೀಯ ಭಾಷೆಗಳಲ್ಲಿ [illegible] ಅಂತರ ಹಿಂದುಸ್ತಾನಿಗೂ ಯಾವದೇ ಪ್ರಾದೇಶಿಕ ಭಾಷೆಗೂ ಇರುವದಿಲ್ಲವೆಂಬ ಸಂಗತಿಯನ್ನು ಲಕ್ಷದಲ್ಲಿಡಬೇಕು.

ಹಾಯಕೋರ್ಟುಗಳಲ್ಲಿಯೂ ಪ್ರಮು[illegible] ಸರಕಾರೀ ಕಚೇರಿಗಳಲ್ಲಿಯೂ [illegible] ಲಿತ ಪಟ್ಟಣಗಳಲ್ಲಿದ್ದ ಕೋರ್ಟುಗಳಲ್ಲಿಯೂ [illegible] ಹಿಂದುಸ್ತಾನಿಯೇ ಅಧಿಕೃತ ಭಾಷೆಯಾ[illegible] ಬಹುದು. ಆದರೆ ವಕೀಲರಿಗೂ ಪಕ್ಷಗಾರರಿಗೂ [illegible] ಅವರವರ ಪ್ರಾದೇಶಿಕ ಭಾಷೆಯನ್ನು ಬಳಸಲು ಅವಕಾಶ ಕೊಡಬಹುದು.

ಈ ವಿಷಯದ ಬಗ್ಗೆ ಎಷ್ಟು ವಾದದ [illegible] ಕಾರಣಗಳನ್ನು ವಿಮರ್ಶಿಸಬೇಕೆಂದು [illegible] ವಾಚಕರಿಗೆ ಸೂಚಿಸಬಯಸುತ್ತೇನೆ. [illegible] ಹೀಗಿವೆ: ಹಿಂದುಸ್ತಾನಿಯ [illegible] ಬಗ್ಗೆ ಜನರಲ್ಲಿ ಏಕಮತವಿಲ್ಲ. ನಾನು [illegible] ಭಾಷೆಯನ್ನು "ಹಿಂದುಸ್ತಾನಿ" ಎಂದು ಕರೆ[illegible] ಬಯಸುತ್ತೇನೆ. ಜಾತೀಯ ಅಥವಾ [illegible] ಸಂಬಂಧೀಯ ದ್ವೇಷಕ್ಕೆ ಈ ಸಂಗತಿ [illegible] ಒಂದು ಕಾರಣವಾಗಿ [illegible] ಸಂಭವ [illegible] ಉಂಟು. ಸರ್ವಮಾನ್ಯ ಭಾಷೆಯು [illegible] ತತ್ವಕ್ಕನುಸರಿಸಿ ರಚಿತವಾಗಬೇಕು [illegible] ಮಾತು ಸರ್ವಾನುಮತದಿಂದ ನಿರ್ಧರಿತವಾ[illegible] ದಾದರೆ ಉಳಿದ ಅಡ್ಡಿ ಆತಂಕಗಳೆಲ್ಲ [illegible] ಮಾಯವಾಗುವವು.

ಇದೇ ಮಾತು ಲಿಪಿಗೂ ಅನ್ವಯಿಸುತ್ತ[illegible] ಬೇರೆ ಬೇರೆ ಪ್ರಾಂತಗಳು ಕ್ರಮೇಣ [illegible] ತಮ್ಮ ವಿಶಿಷ್ಟ ಲಿಪಿಗಳ ಬಳಕೆಯನ್ನು [illegible] ಮಾಡಿ ಅವುಗಳಿಗೆ ಪ್ರತಿಯಾಗಿ [illegible] ಲಿಪಿಯನ್ನು ಉಪಯೋಗಿಸಿದರೆ [illegible] ಲಿಪಿಯ ಬಗ್ಗೆ ಇದ್ದ ನನ್ನ ಅಭಿಪ್ರಾಯ[illegible] ನಾನು ಬದಲಿಸಿಕೊಳ್ಳ[illegible] ಇಷ್ಟೇ ಅಲ್ಲ ಉರ್ದು ಲಿಪಿ [illegible] ಆ ಲಿಪಿಯನ್ನು ಬಿಟ್ಟುಬಿಡಬೇಕೆಂದು [illegible] ಕೊಳ್ಳುತ್ತೇನೆ.

ಜನರಲ್ಲಿ ಧಾರ್ಮಿಕ ಜಾತೀಯ [illegible] ಪ್ರಾಂತೀಯ ಭಾವಗಳು ಹೆಚ್ಚುತ್ತಿರುವ [illegible] ಅವರು ಅವನ್ನೆ ಆಧಾರವಾಗಿಟ್ಟು [illegible] ವಿಚಾರ ಮಾಡಹತ್ತಿರುವರೆಂಬ [illegible]

[illegible]

> **ಸೂಚನೆ**
>
> ವಾಡಿಕೆಯಂತೆ ಗಣೇಶ ಚತುರ್ಥಿ ನಿಮಿತ್ತ ಸೋಮವಾರ ತಾ. ೬-೯-೪೮ ರ ದಿನ 'ಕರ್ಮವೀರ' ಸಂಚಿಕೆಯು ಹೊರಡುವದಿಲ್ಲ. ಮುಂದಿನಂತೆ ತಾ. ೧೩—೯—೪೮ ರ ದಿನ ಸಂಚಿಕೆಯು ಪ್ರಕಟವಾಗುವದು.
>
> —ವ್ಯವಸ್ಥಾಪಕ

ಭಾಷಾತ್ಮಕ ಒಡಕಿನ ಭಯ

ಹಿಂದಿನ ಒಂದು ಲೇಖನದಲ್ಲಿ, ನಾನು, ಪ್ರಾದೇಶಿಕ ವಿಶ್ವವಿದ್ಯಾಲಯಗಳಲ್ಲಿ ಪ್ರಾದೇಶಿಕ ಭಾಷೆಗಳೇ ಶಿಕ್ಷಣದ ಮಾಧ್ಯಮವಾದರೆ ದೇಶದಲ್ಲಿ ಒಡಕು ಹುಟ್ಟಬಹುದೆಂಬ ಭಯವು ಕೆಲವರ ಒಂದು ವಿಚಾರವಾಯಿತೆಂದು ಹೇಳಿದ್ದೆ. ಈ ಭಯ ನಿರಾಧಾರವಾದುದೆಂದೂ ನಾನು ಅಭಿಪ್ರಾಯಪಟ್ಟಿದ್ದೆ.

ತಮ್ಮ ಈ ಭಯವನ್ನು ಸಮರ್ಥಿಸಲು ಈ ಬಗೆಯ ವಿಚಾರವುಳ್ಳವರು ಕೊಡುವ ಒಂದು ಒಳ್ಳೆ ಉದಾಹರಣೆಯೆಂದರೆ ಈ ದೇಶದಲ್ಲಿದ್ದ ಜಾತೀಯ ಮತದಾನ ಪದ್ಧತಿಯು. ಅವರು ಹೇಳುತ್ತಾರೆ: “ ಜಾತೀಯ ಮತದಾನದಿಂದ ಈ ದೇಶವು ಇಲ್ಲಿಯ ಜನತೆಯೂ ಇಬ್ಭಾಗವಾದಂತೆ, ಭಾಷಾತ್ಮಕ ವಿಶ್ವವಿದ್ಯಾಲಯಗಳಿಂದ, ಈಗಾಗಲೇ ಬೀಜರೂಪದಲ್ಲಿರುವ ಪ್ರಾಂತೀಯತೆಗೆ ಪುಷ್ಟಿದೊರೆತು ಪ್ರತ್ಯೇಕತಾ ಭಾವನೆ ಇನ್ನೂ ಬೆಳೆಯುವದು. ” ಈ ನಿದರ್ಶನ ಸತ್ಯವಾಗಿದ್ದರೆ ಅದು ಅಬಾಧಿತ ಪ್ರಮಾಣವೇ ಸೈ. ಆದರೆ ದುರ್ದೈವದಿಂದ ಅದು ಸತ್ಯವೂ ಅಲ್ಲ, ಅರ್ಥವತ್ತಾದುದೂ ಅಲ್ಲ.

ಮೊದಲನೆಯದಾಗಿ, ಜಾತೀಯ ಮತದಾರ ಸಂಘಗಳು ದುರುದ್ದೇಶದಿಂದಲೇ ಉಂಟು ಮಾಡಲ್ಪಟ್ಟ ಸಾಮಾಜಿಕ—ರಾಜಕೀಯ ಕೃತಕ. ಅದು ಪ್ರಜಾತಂತ್ರ ವಿರುದ್ಧವೂ ಪ್ರತಿಗಾಮಿಯೂ ಆಗಿತ್ತು. ಆದಕಾರಣ ಶಾಸ್ತ್ರೀಯ ದೃಷ್ಟಿಯಿಂದಲೂ ಅದು ತಪ್ಪುದಾರಿಯಾಗಿತ್ತೆಂದು ಹೇಳುವದೇ ಅವಶ್ಯವಿಲ್ಲ. ಆದರೆ ಅದಕ್ಕಿಂತಲೂ ಕೆಡಕಾದುದೆಂದರೆ, ಭಾರತದ ಸ್ವಾತಂತ್ರ್ಯಾಂದೋಲನದ ಓಘವನ್ನು ತಡೆಯುವದಕ್ಕಾಗಿ ಭಾರತದಲ್ಲಿದ್ದ ಬ್ರಿಟಿಶರು ಅದನ್ನು ಉದ್ದೇಶಪೂರ್ವಕವಾಗಿ ಕಲ್ಪಿಸಿ ಆಚರಣೆಗೆ ತಂದರೆಂದು ತೋರಿಸಲು ಸಾಕಷ್ಟು ಪ್ರಮಾಣ ದೊರೆತಿದೆ. ಅದನ್ನು ಜೋಕೆಯಿಂದಲೂ ಶಿಸ್ತಿನಿಂದಲೂ ಬೆಳೆಸಲಾಯಿತು. ಅದರಿಂದುದ್ಭವಿಸಿದ ಜಾತೀಯ ಬೇಗೆಯನ್ನು ಹಬ್ಬಿಸಿದ್ದರಿಂದ ಅದು ಪಾಕಿಸ್ತಾನದಲ್ಲಿ ಪರ್ಯವಸಾನಹೊಂದಿತು.

ಭಾಷಾನ್ವಯ ವಿಶ್ವವಿದ್ಯಾಲಯಗಳ ಮಾತು ಹಾಗಿಲ್ಲ. ತನ್ನ ಭಾಷೆಯು ತನಗೆ ಶಿಕ್ಷಣ ಮಾಧ್ಯಮವಾಗಬೇಕೆಂಬುದು ತಪ್ಪಂತೂ ಅಲ್ಲವೇ ಅಲ್ಲ, ಬದಲಿಗೆ ಶೈಕ್ಷಣಿಕ ಮತ್ತು ಶಾಸ್ತ್ರೀಯ ದೃಷ್ಟಿಯಲ್ಲಿ ಬಹಳ ಅಪೇಕ್ಷಣೀಯವಾದುದು. ಇದರ ಉದ್ದೇಶ ಪ್ರಾಂತೀಯತೆಯ ಪೋಷಣೆಯಲ್ಲ. ಪ್ರಕೃತಿಯೇ ಅಪನಿಗಿತ್ತ ಸಾಧನದ ಮೂಲಕ ಶಿಕ್ಷಣ ಕೊಟ್ಟು ವ್ಯಕ್ತಿಗೆ ಪೂರ್ಣ ಶ್ರೀಮತ್ಸಂಪಾದನೆಯ ಅವಕಾಶವೀಯುವದು. ಆದುದರಿಂದ ತಮ್ಮ ಭೀತಿಯನ್ನು ಸಮರ್ಥಿಸಲು ಜಾತೀಯ ಮತದಾರ ಸಂಘಗಳ ನಿದರ್ಶನವನ್ನೇ ಕೊಡುವವರು ಈ ಮೂಲ ಭಿನ್ನತೆಯನ್ನು ಗಮನಿಸಬೇಕು. ಇದು ಅವರ ನಿದರ್ಶನವನ್ನೆ ಹುಳ್ಳುಗಳೆಯುತ್ತದೆ.

ಇನ್ನು, ಭಾಷೆಯು ತಾನಾಗಿಯೆ ಪ್ರಾದೇಶಿಕ ಸಂಕುಚಿತ ಭಾವನೆಯನ್ನಾಗಲಿ ಪ್ರತ್ಯೇಕತಾಭಾವನೆಯನ್ನಾಗಲಿ ಪೋಷಿಸುವದೆಂದು ಹೇಳಲು ಬರುವದಿಲ್ಲ. ಭಾಷೆಗೆ ಶಾರೀರಿಕ ಮತ್ತು ಸಾಮಾಜಿಕ ವಿಕಾಸವೇ ಮೂಲ. ಅದು ಮನುಷ್ಯ ಸಮಾಜದಲ್ಲಿ ಪ್ರದೇಶನಿಷ್ಠವಾಗಿ ರೂಪುಗೊಳ್ಳುವದು ಸ್ವಾಭಾವಿಕ. ಅದು ನಮ್ಮ ಕೈಯಲ್ಲಿರುವ ಒಂದು ಸಾಧನ ಮಾತ್ರ—ಅದರಿಂದ ನಾವು ಬೇಕಾದರೆ ಮಾನವರ ಐಕ್ಯವನ್ನು ಕಟ್ಟಬಹುದು ಇಲ್ಲದಿದ್ದರೆ ಕೆಡಹಬಹುದು. ಸಾಧನದಲ್ಲಿ ಗುಣವೂ ಇಲ್ಲ ದೋಷವೂ ಇಲ್ಲ. ಮಗುವಿಗೆ ವಿಚಾರದ ಅಭಿವ್ಯಕ್ತಿಯ ಮತ್ತು ಸಂಪರ್ಕದ ನೈಸರ್ಗಿಕ ಸಾಧನವಾಗಿ ಮಾತ್ರ ಅದು ಕೆಲಸಮಾಡುತ್ತದೆ. ಆದುದರಿಂದ ಪ್ರಾದೇಶಿಕ ಭಾಷೆಗಳನ್ನು ಬಳಕೆಗೆ ತಂದಾಕ್ಷಣ ಅದರಿಂದ ಪ್ರಾಂತೀಯ ಮನೋವೃತ್ತಿಗೆ ಪುಷ್ಟಿ ದೊರೆಯುವದೆಂದಾಗಲಿ ರಾಷ್ಟ್ರೀಯ ಐಕ್ಯಕ್ಕೆ ಭಂಗವುಂಟಾಗುವದೆಂದಾಗಲಿ ಬಗೆಯುವದು ತಪ್ಪು. ಬದಲಿಗೆ ಆ ಐಕ್ಯವನ್ನು ಕಾಪಾಡಿ ಬಲಗೊಳಿಸುವ ಮತ್ತು ವಿವಿಧ ಭಾಷಾ ಪ್ರದೇಶಗಳು ತಮ್ಮ ಸರ್ವ ಶಕ್ತಿಯನ್ನು ಐಕ್ಯ ಸಾಧನೆಗಾಗಿ ವಿನಿಯೋಗ ಮಾಡುವಂತೆ ಅನುಕೂಲವೊದಗಿಸುವ ಹಾಗಾಗಿ ನಾವು ಮಗುವಿನ ಶಿಕ್ಷಣಕ್ಕಾಗಿ ಸ್ವಾಭಾವಿಕವಾದ ಮಾಧ್ಯಮವನ್ನು ಬಳಕೆಗೆ ತಂದು, ರಾಷ್ಟ್ರೀಯ ಐಕ್ಯದ ಕಾರ್ಯವನ್ನು ಮಾಡುತ್ತಲೇ ಹೋದರೆ ಪ್ರಾದೇಶಿಕ ಭಾಷೆಯಿಂದ ಯಾವ ಅಪಾಯವೂ ಒದಗದೆಂದು ನೆನೆಸಿಕೊಳ್ಳಬೇಕು. ಆದುದರಿಂದ ಇದನ್ನು ಸಾಧಿಸುವ ಬಗೆ ಹೇಗೆಂಬುದೇ ಪ್ರಶ್ನಾರ್ಹ ಸಮಸ್ಯೆ.

ಹಿಂದುಸ್ತಾನಿಯು ನಮ್ಮ ಪದವಿ ಪರೀಕ್ಷೆಯ ವರೆಗೂ ಒತ್ತಾಯದ ವಿಷಯವನ್ನಾಗಿ ಬಳಕೆಗೆ ತರುವದರ ಉಪಯೋಗ ಇಲ್ಲಿ ಕಾಣಬರುತ್ತದೆ. ಪ್ರಾಂತಪ್ರಾಂತಗಳೊಳಗಿನ ಸಂಪರ್ಕಕ್ಕಾ ಕೇಂದ್ರದ ಆಡಳಿತಕ್ಕೂ ನಮಗೆ ಒಂದು ಅಖಿಲಭಾರತ ಭಾಷೆ ಬೇಕೇಬೇಕು. ಎರಡೂ ಲಿಪಿಗಳಲ್ಲಿ ಬರೆಯಲ್ಪಡುವ ಹಿಂದು ಸ್ತಾನಿಯ ಉದ್ದೇಶ ಇದೇ. ಅದು ನಮ್ಮ ಶಿಕ್ಷಣದಲ್ಲಿ ಇಂಗ್ಲೀಷಿನ ಸ್ಥಾನವನ್ನು ಪಡೆಯಬೇಕು. ಇಂಗ್ಲೀಷು ತೃತೀಯ ಭಾಷೆಯಾಗಿ ತನ್ನ ನ್ಯಾಯವಾದ ಸ್ಥಾನವನ್ನು ಪಡೆದೇಪಡೆಯುವದು.

ಇದಲ್ಲದೆ, ರಾಷ್ಟ್ರೀಯ ಐಕ್ಯವೆಂಬುದು ಮುಖ್ಯವಾಗಿ ಎರಡು ಶಕ್ತಿಗಳ—ಅಂದರೆ ಸಾಂಸ್ಕೃತಿಕ ಮತ್ತು ರಾಜಕೀಯ—ಸಂಯೋಜನೆಯಿಂದ ಉಪಲಬ್ಧವಾಗುವ ವಸ್ತು. ನಮ್ಮ ಪ್ರಾದೇಶಿಕ ಮತ್ತು ಸ್ಥಾನಿಕ ವ್ಯತ್ಯಾಸಗಳ ಹಿನ್ನೆಲೆಯಲ್ಲಿರುವ ಆ ಒಂದೇ ಸಂಸ್ಕೃತಿಯ ಬೆಳವಣಿಗೆಗಾಗಿ ನಮ್ಮ ಪ್ರಾದೇಶಿಕ ವಿಶ್ವವಿದ್ಯಾಲಯಗಳು ಕೆಲಸಮಾಡಬೇಕು. ಈ ಸಂಬಂಧದಲ್ಲಿ ಆ ಸಂಸ್ಕೃತಿ ಬೇರೆ ಈ ಸಂಸ್ಕೃತಿ ಬೇರೆ ಎಂಬ ಗೊಳ್ಳು ಮಾತುಗಳು ಅಡಿಲ್ಪಡುವದೊಂದು ತೊಂದರೆ. ಗಾಂಧೀಜಿ ನಮ್ಮನ್ನು ಎಚ್ಚರಿಸಿದಂತೆ,* ಪ್ರತ್ಯೇಕತೆಯ ಭಾವನೆ ಯಾವಾಗಲೂ ಪ್ರಬಲವಾಗಿರುತ್ತದೆ. ಪ್ರತಿಯೊಬ್ಬನೂ ತನ್ನನ್ನೂ ತನ್ನ ಕುಟುಂಬವನ್ನೂ ಕುರಿತೇ ಚಿಂತಿಸುತ್ತಾನೆ. ಇಡಿ ಭಾರತದ ವಿಚಾರ ಯಾರೂ ಮಾಡುವದಿಲ್ಲ. ಕೇಂದ್ರಾಭಿಮುಖ ಶಕ್ತಿಗಳು ನಿಶ್ಶಬ್ದತಯವಾಗಿ ಇದ್ದೇ ಇವೆ. ಆದರೆ ಅವು ವಾಚಾಲವಾಗಿರುವದಿಲ್ಲ, ಗದಿಬಿದಿ ಮಾಡುವದಿಲ್ಲ. ಆದರೆ ಕೇಂದ್ರವಿಮುಖ ಶಕ್ತಿ ಮೇಲೆಯೆ ಇರುತ್ತವೆ. ಅದರ ದನಿ ದೊಡ್ಡದಾಗಿ ಕೇಳುತ್ತದೆ, ಎಲ್ಲರ ಲಕ್ಷ್ಯವನ್ನೂ ಸೆಳೆಯಲಪೇಕ್ಷಿಸುತ್ತದೆ—ಅದರ ಸ್ವಭಾವವೇ ಹಾಗೆ. ಅದು ಜಾತೀಯ ವಿಷಯಗಳಲ್ಲಿ ಪ್ರತ್ಯಕ್ಷವಾಗುವದು ಹೆಚ್ಚು. ಇದರಿಂದ ಇತರ ಕ್ಷೇತ್ರಗಳಲ್ಲೂ ಅದರ ಭಯವುಂಟಾಗಲು ಆಸ್ಪದವಾಗಿದೆ...'' ಉದಾಹರಣೆಗಾಗಿ ಶಿಕ್ಷಣ ಕ್ಷೇತ್ರ ಮತ್ತು ಅದರ ಮಾಧ್ಯಮದ ಕ್ಷೇತ್ರಗಳಲ್ಲಿ.

ಐಕ್ಯಕ್ಕಾಗಿ ಹೆಚ್ಚು ಸ್ಪಷ್ಟವಾಗಿ ದುಡಿವ ಮತ್ತೊಂದು ಶಕ್ತಿಯೆಂದರೆ, ಪ್ರಬಲವಾದ ಕೇಂದ್ರ ಸರಕಾರ ಮತ್ತು ಆಡಳಿತ. ಇದು ನಮಗೆ ಖಾತ್ರಿಯಾಗಿ ಸಿಕ್ಕಿವೆ. ನಮ್ಮ ಜನ ಉಚ್ಚ ವರ್ಗಗಳಲ್ಲಿ, ಪರ ಭಾಷೆಯ ಮೂಲಕ ದುಡಿವ ಕೇಂದ್ರೀಕೃತ ಪರ ಸರಕಾರವು, ಐಕ್ಯಾಭಾಸವನ್ನು ತಂದಿತು. ನಮ್ಮಲ್ಲೇ ಹುಟ್ಟಿದ ಭಾಷೆಯೆನಿಸುವ** ಹಿಂದುಸ್ತಾನಿಯ ಮೂಲಕ ಕೆಲಸ ಸಾಗಿಸಿದರೆ ಅದು ಪ್ರಾದೇಶಿಕ ಭಾಷೆಗಳನ್ನು ಪೋಷಿಸುವದಲ್ಲದೆ ತಾನೂ ಅವುಗಳಿಂದ ಪುಷ್ಟವಾಗುವದು; ಆಗ ಅದು ಇಂಗ್ಲೀಷು ಮಾಡಿದಂತೆ ಮೇಲಿನ ಕೆಲ ವರ್ಗಗಳಲ್ಲಿ ಮಾತ್ರವಲ್ಲದೆ ನಮ್ಮ ಇಡೀ ಜನತೆಯಲ್ಲಿ ಇನ್ನೂ ಹೆಚ್ಚು ನ್ಯಾಯಬದ್ಧವಾದ, ಉತ್ತಮವಾದ ಐಕ್ಯವನ್ನು ಉಂಟುಮಾಡಬಹುದು.

ಹೀಗೆ ನಾವು ನಮ್ಮ ಸಮಸ್ಯೆಯನ್ನು ನೋಡಿದರೆ, ಶಿಕ್ಷಣ ಮಾಧ್ಯಮಗಳಾಗುವ ಪ್ರಾದೇಶಿಕ ಭಾಷೆಗಳಿಗಂಜುವುದರ ಬದಲು ನಾವು ಅದೇ ನಮ್ಮ ಸಾಂಸ್ಕೃತಿಕ ಮತ್ತು ವಿದ್ಯಾಪರ ಪುನರ್ಯೋಜನಾ ಕಾರ್ಯಕ್ರಮದಲ್ಲಿಯ ಒಂದು ಯುಕ್ತವಾದ ಹೆಜ್ಜೆ ಎಂದು ಅದನ್ನು ಸ್ವಾಗತಿಸಬೇಕು.

ನಮ್ಮ ಇಡೀ ಜನತೆಯ ನಿಜ ಹಿತಕ್ಕಾಗಿ ದುಡಿವ ಕೇಂದ್ರಸರಕಾರ ಮತ್ತು ಹಿಂದುಸ್ತಾನಿಯೊಡನೆ ಹೊಂದಿಕೊಂಡು ನಡೆವ ಪ್ರಾದೇಶಿಕ ಭಾಷೆಗಳು ನಮ್ಮ ಜನತೆಯ ಮೂಲಭೂತ ಐಕ್ಯಕ್ಕೆ ಹೊಂದಿರುವ ಪೂರ್ಣಾಭಿವೃದ್ಧಿಯನ್ನು ಸಾಧಿಸಲು, ನಮಗೆ ಅವಕಾಶ ಕೊಡುವವು.

ಅಹಮದಾಬಾದ — ಮಗನಭಾಯಿ ದೇಸಾಯಿ


೬-೫-೪೮

---

* ಕಾಕಾ ಸಾಹೇಬ ಕಾಲೇಲಕರರು ಈ ಕೆಳಗೆ ವರ್ಣಿಸಿದ ಹಿಂದುಸ್ತಾನಿಯ ಪದಸಂಪತ್ತಿಯ ಸ್ವರೂಪವು ಓದುಗರಿಗೆ ಕುತೂಹಲ ಹುಟ್ಟಿಸಬಹುದು.

'' ತನ್ನ ಗ್ರಂಥಸ್ವರೂಪದಲ್ಲಿ ಹಿಂದುಸ್ತಾನಿಯು ಹಿಂದಿ ಮತ್ತು ಉರ್ದುಗಳ ಒಂದು ಹಿತಕರವಾದ ಸಮ್ಮಿಶ್ರಣ. ಭಾರತೀಯ ಭಾಷೆಗಳೆಲ್ಲವುಗಳ ಶಬ್ದಸಂಪತ್ತಿನಲ್ಲೂ ಬಹುಭಾಗವು ಸಂಸ್ಕೃತ ಶಬ್ದಗಳ ಜನಜನಿತವಾದ ಪ್ರಾಕೃತ ರೂಪಗಳಿಂದ ಕೂಡಿದೆ ಎಂದು ಕಂಡು ಹಿಡಿಯಲಾಗಿದೆ. ಅನೇಕ ಪ್ರಾಂತ ಭಾಷೆಗಳಲ್ಲಿ ಬಳಕೆಗೆ ಬಂದಿರುವ ಅರಬ್ಬೀ ಮತ್ತು ಪರ್ಶಿಯನ್ ಶಬ್ದಗಳ ಸಂಖ್ಯೆಯನ್ನು ಅಲಕ್ಷಿಸಲು ಸಾಧ್ಯವಿಲ್ಲವೆಂಬುದನ್ನು ಸಾಮಾನ್ಯವಾಗಿ ಯಾರೂ ಲಕ್ಷ್ಯಿಸದಂತಿಲ್ಲ.

ಹರಿಜನ, ೧೫-೪-೪೮



ಮೈಸೂರ ಗೃಹ ಕೈಗಾರಿಕೆ ಉದ್ಯೋಗ ಪ್ರದರ್ಶನಕ್ಕೆ ಗ. ಜ. ರಾಜಾಜಿಯವರ ಸಂದರ್ಶನ

ಟಿಪ್ಪಣಿ:— ಈ ಕೆಳಗಿನ ಉದಾರ ನಿಯಮಗಳನ್ನು ನಾವು ಸ್ವೀಕರಿಸಿದರೆ ಬಹಳ ಅನುಕೂಲವಾದೀತೆಂದು ನನ್ನ ಎಣಿಕೆ:

(೧) ಪ್ರತಿಯೊಬ್ಬ ಮ್ಯಾಟ್ರಿಕ್ ಪಾಸಾದವನೂ ಕೊನೆಯ ಪಕ್ಷ ದ್ವಿಭಾಷಿಯಾಗಿರಬೇಕು; ಅಂದರೆ ಒಂದು ಪ್ರಾದೇಶಿಕ ಭಾಷೆ ಮತ್ತು ಹಿಂದುಸ್ತಾನಿಯನ್ನು ಬಲ್ಲವನಾಗಿರಬೇಕು.

(೨) ಇಂಗ್ಲೀಷು ಅಥವಾ ಇನ್ನಾವುದಾದರೊಂದು ಭಾರತೀಯ ಭಾಷೆಯಂತೆಯೇ ಹಿಂದುಸ್ತಾನಿಯೂ ಒಂದು ಎಂದು ತಿಳಿದು ಅಷ್ಟೆ ಸಂಪೂರ್ಣವಾಗಿ ಬೆಳೆಸಿಕೊಳ್ಳಬೇಕು. ಒಬ್ಬ ಸ್ನಾತಕನಿಗೆ ಆ ಭಾಷೆಯಲ್ಲಿ ತಕ್ಕಮಟ್ಟಿನ ಜ್ಞಾನವಿದ್ದರೆ ಸಾಲದು; ಸಾಕಷ್ಟು ಜ್ಞಾನವಿರಬೇಕು. ಅವನು ಅದನ್ನು ಸರಿಯಾಗಿ, ಪ್ರಯೋಗರೂಢಿಗನುಸಾರವಾಗಿ ಬರೆಯಲೂ ಮಾತಾಡಲೂ ಬಲ್ಲವನಾಗಿರಬೇಕು. ಮತ್ತು ಅವಶ್ಯವಿದ್ದರೆ ಅವನು ಹಿಂದುಸ್ತಾನೀ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಬೇಕು. ಆದ್ದರಿಂದ ಅದು ವಿಶ್ವವಿದ್ಯಾಲಯದ ಅಥವಾ ಅವರ ಹಿಂದಿನ ವಿದ್ಯಾಭ್ಯಾಸದಲ್ಲಿ ಅಲಕ್ಷಿತ ವಿಷಯವಾಗಿರಬಾರದು. ಈಗ ಇಂಗ್ಲೀಷಿಗೆಷ್ಟು ಲಕ್ಷಕೊಡಲಾಗುತ್ತಿದೆಯೋ ಅಷ್ಟೇ ಲಕ್ಷವನ್ನು ಅದಕ್ಕೆ ಕೊಡಬೇಕು; ಆದರೆ ಇಂಗ್ಲೀಷಿನಂತೆ ಅದನ್ನು ಎಲ್ಲೆಡೆಯಲ್ಲೂ ಬೋಧಕ ಭಾಷೆಯನ್ನಾಗಿ ಮಾಡಬೇಕಾಗಿಲ್ಲ.

(೩) ಪ್ರಾಧ್ಯಾಪಕರ ವಿನಿಮಯಕ್ಕಾಗಿ ಪರಪ್ರಾಂತದ ಪ್ರಾಧ್ಯಾಪಕರ ಸೇವೆಯನ್ನು ಬಳಸಿಕೊಳ್ಳಲಿಕ್ಕಾಗಿ ಒಂದು ಅಪವಾದವೆಂದು ಹಿಂದುಸ್ತಾನಿಯನ್ನು ಬೋಧಕ ಭಾಷೆಯನ್ನಾಗಿ ಉಳಿಸಬೇಕಾಗಬಹುದು. ಇಂಗ್ಲೀಷು ಅಥವಾ ಪ್ರಾದೇಶಿಕ ಭಾಷೆ ಎಂದು ಐಚ್ಛಿಕವಾಗಿರಕೂಡದು; ಪ್ರಾದೇಶಿಕ ಭಾಷೆ ಅಥವಾ ಹಿಂದುಸ್ತಾನಿ ಎಂದಿರಬೇಕು.

(೪) ದಿಲ್ಲಿ, ಮುಂಬಯಿ, ಕಲಕತ್ತ, ಕಾನಪುರ, ನಾಗಪುರ ಮುಂತಾದ ವಿಶ್ವ ವಿಷಯ ಬೋಧಕ ವಿಶ್ವವಿದ್ಯಾಲಯಗಳಲ್ಲಿ ಅಥವಾ ವೈಯಕ್ತಿಕ ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ಎಲ್ಲ ಬೋಧನವನ್ನು ಹಿಂದುಸ್ತಾನಿಯ ಮೂಲಕವೇ ಮಾಡಬಹುದು.

ವರ್ಧಾ — ಕಿ. ಘ. ಮ.

೨೦-೭-೪೮

ಮುಂಬಯಿ ಪೂರೈಕೆ ಮಂತ್ರಿ ದಿನಕರರಾವ ದೇಸಾಯಿಯರು ಪ್ರಾಂತದ ಮಧ್ಯ ಭಾಗದ ೭ ಜಿಲ್ಲೆಗಳ ಕಲೆಕ್ಟರರೊಡನೆ ಬಟ್ಟೆಯ ಕಳ್ಳಪೇಟೆಯನ್ನು ನಿರ್ಮೂಲ ಗೊಳಿಸುವ ಯೋಜನೆಯ ಬಗ್ಗೆ ಚರ್ಚೆ ಮಾಡಿದರು.

೪ ಲಕ್ಷ ರೂ. ಗಳ ಉಳಿತಾಯ ಸರಕಾರದ ಮಿತವ್ಯಯ

ಸರ್ ಮಹಾರಾಜಸಿಂಗರು ಮುಂಬಯಿ ಗವ್ಹರ್ನರರ ಪದವಿಯನ್ನು ಸ್ವೀಕರಿಸಿದಂದಿನಿಂದ ಸರಕಾರೀ ಭವನದ ವಾರ್ಷಿಕ ವೆಚ್ಚದಲ್ಲಿ ಸುಮಾರು ೪ ಲಕ್ಷ ರೂ. ಗಿಂತ ಹೆಚ್ಚು ಉಳಿತಾಯವಾಗಿದೆಯೆಂದು ಸರಕಾರಿ ಪ್ರಕಟನೆ ಹೊರಟಿದೆ. ಗವರ್ನರರ ಪಗಾರವು ಮೊದಲು ೬೧೦ ಸಾವಿರರವಿದ್ದರೆ ಈಗ ೫॥ ಸಾವಿರ ಮಾತ್ರವಿದೆ. ಇನ್ನು ಮೇಲೆ ಗವರ್ನರರ ಭವನಕ್ಕಾಗಿ ಚಿಕ್ಕ ಸ್ಥಳ ಕೊಳ್ಳಲಾಗುವದಲ್ಲದೆ ಅವರ ಮನೆಯಲ್ಲಿಯ ಅನಾವಶ್ಯಕ ಕುರ್ಚಿ ಮೇಜು ಮೊದಲಾದವುಗಳನ್ನೂ ಕ್ರಮೇಣ ಕಡಮೆ ಮಾಡಲಾಗುವದು. ಸರಕಾರೀ ಭವನದಲ್ಲಿ ಮೊದಲು ೩೭ ಟೆಲಿಫೋನುಗಳಿದ್ದವು ಈಗ ಅವನ್ನು ೧೭ ಕ್ಕೆ ಇಳಿಸಲಾಗಿದೆ.

ನಾರದ ಸಿಂಹಾವಲೋಕನ

(೮ನೇ ಪುಟದಿಂದ)

ಹೋಲೆ ಕ್ರಮ ತೆಗೆದುಕೊಳ್ಳುವಾಗ ಪತ್ರಿಕಾ ಸಲಹೆ ಸಮಿತಿಯ ಅಭಿಪ್ರಾಯ ತೆಗೆದುಕೊಳ್ಳುವದು ಅವಶ್ಯವೆಂದೂ ಈ ಸಮಿತಿ ಸೂಚಿಸಿದ್ದು ನ್ಯಾಯ್ಯವಾಗಿದೆ, ಮಹತ್ವದ್ದಾಗಿದೆ. ಅದೇ ರೀತಿಯಾಗಿ ಅಧಿಕಾರಿಗಳ ಹುಕುಮುಗಳ ವಿರುದ್ಧ ನ್ಯಾಯಾಸ್ಥಾನಗಳಿಗೆ ಹೋಗುವ ಹಕ್ಕು ಪತ್ರಿಕೆಗಳಿಗೆ ಇರಬೇಕಾದುದು ಅವಶ್ಯ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಪತ್ರಿಕೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸಬಲ್ಲವಾದ್ದರಿಂದ ಸರಕಾರ ಮತ್ತು ಪತ್ರಿಕೆಗಳಲ್ಲಿ ತಿಕ್ಕಾಟ ನಡೆಯದಿರುವದು ಅವಶ್ಯ. ಪತ್ರಿಕಾ ಸಂಪಾದಕರ ಹೊಣೆ ಕರ್ತವ್ಯದಬಗ್ಗೆ ಮುಂಬಯಿಯಲ್ಲಿ ಕಳೆದ ತಿಂಗಳು ಕೂಡಿದ್ದ ಪತ್ರಿಕಾ ಸಂಪಾದಕರ ಪರಿಷತ್ತಿನಲ್ಲಿ ಮಾರ್ಗದರ್ಶನ ಮಾಡಲಾಗಿದೆ. ಪರಸ್ಪರ ವಿಶ್ವಾಸ ಹೆಚ್ಚುವದು ಅವಶ್ಯವೆಂಬುದನ್ನರಿತು ಸರಕಾರ ಮತ್ತು ಪತ್ರಿಕಾ ಸಂಪಾದಕರು ವರ್ತಿಸುವರೆಂದು ನಂಬಲಾಗಿದೆ.

(೯ನೇ ಪುಟದಿಂದ ಬಂದುದು)

ಅಪಥ್ಯಕರವಾದುದೇ. ಅದೂ ಒಂದು ಕುಲವೇ ಅಲ್ಲವೆ ? ಭಾಷೆ, ಧರ್ಮ, ಜಾತಿ, ಲಿಂಗಭೇದ, ವರ್ಗ ಇವೆಲ್ಲ ದಿನದ ಜೀವನದ ಸತ್ಯಾಂಶಗಳಾಗಿರಬಹುದು. ಅವುಗಳ ಪ್ರಯೋಜನವನ್ನು ನಾವು ಹೇಗೆ ಮಾಡಿಕೊಳ್ಳುವೆವೆಂಬುದರ ಮೇಲೆ ಒಕ್ಕಟ್ಟು ತಿಕ್ಕಾಟಗಳು ಅವಲಂಬಿಸಿವೆ. ಪರಸ್ಪರ ಶಾಂತಿಗೂ ಸಹಕಾರಕ್ಕೂ ಇವುಗಳ ಉಪಯೋಗವಾದರೆ ಸರಿಯೇ. ಒಬ್ಬರ ಸುಲಿಗೆಗಾಗಿ ಇಲ್ಲವೆ ಒಬ್ಬರ ಮೇಲಿನ ಸೇಡು ತೀರಿಸಿಕೊಳ್ಳಲಿಕ್ಕಾಗಿ ಅವನನ್ನು ಆಶ್ರಯಿಸಿದರೆ ಅದು ಅನುಚಿತವೇ.

ವರ್ಧಾ — ಕಿಶೋರಲಾಲ ಮಶ್ರುವಾಲಾ

೨೮-೬-೪೮

ರೂಪರಂಗ



ಹಿಂದುಸ್ತಾನದ ಹಿರಿಯೋಲಗದಲ್ಲಿ

ಹಿಂದುಸ್ತಾನದ ಹಿರಿಯೋಲಗದಲ್ಲಿ ತಾ. ೩೦ ರಂದು ತಿಳಿದು ಬಂದ ಅಂಶಗಳು:

ಮೊದಲೇ ಎರಡುಹೊಯ್ದ ಮನೆಯ ಬಿಡಿ ಭಾಗಗಳ ಕಾರಖಾನೆಯೊಂದನ್ನು ಬೇಗ ಸರಕಾರವು ಸ್ಥಾಪಿಸುವದು. ಇದಕ್ಕೆ ೨೦ ಲಕ್ಷ ರೂ. ವೆಚ್ಚ ತಗಲುವದು. ಈ ಕಾರಖಾನೆಯಲ್ಲಿ ಪ್ರತಿವರ್ಷ ೫ ಸಾವಿರ ಮನೆಗೆ ಸಾಲುವಷ್ಟು ಬಿಡಿ ಭಾಗಗಳಾಗುವವು. ೨ ಕೋಣೆ ಒಂದು ಅಡಿಗೆಯ ಮನೆ, ಒಂದು ಬಚ್ಚಲು, ಒಂದು ಬಂಕ ಅಂಗಳ ಇರುವ ಒಂದು ಸಣ್ಣ ಮನೆಗೆ ೨½ ಸಾವಿರ ರೂ. ತಗಲಬಹುದು. ಇದು ಯಶಸ್ವಿಯಾದಲ್ಲಿ ಪ್ರಾಂತಿಕ ಸರಕಾರಗಳೂ ಇಂತಹ ಕಾರಖಾನೆ ತೆರೆಯಬಹುದು.

ದಿಲ್ಲಿಯ ಸಮೀಪಕ್ಕೆ ಉಪನಗರ ಕಟ್ಟಿಸಲು ಸರಕಾರವು ೧ ಕೋಟಿ ೩ ಲಕ್ಷದಷ್ಟು ರೂ. ಮಂಜೂರ ಮಾಡಿದೆ.

ಹೈದರಾಬಾದಕ್ಕೆ ಹಿಂದುಸ್ತಾನದಿಂದ ೪ ಲಕ್ಷ ಮುಸಲ್ಮಾನರು ಹೋಗಿದ್ದಾರೆ. ಅವರಲ್ಲಿ ೧೦½ ಸಾವಿರದಷ್ಟು ಜನರನ್ನು ಸೈನ್ಯ ಮತ್ತು ಪೋಲೀಸಪಡೆಯಲ್ಲಿ ಸೇರಿಸಿಕೊಳ್ಳಲಾಗಿದೆ. ನಿರಾಶ್ರಿತರ ಸೋಗಿನಲ್ಲಿ ಇನ್ನು ಮೇಲೆ ಮುಸಲ್ಮಾನರು ಹೈದರಾಬಾದಕ್ಕೆ ಹೋಗುವದನ್ನು ತಡೆಗಟ್ಟಲಾಗುವದು. ಹೈದರಾಬಾದದಿಂದ ಬರುವ ಹಿಂದು ನಿರಾಶ್ರಿತರ ಸಂಖ್ಯೆ ನಿಶ್ಚಿತ ತಿಳಿಯದಿದ್ದರೂ ಅದು ದಿನದಿನಕ್ಕೆ ಹೆಚ್ಚುತ್ತದೆ ಹಾಗೂ ಪ್ರಾಂತಿಕ ಸರಕಾರದವರು ನಿರಾಶ್ರಿತರಿಗೆ ತಕ್ಕ ವ್ಯವಸ್ಥೆಯನ್ನು ಮಾಡಲಣಿಯಾಗಿದ್ದಾರೆ.

ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಸರದಾರ ಪಟೇಲರು, ಹೈದರಾಬಾದವು ದಿನದಿನವೂ ಏಕೆ ಪ್ರತಿ ರಾತ್ರಿಯೂ ತನ್ನ ಬಲ ಬೆಳೆಸುತ್ತಿದೆ ಎಂಬುದರ ಅರಿವು ಸರಕಾರಕ್ಕಿದೆ ಎಂದು ಹೇಳಿದರು.

ಸರಕಾರದ ನೌಕರಿಯಲ್ಲಿ ಇದ್ದವರನ್ನು ಬಿಟ್ಟು ಈಗ ಹಿಂದುಸ್ತಾನದಲ್ಲಿ ೧೦೧೪ ಜನರು ವಿದೇಶೀಯರಿದ್ದಾರೆ.

ಕರ್ನಾಟಕ ಪ್ರತಿನಿಧಿಯಾದ ಶ್ರೀ ದಿವಾಕರರಿಗೆ ಉತ್ತರಕೊಡುತ್ತ ಸರದಾರ ಪಟೇಲರು, ಕನ್ನಡಕ್ಕೆ ಕ್ಯಾನರೀಜ ಎಂದು ತಪ್ಪಾಗಿ ಹೇಳುವ ರೂಢಿಯ ಬಗ್ಗೆ ಸರಕಾರವು ವಿಚಾರ ಮಾಡುವದೆಂದು ಹೇಳಿದರು.

ರೇಲ್ವೆ ದರ ಗೊತ್ತುಪಡಿಸಲು ಒಂದು ಸಮಿತಿಯನ್ನು ನೇಮಿಸುವದೆಂದು ನಿರ್ಧಾರವಾಯಿತು.

ಕಾಯದೆ ವಿಷಯಕ ಮತ್ತು, ನಿರಾಶ್ರಿತರಿಗೆ ಸಂಬಂಧಪಟ್ಟ ಮಸೂದೆಗಳು, ಸೈನಿಕ ವಿವಾಹ ವಿಚ್ಛೇದನ, ಜನಗಣತಿಯ ಬಗ್ಗೆ ಮಸೂದೆಗಳೂ ಅಂಗೀಕೃತವಾದವು.

ಜನಗಣತಿಯ ಮಸೂದೆಯನ್ನು ಮಂಡಿಸುತ್ತ ಸರದಾರ ವಲ್ಲಭಭಾಯಿ ಪಟೇಲರು ಹೀಗೆ ಹೇಳಿದರು.

ಈ ಮೊದಲು ೧೦ ವರ್ಷಕ್ಕೊಮ್ಮೆ ಜನಗಣನೆಯ ನಾಟಕ ನಡೆದು ಸ್ವಾರ್ಥಸಾಧಕರು ತಮಗೆ ಬೇಕು ಬೇಕಾದಂತೆ ಅಂಕಿಸಂಖ್ಯೆ ತುಂಬಿಕೊಳ್ಳುತ್ತಿದ್ದರು. ಆದರಿಂದ ದೇಶಕ್ಕಾದ ಹಾನಿ ಅಪಾರವಿದೆ. ಅನೇಕ ಘಟನಾತ್ಮಕ ಬದಲಾವಣೆಗಳು ಈ ತಪ್ಪು ಅಂಕಗಳ ಆಧಾರದಿಂದಲೇ ನಡೆದು ಹೋದವು. ಇನ್ನು ಜನಗಣತಿಯು ಅತ್ಯಂತ ಜಾಗರೂಕತೆಯಿಂದ ನಡೆಯುವದಲ್ಲದೆ ಅದರಲ್ಲಿ ಒಂದು ತಪ್ಪು ಅಂಕವನ್ನೂ ಸೇರಿಸಲಾಗುವದಿಲ್ಲ. ಹಾಗೆ ಸೇರಿದರೆ ಅದನ್ನು ಕ್ಷಮಿಸಲೂ ಆಗುವದಿಲ್ಲ. ಈ ಬಗ್ಗೆ ಒಂದು ಶಾಶ್ವತ ವ್ಯವಸ್ಥೆಯಾಗಿ ಒಂದು ಕಾನೂನು ಈ ವಿಷಯವನ್ನು ಅತ್ಯಂತ ನಿಷ್ಠುರ ದಕ್ಷತೆಯಿಂದ ನಿರ್ವಹಿಸುವಂತೆ ನೋಡುವವು. ಜನಗಣನೆಯ ಪತ್ರದಲ್ಲಿ ಜಾತಿಯನ್ನು ಕಾಣಿಸಬೇಕೋ ಬೇಡವೊ ಎಂಬ ಬಗ್ಗೆ ಚರ್ಚೆ ನಡೆದು ತಾ. ೨೦ಕ್ಕೆ ಸಭೆ ಮುಂದೆ ಬಿತ್ತು.

ತಾ. ೨೦ ರಂದು ಕಲ್ಲಿದ್ದಲಿ ಕಣಿಯ ಕೆಲಸಗಾರರಿಗೆ ಪ್ರಾವಿಡೆಂಟಫಂಡ ಮತ್ತು ಬೋನಸ್ಸು ದೊರೆವ ಯೋಜನೆಯ ಬಗ್ಗೆ ಮಸೂದೆ ಸ್ವೀಕೃತವಾಯಿತು. ಇಂದು ೪ ತಾಸುಗಳಲ್ಲಿ ಒಟ್ಟು ೭ ಮಸೂದೆಗಳು ಅಂಗೀಕರಿಸಲ್ಪಟ್ಟವು.

ಫ್ರೆಂಚ ಹಿಂದುಸ್ತಾನದ ಭವಿತವ್ಯವನ್ನು ಜನಮತಗಣನೆಯ ನಂತರ ಅದರಂತೆ ನಿರ್ಧರಿಸಬು ಫ್ರೆಂಚ ಸರಕಾರ ಒಪ್ಪಿದೆಯೆಂದೂ ಫ್ರೆಂಚ ಹಿಂದುಸ್ತಾನದ ೪ ಪ್ರದೇಶಗಳ ನಗರ ಸಂಸ್ಥೆಯ ಚುನಾವಣೆಯ ನಂತರ ಈ ಎಲ್ಲ ಸದಸ್ಯರು ಒಟ್ಟಿಗೆ ಸೇರಿ ಸಾರ್ವತ್ರಿಕ ಮತಗಣನೆಯ ದಿನವನ್ನು ನಿರ್ಧರಿಸುವರೆಂದೂ ಪಂ. ನೆಹರೂ ಅವರು ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದರು.

೧೯೪೮ ರಲ್ಲಿ ಪರದೇಶದಿಂದ ಹಿಂದುಸ್ತಾನಕ್ಕೆ ೫೫೦೧ ಲಕ್ಷ ರೂ. ಗಳ ೧೪.೦೫,೦೦೦ ಟನ್ ಗೋದಿಯನ್ನು ತರಿಸಲಾಗಿದೆ. ೪೬೪೦ ಲಕ್ಷ ರೂ. ಗಳ ೪,೬೩,೦೦೦ ಟನ್ ಅಕ್ಕಿಯನ್ನು ಬರುವ ವರ್ಷದಲ್ಲಿ ತರಿಸಲಾಗುವದು ಅಧಿಕಧಾನ್ಯ ಬೆಳೆಯುವ ಪ್ರಚಾರದ ಮೂಲಕ ವರುಷ ವರುಷ ಪರದೇಶದಿಂದ ತರಿಸುವ ಆಹಾರ ಧಾನ್ಯವು ಕಡಿಮೆಯಾಗುವದು.

ಇನ್ನು ಮೇಲೆ ೩ ನೇ ವರ್ಗದ ರೇಲ್ವೆ ಡಬ್ಬಿಗಳನ್ನು ಕಟ್ಟಿಸುವದಿಲ್ಲ. ಅವುಗಳ ಬದಲು ೧೯೫೦ ರ ಹೊತ್ತಿಗೆ ಸುಧಾರಿಸಿದ ಸಾಮಾನ್ಯ ವರ್ಗದ ಬಂಡಿಗಳು ಓಡಾಡುವವು. ಇವುಗಳಲ್ಲಿ ದೀಪಗಳು ಕುಡಿಯುವ ನೀರು ಮೊದಲಾದ ಸೌಕರ್ಯ ಇಡಲಾಗುವದು.

ಇಸ್ರಾಯಿಲ ಸರಕಾರಕ್ಕೆ ಮಾನ್ಯತೆ ಕೊಡುವ ಪೂರ್ವದಲ್ಲಿ ರಾಷ್ಟ್ರೀಯ ಅಂತರ ರಾಷ್ಟ್ರೀಯ ಅಂಶಗಳನ್ನೆಲ್ಲ ಪರಿಶೀಲಿಸಲಾಗುವದೆಂದೂ ಈ ಬಗ್ಗೆ ಹಿಂದುಸ್ತಾನದ ಎಲ್ಲ ಪಂಗಡದವರ ಅಭಿಮತವನ್ನೂ ಗಣನೆಗೆ ತಂದುಕೊಳ್ಳಲಾಗುವದೆಂದೂ ಪಂ. ನೆಹರು ಹೇಳಿದರು.

ಬೆಂಗಳೂರಲ್ಲಿ ಟೆಲಿಫೋನ ಕಾರಖಾನೆಯು ಇನ್ನು ೪ ತಿಂಗಳಲ್ಲಿ ಪ್ರಾರಂಭವಾಗುವದು. ಎಲ್ಲ ಉಪಕರಣಗಳನ್ನೂ ಇಲ್ಲಿಯೇ ತಯಾರಿಸಬೇಕಾದರೆ ಇನ್ನು ೩ ವರ್ಷಗಳಾಗಬಹುದು. ಈ ಕಾರಖಾನೆಯಲ್ಲಿ ಮೊದಲು ೫ ವರ್ಷದಲ್ಲಿ ೬ ಕೋಟಿ ರೂಪಾಯಿಗಳು ನಂತರ ಪ್ರತಿ ವರ್ಷ ೨½ ಕೋಟಿ ರೂ. ಬೆಲೆಯ ಸರಕು ಸಿದ್ಧವಾಗುವದೆಂದೂ ೧೫ ವರ್ಷಗಳಲ್ಲಿ ೩೧ ಕೋಟಿ ರೂ. ಗಳಷ್ಟು ಉತ್ಪಾದನವಾಗಬಹುದೆಂದೂ ನಿರೀಕ್ಷೆಯಿದೆ.

ಭುವನೇಶ್ವರಿಯಲ್ಲಿ ಓಡಿಸಾದ ರಾಜಧಾನಿಯನ್ನು ಕಟ್ಟಿಸಲು ಹಿಂದುಸ್ತಾನ ಸರಕಾರವು ಓಡಿಸಾ ಸರಕಾರಕ್ಕೆ ೧೩೨ ಲಕ್ಷ ರೂ ಕೊಟ್ಟಿದೆ. ಕಳೆದ ವರ್ಷ ಬ್ರಿಟಿಶ ಸರಕಾರವು ಕೊಟ್ಟ ೮ ಕೋಟಿ ಸ್ಟರ್ಲಿಂಗ ಹಣ ಹಿಂದುಸ್ತಾನವೇಕೆ ಬಳಸಲಿಲ್ಲವೆಂದು ಶ್ರೀ ಅನಂತಶಯನಂ ಮತ್ತು ಶ್ರೀ. ದಿವಾಕರರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಶ್ರೀ. ನಿಯೋಗಿಯವರು, ಇಂಗ್ಲಂಡು ಕಳೆದ ವರ್ಷ ಕೊಟ್ಟ ೮೩೦ ಲಕ್ಷ ಸ್ಟರ್ಲಿಂಗು ಉಪಯೋಗಿಸಿದ್ದಲ್ಲದೆ ೮೪೦ ಲಕ್ಷ ಸ್ಟರ್ಲಿಂಗ ಸಾಲವಾಗಿ ಪಡೆದುಕೊಂಡು ಡಾಲರ ಕೊರತೆಯನ್ನು ಹಿಂದುಸ್ತಾನವು ನೀಗಿಸಿಕೊಂಡಿತು ಎಂದು ಹೇಳಿದರು.

ಹಿರಿಯೋಲಗದಲ್ಲಿ ತಾ.೨೩ ರಂದು ಕೆಳಗಿನ ವಿಷಯಗಳು ತಿಳಿದು ಬಂದವು.

ಜಾನೇವಾರಿಯಿಂದ ಜುಲೈ ವರೆಗೆ ೧೫ ದರೋಡೆ,೪೦೭೨ ಕಳವು, ೮೬ ಸುಲಿಗೆ ನಡೆದವು ಪೋಲೀಸ ಪಡೆ ಹೆಚ್ಚಿಸಲಾಗಿದೆ. ಈಗ ಇವೆಲ್ಲ ಇಳಿಮುಖವಾಗಿವೆ.

ನಡುಗಾಲ ಸರಕಾರವು ಅಧಿಕಾರದಲ್ಲಿ ಬರುವ ಮೊದಲೇ ಅನೇಕ ಬಾಂಬರ ವಿಮಾನಗಳೂ ಸಾರಿಗೆ ವಿಮಾನಗಳೂ ನಾಶಮಾಡಲ್ಪಟ್ಟಿವೆ.

ಸದೃಢಾಂಗರು ಭಿಕ್ಷೆಬೇಡಬಾರದೆಂಬ ಬಗ್ಗೆ ಕಾನೂನು ಮಾಡಬಹುದೆಂದು ಆರೋಗ್ಯ ಮಂತ್ರಿ ಕುಮಾರಿ ಅಮೃತಕುವರರು ಹೇಳಿದರು.

ಹೈದರಾಬಾದದಿಂದ ಓಡಿ ಬರುವ ಜನರನ್ನು ಶೋಧಿಸಿ ಸುಲಿದು ಹೊಡೆದು ಅಪಮಾನಗೊಳಿಸಿ ಬಿಡಲಾಗುತ್ತದೆ. ಹೈದರಾಬಾದದ ವಿದ್ಯಾರ್ಥಿಗಳಿಗೆ ವಿದ್ಯಾವ್ಯವಸ್ಥೆಯ ಜೊತೆಗೆ ಅವರ ಆರ್ಥಿಕ ವ್ಯವಸ್ಥೆಯನ್ನೂ ಮಾಡಲಾಗುವದೇ ಎಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಪಂ. ನೆಹರು ಅಂತಹ ಬೇಡಿಕೆ ಬಂದಲ್ಲಿ ಸರಕಾರವು ವಿಚಾರಿಸುವದು ಎಂದು ಹೇಳಿದರು.

ಮನೆ ಮನೆಯಲ್ಲಿ ಗಾಣ!

ಲೇಖಕ- ಶ್ರೀ ವಿ. ಜಿ. ಭಟ್ಟ, ಎಂ. ಎ. ಧಾರವಾಡ

ನಮ್ಮ ಹಳ್ಳಿಗಳು ಪೂರ್ವದಲ್ಲಿ ಸ್ವಯಂಪೂರ್ಣವಾಗಿದ್ದು ಆಗ ಅಖಂಡ ಶಾಂತಿ ಸುಖಗಳು ನೆಲಸಿದ್ದವಂತೆ. ಇಂದಿನ ಪುನರುಜ್ಜೀವನದ ಕಾಲದಲ್ಲಿ "ಭಾರತದ ಭಾಗ್ಯವೆಲ್ಲ ಅದರ ಹಳ್ಳಿಗಳಲ್ಲಿದೆ" ಎಂಬ ಮಹಾತ್ಮರ ವಾಣಿಯೇ ನಮ್ಮ ಸಮಾಜಸೇವಕರ—ಕಾರ್ಯಕರ್ತರ—ಮಂತ್ರವಾಗಬೇಕಾಗಿದೆ. ಹಳ್ಳಿಗಳು ಸ್ವಯಂಪೂರ್ಣವಾಗಬೇಕಾದರೆ ಅಲ್ಲಿಯ ಕುಟುಂಬಗಳೆಲ್ಲ ದೀಕ್ಷರಿಸಿಕೊಳ್ಳಬೇಕು. ಪ್ರತಿಯೊಂದು ಕುಟುಂಬವೂ ತನಗೆ ಅಗತ್ಯವಿರುವ ಒಡವೆಗಳನ್ನು ತನ್ನಿಂದಾದಷ್ಟು ಪೂರೈಸಿಕೊಳ್ಳಹತ್ತಿದರೆ ಇನ್ನೊಮ್ಮೆ ಬಂಗಾರದ ಹೊಗೆ ಹಾರಬಹುದು.

ಎಣ್ಣೆಯು ಎಲ್ಲ ಮನೆಗಳಿಗೂ ಬೇಕಾದ ಪದಾರ್ಥ. ಆರೋಗ್ಯಕ್ಕೆ ಎಣ್ಣೆ ಅಗತ್ಯ, ಆದರೆ ಇಂದು ಶುದ್ಧ ಎಣ್ಣೆ ಸಿಗುವದು ಅಪರೂಪ. ಗಾಣಿಗತನ ಕೆಟ್ಟಿದೆ. ಗಿರಣಿಗಳ ಎಣ್ಣೆ ಹಳ್ಳಿಗಳಲ್ಲೆಲ್ಲ ಹರಿದುಬಿಟ್ಟಿದೆ.

ತೆಂಗು ಬೆಳೆಯುವ ಕಡೆಗಳನ್ನಷ್ಟೇ ಕುರಿತು ಹೇಳುವುದಾದರೆ ಗುಡಿಸಲು ಮನೆಗಳ ಎದುರಿಗೆ ತೆಂಗಿನ ಗಿಡಗಳನ್ನು ಕಾಣಬಹುದು. ಇದನ್ನು ಕಲ್ಪವೃಕ್ಷವೆಂದು ಆದಿಯಿಂದಲೂ ಪೂಜಿಸುತ್ತ ಬಂದುದು ಹುಂಬತನವಲ್ಲ. ಲಿಂಗ ಪೂಜಕರಿಗೆ ಅನ್ನ ಆರೋಗ್ಯಾದಿಗಳೆಲ್ಲ ಶಿವನ ಸಂಕೇತ!

ಗಾಣಿಗರು ಮತ್ತೆ ತಮ್ಮ ಪತ್ತು ಬೆಳೆಸಿಕೊಂಡು ಹಳ್ಳಿಗಳಿಗೆ ಶುದ್ಧ ಎಣ್ಣೆ ಪೂರೈಸುವ ಕಾಲ ದೂರ ಇರಲಿಕ್ಕಿಲ್ಲ. ಆದರೆ ಅದಕ್ಕೂ ಮುಂಚೆ ತೆಂಗು ಬೆಳೆಯುವ ಪ್ರತಿಯೊಂದು ಕುಟುಂಬವೂ ತನಗೆ ಬೇಕಾಗುವ ಎಣ್ಣೆಯನ್ನು ಸುಲಭದಲ್ಲಿ ತೆಗೆದುಕೊಳ್ಳಲು ಬರುವಂತಾದರೆ ಒಳಿತಲ್ಲವೇ ?

ಇಂತಹದೊಂದು ಶೋಧವನ್ನು 'ಮುಂಬೈ ಗ್ರಾಮೋದ್ಯೋಗ ಸಮಿತಿ'ಯ ಕರ್ನಾಟಕ ಶಾಖೆಯ ಸಂಚಾಲಕರಾದ ಶ್ರೀ ಎಸ್. ಕೆ. ಕಲ್ಲಾಪುರ, ಬಿ. ಎ. ಎಲ್‌ಎಲ್. ಬಿ. ಅವರು ಮಾಡಿದ್ದಾರೆ. ಅವರು ಒಂದು ಕೈಗಾಣವನ್ನು ತಯಾರಿಸಿದ್ದು ಅದನ್ನು ಹೆಂಗಸರೂ ಮಕ್ಕಳೂ ತಿರುಗಿಸಬಹುದು. ಮನೆ ಮನೆಗೆ ಒರಳು ಇರುವಂತೆ ಇಂತಹದೊಂದು ಗಾಣವಿದ್ದರೆ ಅರ್ಧ ತಾಸು ಅದನ್ನು ತಿರುವಿ ಒಂದು ವಾರ ಮನೆಗೆ ಸಾಲುವಷ್ಟು ಎಣ್ಣೆಯನ್ನು ಒಬ್ಬ ಹೆಂಗಸು ತೆಗೆಯಬಹುದು.

ಇದರ ರಚನೆ ಆಕಾರಗಳೆಲ್ಲ ಸಾಮಾನ್ಯ ಗಾಣದಂತೆಯೇ ಇದೆ. ಸಣ್ಣದಿರುವುದರಿಂದ ಕೈಯಿಂದ ತಿರುಗಿಸಬರುತ್ತದೆ.

ಕೊಬ್ಬರಿಯಲ್ಲಿ ಸುಮಾರು ೬೭% ಎಣ್ಣೆಯಿರುತ್ತದೆ. ರೂಢಿಯಲ್ಲಿರುವ ಗಾಣದಿಂದ ೬೦–೬೨% ಎಣ್ಣೆ ಹೊರಡುತ್ತದೆ. ಆದರೆ ಈ ಹೊಸ ಬಗೆಯ ಕೈಗಾಣದಿಂದ ೫೦% ಎಣ್ಣೆ ಹೊರಡುತ್ತದೆ. ೧೦% ಕಡಮೆಯಾಗುತ್ತದೆಂದು ಯಾರೂ ಮೂಗುಮುರಿಯಬೇಕಾಗಿಲ್ಲ. ಈ ೧೦% ಎಣ್ಣೆಯುಳ್ಳ ಹಿಂಡಿಯು ಪ್ರತಿನಿತ್ಯದ ಉಪಯೋಗದ ಚಟ್ನಿ–ಸಾರು–ಹುಳಿಗಳಿಗೂ ಮಿಠಾಯಿಗಳಿಗೂ ಬರುತ್ತದೆ. ಇದನ್ನು ಉಪಯೋಗಿಸುವುದರಿಂದ ಆರೋಗ್ಯಕ್ಕೂ ಹಿತ; ರುಚಿ ಹೌದು; ಮಿತವ್ಯಯವೂ ಸಾಧಿಸುವದು. ಕುಟುಂಬದ ಆರೋಗ್ಯ, ಮಿತವ್ಯಯ ಇವುಗಳ ದೃಷ್ಟಿಯಿಂದಲೇ ಈ ಗಾಣದ ನಿರ್ಮಾಣವಾಗಿದೆ. ಸಾಬೂನು ವನಸ್ಪತಿ(Vegetable ghee) ಮುಂತಾದವುಗಳಿಗೆ ಬೇಕಾಗುವ ದೊಡ್ಡ ಪ್ರಮಾಣದ ಎಣ್ಣೆಹಾಗಲ್ಲ.

ಇದರಲ್ಲಿ ಇನ್ನೂ ಸುಧಾರಣೆಯಾಗಬೇಕಾಗಿದೆ. ಆದ ನಂತರ ಎಣ್ಣೆಯ ಪ್ರಮಾಣವೂ ಹೆಚ್ಚುವದು; ತಿರುಗಿಸಲು ಇನ್ನೂ ಸುಲಭವೂ ಆಗುವದು.

ಈ ಗಾಣವನ್ನು ಹೊನ್ನಾವರದ ವರ್ಕಶಾಪಿನಲ್ಲಿ ತಯಾರಿಸಲಾಗಿದ್ದು ಇದಕ್ಕೆ (ಹಲವಾರು ಪ್ರಯೋಗಗಳ ವೆಚ್ಚ ಹಿಡಿದು) ೬೫೦ ರೂ. ಮಟ್ಟಿಗೆ ಬಿದ್ದಿತು. ದೊಡ್ಡ ಪ್ರಮಾಣದಲ್ಲಿ– ಸಾವಿರಗಟ್ಟಲೆ– ತಯಾರಿಸಿದರೆ ಒಂದಕ್ಕೆ ೨೫–೩೦ ರೂ ತಗಲೀತೆಂದು ಅಂದಾಜು ಮಾಡಲಾಗಿದೆ.

ತಾಜಾ ಕೊಬ್ಬರಿಯೆಣ್ಣೆ ತುಪ್ಪದಷ್ಟೇ ಆರೋಗ್ಯಕರ. ದಿನದಲ್ಲಿ ತಾಸು—ಅರ್ಧ ತಾಸನ್ನು ಇದಕ್ಕಾಗಿ ಕಳೆಯಲು ಹೆಂಗಸರಿಗೆ ಬಿಡುವಿಲ್ಲ ಎನ್ನುವುದಿಲ್ಲ. ಹಳ್ಳಿಗಳಲ್ಲಿ ಗುಡಿಸಲೊಂದು ಇದ್ದರೂ ಅದರ ಸುತ್ತಲಿನ ಜಾಗದಲ್ಲಿ ತೆಂಗಿನಗಿಡ ಹಾಕಿಕೊಂಡು ಮನೆತನಕ್ಕೆ ಸಾಲುವಷ್ಟು ಕಾಯಿ ಬೆಳೆಯಬಹುದು.

ತೆಂಗು ಬೆಳೆಯದ ಭಾಗದವರು ಕೊಬ್ಬರಿ ಕೊಂಡು ಎಣ್ಣೆ ತಯಾರಿಸಿಕೊಳ್ಳಬಹುದು. ಆದರೆ ಎಣ್ಣೆಗೆ ಬೇಕಾಗುವ ಕೊಬ್ಬರಿ ಚೆನ್ನಾಗಿ ಬೆಳೆದ ಕಾಯಿಯದಾಗಿರಬೇಕು. ಕೊಂಡುಕೊಳ್ಳುವಾಗ ಇಂಥ ಕೊಬ್ಬರಿಯನ್ನು ಜಾಣ್ಮೆಯಿಂದ ಆರಿಸಬೇಕು. ಎಣ್ಣೆಯು ಕಾಳಿನಿಂದ ಎಷ್ಟು ಎಣ್ಣೆ ಹೊರಡುವದು, ಯಾವ ಯಾವ ಕಾಳು ಈ ಗಾಣದಲ್ಲಿ ಸುಲಭವಾಗಿ ಎಣ್ಣೆ ಕೊಡುವವು——ಎಂಬ ಮುಂತಾದ ಕೆಲವು ವಿಷಯಗಳನ್ನು ಇನ್ನೊಮ್ಮೆ ಬರೆಯುವೆ.

ಕಾಶ್ಮೀರದಲ್ಲಿ ಕಾದುವ ಸೈನಿಕರಿಗೆ ವಿಶ್ರಾಂತಿ ಒದಗಿಸಲು ಕಾಲಕಾಲಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಎಂದು ಇನ್ನೊಂದು ಪ್ರಶ್ನೆಗೆ ಉತ್ತರ ಹೇಳಲಾಯಿತು.

ಗವರ್ನರ ಜನರಲ್‌ರಾದ ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರು ಮದ್ರಾಸಕ್ಕೆ ಆಗಮಿಸಿದಾಗಿ ಜನರು ಅವರನ್ನು ಕರೇನಿಶಾನಿಯಿಂದ ಅಪಮಾನಗೊಳಿಸಬೇಕೆಂದೂ ಯಾರೂ ಅವರ ದರ್ಶನಕ್ಕೆ ಹೋಗಬಾರದೆಂದೂ ಪ್ರಚಾರ ಮಾಡಿದ ಕಾರಣಕ್ಕಾಗಿ ದ್ರವಿಡಸ್ತಾನ ಚಳವಳಿಯ ಮುಖಂಡರಾದ ಶ್ರೀ. ರಾಮಸ್ವಾಮಿ ನಾಯಕರನ್ನೂ ಹಿಂದೀ ಭಾಷಾ ವಿರೋಧಿ ಚಳವಳಿಯ ಪ್ರಮುಖ ಚಳವಳಿಯ ಪ್ರಮುಖ ಕೆಲಸಗಾರರನ್ನೂ ಪೋಲೀಸರು ಬಂಧಿಸಬೇಕಾಯಿತು. ಈ ಬಗ್ಗೆ ಒಟ್ಟು ೯೦ ಜನರನ್ನು ಬಂಧಿಸಲಾಗಿದೆ.

ಕರ್ನಾಟಕ

ವಿಜಾಪುರ

ಮುಧೋಳದಲ್ಲಿ ಸ್ವಾತಂತ್ರ್ಯ ವರ್ಧಂತ್ಯುತ್ಸವ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅ್ಯಡಿಶನಲ್ ಅ್ಯಡ್ಮಿನಿಸ್ಟ್ರೇಟರರಾದ ಎಸ್. ಎಂ. ವಾಲಿಯವರ ಹಸ್ತದಿಂದ ಧ್ವಜವಂದನೆಯಾಯಿತು. ಟ್ರೇಜರಿ ಆಫೀಸಿನ ಪಟಾಂಗಣದಲ್ಲಿ ವೃಕ್ಷಾರೋಪಣವಾಯಿತು. ಮಧ್ಯಾನ್ಹ ಗೋವಿಂದಪುರ ಓಣಿಯವರು ೨-೩ ಸಾವಿರ ಬಡಬಗ್ಗರಿಗೆ ಅನ್ನಸಂತರ್ಪಣೆ ಮಾಡಿದರು. ಅ್ಯ. ಅಡ್ಮಿನಿಸ್ಟ್ರೇಟರರು ಮತ್ತು ಉಪ ಸಮಿತಿಯವರು ವಸ್ತ್ರದಾನ ಮಾಡಿದರು. ಸಾಯಂಕಾಲ ಡಿ. ಎಚ್. ಸಕ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಹಲವರ ಭಾಷಣಗಳಾದವು. ರಾತ್ರಿ ದೀಪೋತ್ಸವವಾಯಿತು.

ಝಳಕಿಯಲ್ಲಿ ನಗರ ಸಂಕೀರ್ತನ ಧ್ವಜವಂದನೆಯಾಗಿ ಶ್ರೀ ಧೊಂಡಾಚಾರ್ಯ ಜಾಹಗೀರದಾರರ ಅಧ್ಯಕ್ಷತೆಯಲ್ಲಿ ಸಾಯಂಕಾಲ ಸಾರ್ವಜನಿಕ ಸಭೆ ಸೇರಿತು. ಶ್ರೀ ಝಳಕಿ ಮತ್ತು ಅನಂತಾಚಾರ್ಯ ಜಾಗಿರದಾರ ಮೊದಲಾದವರ ಭಾಷಣಗಳಾಗಿ ವಂದೇಮಾತರಂದೊಡನೆ ಸಭೆ ಕೊನೆಗಂಡಿತು.

ಮಲಘಾಣದಲ್ಲಿ ಶ್ರೀ ಶಾಮರಾವ ಜಾಧವ ಇವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು.

ಗಂಜೀಹಾಳದಲ್ಲಿ ಸ್ವಾತಂತ್ರ್ಯ ವರ್ಧಂತಿ ಉತ್ಸವದಲ್ಲಿ ನಗರ ಸಂಕೀರ್ತನ ಗಾಂಧಿಜಿ ನೆಹರೂ ಭಾವಚಿತ್ರದ ಮೆರವಣಿಗೆ ಮೊದಲಾದ ಕಾರ್ಯಕ್ರಮ ನಡೆದವು.

ಅಹೇರಿಯಲ್ಲಿ ತಾ. ೧೫ ಮತ್ತು ೧೬ ಈ ಎರಡೂ ದಿನ ಸ್ವಾತಂತ್ರ್ಯವರ್ಧಂತಿ ಉತ್ಸವ ಆಚರಿಸಲ್ಪಟ್ಟಿತು. ನಗರ ಸಂಕೀರ್ತನ, ಧ್ವಜವಂದನ ಸಾರ್ವಜನಿಕ ಸಭೆ ಜರುಗಿದವು.

ಸಾತೀಹಾಳದಲ್ಲಿ ಸ್ವಾತಂತ್ರ್ಯವರ್ಧಂತಿಯು ವಿಜೃಂಭಣೆಯಿಂದ ಸಾಂಗವಾಯಿತು. ಶೃಂಗರಿಸಿದ ರಥದಲ್ಲಿ ಗಾಂಧೀಜಿ ಭಾವಚಿತ್ರದ ಮೆರವಣಿಗೆ ನಡೆಯಿತು.

ಹತ್ತರಕಿಹಾಳದಲ್ಲಿ ಸ್ವಾತಂತ್ರ್ಯ ಉತ್ಸವ ಜರುಗಿತು. ಬೇರೆ ಬೇರೆ ಜನರು ವಿವಿಧವಿಷಯಗಳ ಮೇಲೆ ಮಾತಾಡಿದರು.

ಲಾಯದಗುಂದಿಯಲ್ಲಿ ಶ್ರೀ ಶಿವನಗೌಡ ಪಾಟೀಲರ ಹಿರಿಯತನದಲ್ಲಿ ಸ್ವಾತಂತ್ರ್ಯೋತ್ಸವ ಜರುಗಿತು. ಗುಳೇದಗುಡ್ಡದಿಂದ ಶ್ರೀ ಗುಂಡಭಟ್ಟ ಜೋಶಿಯವರು ಮುಖ್ಯ ಅತಿಥಿಗಳಾಗಿ ಬಂದಿದ್ದರು.

ಯಲಗೂರಲ್ಲಿ ಸ್ವಾತಂತ್ರ್ಯೋತ್ಸವ ನಗರ ಸಂಕೀರ್ತನ, ಧ್ವಜವಂದನೆ ಸಾರ್ವಜನಿಕ ಸಭೆ ಮೊದಲಾದವುಗಳೊಂದಿಗೆ ವಿಜೃಂಭಣೆಯಿಂದ ಸಾಂಗವಾಯಿತು.

ಹಿರೇಅಲಗುಂಡಿಯಲ್ಲಿ ಸ್ವಾತಂತ್ರ್ಯ ವರ್ಧಂತಿಯು ಸಂಭ್ರಮದಿಂದ ಆಚರಿಸಲಾಯಿತು. ಬೀಳಗಿ ಮಹಾಸ್ವಾಮಿಗಳ ಹಸ್ತದಿಂದ ಧ್ವಜವಂದನೆಯಾಯಿತು. ಮುಗಳಖೋಡದಲ್ಲಿಯೂ ಉತ್ಸವವಾಯಿತು.

ಮಿರ್ಜಾ (ಮುಧೋಳ) ದಲ್ಲಿ ಸ್ವಾತಂತ್ರ್ಯ ವರ್ಧಂತಿ ಒಳ್ಳೆ ಅಟ್ಟಹಾಸದಿಂದ ಜರುಗಿತು. ನಗರ ಸಂಕೀರ್ತನ, ಧ್ವಜವಂದನ ವೃಕ್ಷಾರೋಪಣ, ಸಾರ್ವಜನಿಕ ಸಭೆ, ದೀಪೋತ್ಸವ ಮೊದಲಾದವು ನಡೆದವು.

ನಾಲತವಾಡದಲ್ಲಿ ಸಾಹೇಬ ಗೌಡರ ನೇತೃತ್ವದಲ್ಲಿ ಸ್ವಾತಂತ್ರ್ಯ ಉತ್ಸವ ಜರುಗಿತು.

ವಿಜಾಪುರನಗರಸಭೆಗೆ ಮುಂಬಯಿಸರಕಾರದವರು ಕೆಲವೊಂದು ಆರೋಪಗಳನ್ನು ಹೊರಿಸಿ ಅವುಗಳಿಗೆ ಸಪ್ಟಂಬರ ೨೦ ರೊಳಗಾಗಿ ಉತ್ತರ ಜವಾಬು ಕಳಿಸಬೇಕೆಂದೂ ನಗರ ಸಭೆಯನ್ನು ಏಕೆ ರದ್ದು ಮಾಡಬಾರದೆಂಬುದಕ್ಕೆ ಕಾರಣ ತೋರಿಸಬೇಕೆಂದೂ ಕೇಳಿರುವರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ.

ಬಳ್ಳಾರಿ

ಮಂತ್ರಾಲಯದಲ್ಲಿ ಎಂದಿನಂತೆ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ಸಾಂಗವಾಯಿತು. ಈ ವರುಷ ವಿಶೇಷ ಜನಸಮೂಹ ಕೂಡಿರದಿದ್ದರೂ ಎಲ್ಲ ಭಾಗಗಳಿಂದ ಭಕ್ತರು ಬಂದಿದ್ದರು. ಪೀಠಸ್ಥರಾದ ಶ್ರೀ ಸುಯಮೀಂದ್ರ ತೀರ್ಥ ಶ್ರೀಪಾದಂಗಳವರು ಎಲ್ಲವನ್ನು ಚೊಕ್ಕಟವಾಗಿ ನೆರವೇರಿಸಿದರು. ಶನಿವಾರ ಬೆಳ್ಳಿ ರಥದಲ್ಲಿ ವಾಹನೋತ್ಸವ ರವಿವಾರ ರಥೋತ್ಸವ ನಡೆಯಿತು.

ಧಾರವಾಡ

ಮಾರನಬೀಡದಲ್ಲಿ ಸ್ವಾತಂತ್ರ್ಯವರ್ಧಂತಿಯು ನಗರ ಸಂಕೀರ್ತನ, ಧ್ವಜಾರೋಹಣ, ವಿದ್ಯಾರ್ಥಿಗಳ ಕೂಟ, ವೃಕ್ಷಾರೋಪಣ, ಗಾಂಧೀಜಿಗೆ ಶ್ರದ್ಧಾಂಜಲಿ ಸಮರ್ಪಣ ಮೊದಲಾದ ಕಾರ್ಯಕ್ರಮದೊಂದಿಗೆ ಜರುಗಿತು.

ಕುಂದಗೋಳದಲ್ಲಿ ಸ್ವಾತಂತ್ರ್ಯೋತ್ಸವ ಸಭೆಯಲ್ಲಿ ಗಾಂಧೀನಿಧಿ ಕೂಡಿಸುವ ಕಾರ್ಯಕ್ರಮ ಕೈಕೊಂಡು ೯೪೫ ರೂ. ಕೂಡಿಸಲಾಯಿತು.

ಶ್ರೀ ಹುಕ್ಕೇರಿಕರ ಸತ್ಕಾರಸಮಿತಿಯು ಸಭೆ ೨೪ ಕ್ಕೆ ಧಾರವಾಡದಲ್ಲಿ ಸೇರಿ ಕೆಲಸವು ಮುಗಿದದ್ದರಿಂದ ವಿಸರ್ಜನೆ ಹೊಂದಿತು. ಸಮಿತಿಯು ಶೇಖರಿಸಿದ ಹಣದಲ್ಲಿ ವೆಚ್ಚ ಹೋಗಿ ಉಳಿದ ೧೨೩೫ ರೂಪಾಯಿಗಳನ್ನು ಧಾರವಾಡ ಕೆ. ಈ. ಬೋರ್ಡ ಕಾಲೇಜಿನ ವ್ಯವಸ್ಥಾಪಕ ಮಂಡಲದ ಅಧ್ಯಕ್ಷರಾದ ಶ್ರೀ ಹುಕ್ಕೇರಿಕರರಿಗೆ ಹುಕ್ಕೇರಿಕರ ಪಾರಿತೋಷಕಕ್ಕೋಸುಗ ಕೊಡಲಾಯಿತು

ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕೆಲ ವರುಷಗಳ ಹಿಂದೆ ಇಂಗ್ಲಿಶ ವಿಷಯದ ಪ್ರಾಧ್ಯಾಪಕರಾಗಿದ್ದ ಪ್ರೊ. ಧ್ರುವ ಇವರು ಅಹಮದಾಬಾದಿನಲ್ಲಿ ಅರ್ಧಾಂಗವಾಯುವಿನಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕರ್ನಾಟಕ ಸೆಂಟ್ರಲ್ ಕೋಆಪರೇಟಿವ ಬ್ಯಾಂಕಿನವರು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ೧೫೦೦೦ ರೂ. ಕೊಡಬೇಕೆಂದು ನಿರ್ಧರಿಸಿರುವರು ಸಹಕಾರಿ ಕೊಳ್ಳುವ ಮತ್ತು ಮಾರಾಟ ಸಂಘದವರು ೨೦೦೦ ರೂಪಾಯಿ ನಿಧಿಗೆ ಸಮರ್ಪಿಸಲಿರುವರು.

ಬೆಳಗಾವಿ

ಗೋಕಾವಿಯಲ್ಲಿ ಸರಕಾರಿ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜು ಪ್ರಾರಂಭವಾಗಲಿದ್ದು ಆ ಬಗ್ಗೆ ಸ್ಥಳ ನೋಡಿರುವರು.

ಕಿತ್ತೂರಿನ ಜನರು ೧೫೦೦೦ ರೂ. ವರ್ಗಣಿಯಿಂದ ಕಟ್ಟಿಸಿದ ಮಹಾತ್ಮಾ ಗಾಂಧಿ ಸ್ಮಾರಕ ಆಸ್ಪತ್ರೆಯ ಪ್ರಾರಂಭೋತ್ಸವ ಶಾಸನ ಸಭೆಯ ಉಪಾಧ್ಯಕ್ಷ ಶ್ರೀ. ಅಂಗಡಿ ಷಣ್ಮುಖಪ್ಪಾ ಇವರ ಹಸ್ತದಿಂದ ೧೯ ಕ್ಕೆ ಜರುಗಿತು.

ಸಾವಳಗಿಯ ರಾಯಪ್ಪಾ ಬೆಳಗಲಿ ಮೊದಲಾದ ೧೪ ದರೋಡೆಗಾರರನ್ನು ವಿಜಾಪುರ ಪೋಲೀಸರು ೨೦ ಕ್ಕೆ ಬಂಧಿಸಿದರು. ಅಥಣಿ ತಾಲೂಕಿನಲ್ಲಿ ನಡೆದ ಅನೇಕ ದರೋಡೆಗಳಲ್ಲಿ ಇವರ ಅಂಗವಿದೆಯಂತೆ.

ಹುಣಶ್ಯಾಳದಲ್ಲಿ ತರುಣ ಸಂಘದವರು ಸ್ವಾತಂತ್ರ್ಯೋತ್ಸವವನ್ನು ಜರುಗಿಸಿದರು. ಗೋವಿಂದಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಲವರ ಭಾಷಣಗಳಾದ ನಂತರ ಗ್ರಾಮ ಸಂಘಟಕ ದಲವನ್ನು ಸ್ಥಾಪಿಸಲಾಯಿತು.

ಮರೀಕಟ್ಟಿಯಲ್ಲಿ ನಗರ ಸಂಕೀರ್ತನ, ಧ್ವಜವಂದನೆ ಶ್ರೀ ದುದಮಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಮೊದಲಾದ ಕಾರ್ಯಕ್ರಮಗಳೊಂದಿಗೆ ಸ್ವಾತಂತ್ರ್ಯ ವರ್ಧಂತಿಯು ಆಚರಿಸಲ್ಪಟ್ಟಿತು.

ಉತ್ತರ ಕನ್ನಡ

ಶಿರಸಿಯ ಶ್ರೀ ಸ್ವರ್ಣವಲ್ಲಿ ಮಹಾ ಸಂಸ್ಥಾನದ ಶ್ರೀ ಸರ್ವೇಂದ್ರ ಸರಸ್ವತಿ ಸ್ವಾಮಿಗಳು ಭಾರತ ಸ್ವಾತಂತ್ರ್ಯೋದಯದ ದ್ವಿತೀಯ ವರ್ಧಂತ್ಯುತ್ಸವದ ಕಾಲಕ್ಕೆ ಅಶೇಷ ಭಾರತೀಯರು ಭಾರತದ ಪುನಃರುಜ್ಜೀವನಕ್ಕಾಗಿ ಮತ್ತು ಜಗತ್ತಿನ ಶಾಂತಿಗಾಗಿ ನಿರತರಾಗಿ ದೇಶವಿದೇಶಗಳಲ್ಲಿ ಪ್ರಬಲರಾಗಲೆಂದು ಶ್ರೀ ಲಲಿತಾಂಬಿಕೆಯನ್ನು ಪ್ರಾರ್ಥಿಸಿದರು.

ದೊಡ್ಮನೆಯಲ್ಲಿ ಗ್ರಾಮಸ್ಥರೂ ಶಾಲಾ ಬಾಲ ಬಾಲಿಕೆಯರೂ ಸೇರಿ ಸ್ವಾತಂತ್ರ್ಯ ವರ್ಧಂತಿ ಉತ್ಸವ ವಿಜೃಂಭಣೆಯಿಂದ ಜರುಗಿಸಿದರು. ಶಂಭುಭಟ್ಟ ನಾಜಗಾರು ಇವರ ಅಧ್ಯಕ್ಷತೆಯಲ್ಲಿ ಸಭೆ ಮೊದಲಾದ ಕಾರ್ಯಕ್ರಮ ನಡೆಯಿತು.

ಕಾರವಾರ ಸೇವಾದಲದವರು ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ತಾ. ೧೫ ರಿಂದ ಈ ವರೆಗೆ ೧೬೪೧ ರೂಪಾಯಿ ಕೂಡಿಸಿರುವರು.

ಕಾರವಾರ ಅರಣ್ಯಗಳಲ್ಲಿಯ ಯಲ್ಲಾಪೂರ "ಸಿರಸಿ" ಕ್ಷೇತ್ರದಲ್ಲಿ ಕಡ್ಡಿಕಾರಖಾನೆಯನ್ನು ತೆರೆಯುವವರಿಗೆ ಮುಂಬಯಿ ಸರಕಾರವು ಸೌಕರ್ಯ ಒದಗಿಸಿಕೊಡಲಿದೆ. ಕಡ್ಡಿಗಳನ್ನು ಮಾತ್ರ ತಯಾರಿಸುವದಕ್ಕೆ ಸಿರಸಿಯೇ ಯೋಗ್ಯ ಸ್ಥಳವಾಗಿದೆ. ದೊಡ್ಡ ಕಾರಖಾನೆಯನ್ನು ತೆರೆಯುವದಾದರೆ ಧಾರವಾಡ ಹುಬ್ಬಳ್ಳಿ ಸಮೀಪ ತೆರೆಯುವದು ಲಾಭಕರವಾಗಬಲ್ಲದು.

ಮಂಚೀಕೇರಿಯಿಂದ ಅರ್ಧ ಮೈಲಿನ ಮೇಲಿದ್ದ ಹೋಗಭಟ್ಟದ ಕೇರಿಯಲ್ಲಿ ತಾ.೨೦ ರಾತ್ರಿ ೨೦-೨೫ ಜನ ಶಸ್ತ್ರಧಾರಿಗಳು ಮಹಾಬಲೇಶ್ವರ ಸುಬ್ಬಯ್ಯ ಹೆಗಡೆ ಇವರ ಮನೆ ಒಡೆದು ಒಳ ನುಗ್ಗಿ ೫-೬ ಜನರನ್ನು ಥಳಿಸಿ ಹೆಗಡೆಯವರನ್ನು ಗುಂಡಿಕ್ಕಿ ಕೊಂದರೆಂದು ಸುದ್ದಿ ಬಂದಿದೆ. ಕೈಗೆ ಸಿಕ್ಕದ್ದನ್ನು ದರೋಡೆಗಾರರು ದೋಚಿಕೊಂಡು ಹೋಗಿರುವರು.

ದಕ್ಷಿಣ ಕನ್ನಡ

ಕಾಸರಗೋಡ ತಾಲೂಕು ಸಂಪೂರ್ಣವಾಗಿ ಮಂಗಳೂರು ಜಿಲ್ಲೆಗೆ ಸೇರಬೇಕು. ನೀಲೇಶ್ವರದಿಂದ ದಕ್ಷಿಣಕ್ಕೆ ಮಲೆಯಾಳಿ ಮಾತು ನಡೆಯುವದಾದರೂ ಅಲ್ಲಿನ ಜನರಿಗೆ ದಕ್ಷಿಣ ಕನ್ನಡ ಜಿಲ್ಲೆಯವರೊಂದಿಗಿರುವದೇ ಹಿತಕರವಾಗಿದೆಯೆಂದು ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಂ ಲೀಗಿನ ಅಧ್ಯಕ್ಷ ಶ್ರೀ ಎಚ್. ಎಚ್. ಚಮ್ನಾಡ ರವರು ಭಾಷಾವಾರ ಪ್ರಾಂತ ರಚನಾ ಸಮಿತಿಗೆ ಕಳಿಸಿದ ಮನವಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆಂದು ತಿಳಿಯುತ್ತದೆ.

ದಿನಾಂಕ ೧೫ ರಂದು ಮಂಗಳೂರಲ್ಲಿ ಸ್ವಾತಂತ್ರ್ಯದ ಪ್ರಥಮ ವಾರ್ಷಿಕೋತ್ಸವನ್ನು ದೇಶನಾಯಕರ ಸೂಚನೆಯಂತೆ ಗಂಭೀರವಾಗಿ ಜರುಗಿತು. ಬೆಳಿಗ್ಗೆ ೮ ಗಂಟೆಗೆ ಕೇಂದ್ರ ಬಯಲಲ್ಲಿ ಕಲೆಕ್ಟರರಾದ ಶ್ರೀ. ಎಸ್. ಆರ್. ರೈವಾರ್ ರವರು ಧ್ವಜವಂದನೆಯನ್ನು ಜರುಗಿಸದರು. ಸಂಜೆಗೆ ಜರಗಿದ ಸಾರ್ವಜನಿಕ ಸಭೆಗೆ ಜಿಲ್ಲಾ ಕಾಂಗ್ರೆಸ ಅಧ್ಯಕ್ಷ ಪಿ. ಎಲ್. ನಾಯಕರು ಅಧ್ಯಕ್ಷರಾಗಿದ್ದರು. ಹುತಾತ್ಮರನ್ನು ಸ್ಮರಿಸುವ ಠರಾವನ್ನು ಅಧ್ಯಕ್ಷರು ಮಂಡಿಸಿದ ಮೇಲೆ ಶ್ರೀಗಳಾದ ಎಲ್. ಸಿ. ಪಾಯಿಸ್, ಕೆ. ಕೆ. ಶೆಟ್ಟಿ, ಎನ್. ಎಸ್. ಸುವರ್ಣ, ಎಚ್. ಸುರೇಶ, ಬಿ. ದಾಮೋದರ ಬಾಳಿಗಾ, ಮತ್ತು ಎನ್. ಎಸ್. ಕಿಲ್ಲೆಯವರ ಭಾಷಣಗಳಾದುವು. ಆ ಮೊದಲು ವಿದ್ಯಾರ್ಥಿಗಳೊಳಗೆ ಜರಗಿದ ಸ್ಪರ್ಧೆಯ ಬಹುಮಾನ ವಿತರಣೆಯಾಯಿತು.

ದಿನಾಂಕ ೮ ರಂದು ಜಿಲ್ಲೆಯ ಹಲವೆಡೆಗಳಲ್ಲಿ ಹೈದರಾಬಾದ ದಿನಾಚರಣೆಯಾಗಿ ಹೈದರಾಬಾದಿನ ಕಾಂಗ್ರೆಸ್ಸಿಗೆ ಸಹಾಯ ನೀಡುವ, ರಜಾಕಾರರ ದಮನನೀತಿಯನ್ನು ಖಂಡಿಸುವ ಠರಾವುಗಳಾಗಿವೆ.

ಕನ್ನಡ ಸಂಸ್ಥಾನ

ಕೊಲ್ಲಾಪುರದ ಪ್ರಗತಿ ಮಂಡಳದ ಸಾಮಾನ್ಯ ಸಭೆಯು ವಿಶೇಷ ಅಧಿವೇಶನ ಕರೆದು ಕಾರ್ಯಕಾರಿ ಮಂಡಳದ ಚುನಾವಣೆ ನಡೆಸಿತು. ಮುಂಬಯಿ ಪ್ರಾಂತ ಕೆಲಸಗಾರರ ಸಂಬಂಧದಲ್ಲಿ ವಿವರವನ್ನು ತಿಳಿದುಕೊಂಡ ನಂತರ ಹಣ ಸಹಾಯವನ್ನು ವ್ಯಕ್ತಪಡಿಸಬೇಕೆಂದು ಗೊತ್ತಾಯಿತು. ಸಹಾಯ ಧನವನ್ನು ಕೇಳಿದವರು ಇಲ್ಲಿಯವರು ಆಯಿತು. ಸ್ವಾತಂತ್ರ್ಯ ವರ್ಧಂತಿ ಉತ್ಸವವು ಮೂರು ದಿನ ನಡೆಯಿತು.

ಚಿತ್ರದುರ್ಗ ತಾಲೂಕಿನ ಕೊಡಬೇವಿನಲ್ಲಿ ತರುಣ ಸಂಘದ ಪರವಾಗಿ ಸ್ವಾತಂತ್ರ್ಯ ವರ್ಧಂತಿ ಉತ್ಸವವು ಆಚರಿಸಲ್ಪಟ್ಟಿತು. ಬಾಪೂವಿನ ಮರಣದ ಬಗ್ಗೆ ದುಃಖ ವ್ಯಕ್ತ ಮಾಡಲಾಯಿತು.

ಸಾಗರ ತಾಲೂಕು ವರಸೀಪುರದಲ್ಲಿ ಸ್ವಾತಂತ್ರ್ಯ ವರ್ಧಂತಿ ಆಚರಿಸಲ್ಪಟ್ಟಿತು. ಗ್ರಾಮಸ್ಥರು, ಉಪಾಧ್ಯಾಯರು, ಶಾಲಾ ಬಾಲಕಬಾಲಿಕೆಯರು ಒಳ್ಳೆ ಆಸ್ಥೆಯಿಂದ ಭಾಗವಹಿಸಿದರು.

ಕೊಡಗು

(ಕೊಡಗು) ವೀರಾಜಪೇಟೆಯಲ್ಲಿ ಅಗಸ್ಟ ೧೫ ಕ್ಕೆ ಸ್ವಾತಂತ್ರ್ಯೋತ್ಸವ ವಿಜೃಂಭಣೆಯಿಂದ ಆಚರಿಸಲಾಯಿತು. ಕಾಫೀಪ್ಲಾಂಟರ ಪಟೇಲರಾದ ಚನ್ನಬಸವೇಶ ಗೌಡರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆದವು. ಬೆಳಿಗ್ಗೆ ಪ್ರಭಾತಫೇರಿ ಮಧ್ಯಾನ್ಹ ಆಟಪಾಟಗಳು ಸಾಯಂಕಾಲ ಸಾರ್ವಜನಿಕ ಸಭೆ ಮೊದಲಾದವು ನಡೆದವು.

ರಾಮಕುಂಜದಲ್ಲಿ ಸಂಸ್ಕೃತ ಪಾಠಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯಾಯಿತು. ವಿದ್ಯಾರ್ಥಿಗಳ ಜ್ಞಾನೋದಯವೆಂಬ ಹಸ್ತಲಿಖಿತ ಮಾಸಪತ್ರಿಕೆಯ ಉದ್ಘಾಟನೆಯೂ ಆಯಿತು. ಹಲವರ ಭಾಷಣಗಳಾಗಿ ಉತ್ಸವ ಕೊನೆಗಂಡಿತು.

ಉಡುಪಿ ಶ್ರೀಕೃಷ್ಣದೇವಾಲಯ ಪ್ರವೇಶದ ಪ್ರಶ್ನೆಯನ್ನು ದಿನಾಂಕ ೧೧ ರಂದು ಶ್ರೀಗಳಾದ ಪಿ. ಎಲ್. ನಾಯಕ್ (ಕಾಂಗ್ರೆಸ ಅಧ್ಯಕ್ಷ) ಕೆ. ಕೆ. ಶೆಟ್ಟಿ (ಪ್ರಧಾನ ಕಾರ್ಯದರ್ಶಿ) ಮತ್ತಿನ್ನಿತರರು ದೇವಸ್ಥಾನದ ಅಧಿಕಾರಿಗಳೊಡನೆ ಮಾತನಾಡಿದರು. ಸಧ್ಯದ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಯಾವ ತೀರ್ಮಾನವನ್ನೂ ಹೇಳಲಿಲ್ಲ.

ಗಾಂಧಿ ಸ್ಮಾರಕ ನಿಧಿಗೆ ರೂ. ೭೫೦೬-೫-೪ ಸಂಗ್ರಹವಾಗಿದೆ.

ಹಿಂದುಸ್ತಾನ

ಮುಂಬಯಿ

ತಾ. ೧೯ ರಂದು ಭೆಂಡಿ ಬಜಾರು ಕಿಕೋರದ ಕ್ಯಾಂಟೋನ್ಮೆಂಟ ಸ್ಟೇಶನಗಳ ನಡುವೆ ಒಂದು ಗೂಡ್ಸಗಾಡಿಯು ಹಳಿ ಬಿಟ್ಟದ್ದರಿಂದ ಅಪಘಾತ ಸಂಭವಿಸಿ ಗಾರ್ಡನಿಗೆ ಸ್ವಲ್ಪ ಗಾಯವಾಯ್ತು ಮತ್ತು ೨೦ ಸಾವಿರ ರೂ. ಗಳ ಹಾನಿ ಸಂಭವಿಸಿತು.

ಸಾಮಾನು ಸಾಗಿಸಲು ವಾಗೀನುಗಳಿಲ್ಲದ್ದರಿಂದ ಮುಂಬಯಿ ಬಂದರದಲ್ಲಿ ೨೨ ಹಡಗಗಳು ಪದಾರ್ಥಗಳನ್ನು ಹೊತ್ತುಕೊಂಡು ೧೨ ದಿನಗಳಿಂದ ನಡುನೀರಲ್ಲಿ ನಿಂತಿವೆಯೆಂದೂ ಈ ಸಾಮಾನುಗಳನ್ನು ಸಾಗಿಸಲು ೧ ಸಾವಿರ ವಾಗೀನುಗಳಾದರೂ ಬೇಕೆಂದೂ ೨೦ ನೇ ತಾ. ಯಂದ ಸಮಾಚಾರವೊಂದು ಹೇಳುತ್ತದೆ.

ಪ್ರಜೆಯ ಮುಸ್ಲಿಂ ಮುಖಂಡರೂ ಶಾಸನ ಸಭಾ ಸದಸ್ಯರೂ ಆದ ಶ್ರೀ ಎ. ಎ. ಖಾನರು ಒಂದು ಪ್ರಕಟನೆ ಹೊರಡಿಸಿ ಮಹಾತ್ಮರ ಸ್ಮಾರಕ ನಿಧಿಗೆ ಮುಸ್ಲಿಮರು ಮುಕ್ತಹಸ್ತದಿಂದ ಕಾಣಿಕೆ ನೀಡಬೇಕೆಂದು ಬಿನ್ನವಿಸಿದ್ದಾರೆ.

[illegible] ವ್ಯವಸ್ಥೆಯನ್ನು ನಿರ್ಮೂಲಗೊಳಿಸುವ ಪ್ರಶ್ನೆಯನ್ನು ಕಾಂಗ್ರೆಸು ರಾಜಕೀಯ ಪಕ್ಷವಾಗಿರುವದರಿಂದ ಎತ್ತಿಕೊಳ್ಳಲಾರದು. ಈ ಬಗ್ಗೆ ಹಿಂದುಗಳೇ ಮುಂದಾಗಬೇಕು ಎಂದು ಆಚಾರ್ಯ ವಿನೋಬಾ ಭಾವೆಯವರು ಇಂದೂರದಲ್ಲಿ ಹರಿಜನ ಸಭೆಯೊಳಗೆ ಹೇಳಿದರು.

ಜವಳಿ ಉತ್ಪಾದನೆ ಹೆಚ್ಚಿಸಲೆಂದು ಗಿರಣಿಗಳಲ್ಲಿ ೩ ಸರತಿಗಳನ್ನು ಪ್ರಾರಂಭಿಸಬೇಕೆಂದು ಮುಂಬಯಿ ಔದ್ಯೋಗಿಕ ಪರಿಸ್ಥಿತಿ ವಿಚಾರಣಾ ಸಮಿತಿಯು ಮುಂಬಯಿ ಸರಕಾರಕ್ಕೆ ವರದಿ ಮಾಡಿದೆ. ೨ ಸರತಿಗಳಲ್ಲಿ ೧೬ ತಾಸು ಕೆಲಸ ಮಾಡುವದಕ್ಕಿಂತ ೩ ಸರತಿಗಳಲ್ಲಿ ೨೨ ತಾಸು ಕೆಲಸ ಮಾಡಿದರೆ ಉತ್ಪಾದನೆಯು ೧೦೦ ಕ್ಕೆ ೩೭½ ಯಷ್ಟು ಹೆಚ್ಚುತ್ತದೆ.

ಜೀವನಾವಶ್ಯಕವಾದ ಪದಾರ್ಥಗಳೆಲ್ಲವುಗಳ ಮೇಲೆಯೂ ನಿಯಂತ್ರಣ ಹೇರಬೇಕೆಂದು ಸರಕಾರಿ ನೌಕರರ ಹಾಗೂ ಬ್ಯಾಂಕು ಮತ್ತು ಇನ್ಶೂರನ್ಸ ಕಂಪನಿಗಳ ಪರಿಷತ್ತಿನಲ್ಲಿ ಒಂದು ಗೊತ್ತುವಳಿ ಸ್ವೀಕರಿಸಲಾಯ್ತು. ಸಮಾಜವಾದಿ ಮುಖಂಡರಾದ ಶ್ರೀ ಅಶೋಕ ಮೆಹತಾರು ಅಧ್ಯಕ್ಷತೆ ವಹಿಸಿದ್ದರು.

ಜಿ. ಐ. ಪಿ. ರೇಲ್ವೆಯ ಸುಮಾರು ೧ ನೂರು ಜನ ಗಾರ್ಡರು ತಮ್ಮ ವೇತನ ಪ್ರಮಾಣಗಳು ಹೆಚ್ಚಾಗಬೇಕೆಂದು ತಾ. ೧೫ ರಿಂದ ೪ ದಿನ ಉಪವಾಸ ಪ್ರಾರಂಭಿಸಿದ್ದರು. ಈ ಬಗ್ಗೆ ಅನುಕೂಲ ವಿಚಾರಣೆ ಮಾಡಲಾಗುವದೆಂದು ಚೀಫ ಟ್ರಾನ್ಸಪೋರ್ಟೇಶನ್ ಸುಪರಿಂಟೆಂಡೆಂಟರ ಕಡೆಯಿಂದ ಆಶ್ವಾಸನ ಬಂದುದರಿಂದ ತಾ. ೧೯ ಕ್ಕೆ ಉಪವಾಸ ನಿಲ್ಲಿಸಿದರು.

ಗುಜರಾಥ ಪ್ರಾಂತವು ಅಸ್ತಿತ್ವದಲ್ಲಿ ಬರುತ್ತಲೇ ಸೌರಾಷ್ಟ್ರವು ಅದರಲ್ಲಿ ವಿಲೀನವಾಗುವದೆಂದೂ ಆ ಮೇಲೆ ಗುಜರಾಥದ ಏಳಿಗೆಗಾಗಿ ಹೆಣಗುವದು ಪ್ರತಿಯೊಬ್ಬ ಗುಜರಾಥಿಯ ಕರ್ತವ್ಯವೆಂದೂ ಸೌರಾಷ್ಟ್ರದ ಉಪಮುಖ್ಯಮಂತ್ರಿಗಳಾದ ಶ್ರೀ ಬಳವಂತರಾಯ ಮೆಹತಾರವರು ಪುಣೆಯಲ್ಲಿ ಅವರಿಗೆ ಕೊಟ್ಟ ಒಂದು ಸತ್ಕಾರ ಸಮಾರಂಭದಲ್ಲಿ ಹೇಳಿದರು.

ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯಲ್ಲಿ ತಾ. ೨೪ ರಂದ ಮುಂಬಯಿ ಗೃಹಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿ ಅವರ ಸಾಕ್ಷಿಯು ನಡೆಯಿತು. ಮಂತ್ರಿಗಳೆಂದು ಅರ್ಜಿದಾರ ಸಮಿತಿಯ ಎದುರು ಮುಂಬಯಿಯಲ್ಲಿಯೇ ಶ್ರೀ ಮುರಾರಜಿಯವರು ಹೇಳಿಕೆ ಕೊಡಬಹುದಿತ್ತು. ಆದರೆ ದಿಲ್ಲಿಗೆ ಹೋಗಿ ನ್ಯಾಯಾಲಯದಲ್ಲಿಯೇ ಸಾಕ್ಷಿ ನುಡಿಯಲು ಶ್ರೀಯುತರು ತಾವಾಗಿ ಒಪ್ಪಿಕೊಂಡಿರುವರು.

ಭಾಷಾವಾರ ಪ್ರಾಂತೀಕರಣದ ಪ್ರಶ್ನೆಯನ್ನು ಕನಿಷ್ಠ ೧೦ ವರ್ಷಗಳ ವರೆಗೆ ಮುಂದೂಡಬೇಕೆಂದು ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ತಾ. ೨೧ ಕ್ಕೆ ಸೇರಿದ ಅವಸರದ ಸಭೆಯಲ್ಲಿ ನಿರ್ಧರಿಸಿತು.

ಟಿಳಕ ಮಹಾರಾಷ್ಟ್ರ ವಿದ್ಯಾಪೀಠವು ಸಂಸ್ಕೃತ ಮಹಾ ವಿದ್ಯಾಲಯವನ್ನು ಪ್ರಾರಂಭಿಸಲಿದೆಯೆಂದು ವಿದ್ಯಾಪೀಠದ ಕುಲಪತಿಗಳಾದ ಶ್ರೀ. ಜಿ. ವಿ. ಕೇತಕರು ಅದರ ಒಂದು ಸಮಾರಂಭದ ಕಾಲಕ್ಕೆ ಸಾರಿದರಲ್ಲದೆ ಇದಕ್ಕಾಗಿ ೭೦ ಸಾವಿರ ರೂ. ವಿದ್ಯಾಪೀಠ ಮೀಸಲಿಟ್ಟಿದೆಯೆಂದು ಅರುಹಿದರು.

ಯುಕ್ತಪ್ರಾಂತ

ಯುಕ್ತಪ್ರಾಂತದ ಅನೇಕ ಮಂತ್ರಿಗಳು ಮಹಾತ್ಮಾ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ತಮ್ಮ ೧೦ ದಿನಗಳ ಆದಾಯವನ್ನು ೧೦೦ ರೂಪಾಯಿಗಳ ೫ ಕಂತುಗಳಲ್ಲಿ ಕೊಡಲು ನಿರ್ಧರಿಸಿದ್ದಾರೆ.

ಈಗ ವಿಂಧ್ಯಾಚಲ ಪ್ರದೇಶಕ್ಕೆ ಸೇರಿಸಲ್ಪಟ್ಟ ಸುಮಾರು ೨೦ ಬುಂದೇಲಖಂಡ ಸಂಸ್ಥಾನಗಳ ಆಡಳಿತವನ್ನು ಬೇಗ ಯುಕ್ತಪ್ರಾಂತವು ವಹಿಸಿಕೊಳ್ಳಲಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ ಜವಳಿ ಅಜ್ಞೆ ಹೊರಟಂದಿನಿಂದ ಇದು ವರೆಗೆ ಕಾನಪುರದ ಗಿರಣಿಯಲ್ಲಿ ೨೫೦೦ ಬಟ್ಟೆ ಗಂಟು ಹಾಗೇ ಬಿದ್ದಿದೆ. ಇಲ್ಲಿ ದಿನಾಲು ೮೦೦ ಗಂಟು ಬಟ್ಟೆಯ ಉತ್ಪಾದನೆಯಾಗುತ್ತದೆಯೆಂದು ತಿಳಿಯುತ್ತದೆ. ಅಲ್ಲದೆ ಕೋಟ ವ್ಯಾಪಾರಿಗಳಲ್ಲಿ ೩॥ ಕೋಟಿ ರೂ. ಬೆಲೆಯ ಬಟ್ಟೆಯ ಸಂಗ್ರಹವಿದೆಯಂತೆ. ಇಲ್ಲಿ ಈಗ ೧೦೦ ಕ್ಕೆ ೨೦ ರಷ್ಟು ಬಟ್ಟೆಯ ಬೆಲೆ ಇಳಿದಿದೆ.

ಮದ್ರಾಸ

ಹಿಂದ ಸರಕಾರ ಹೈದರಾಬಾದದ ಬಗ್ಗೆ ಬೇಗ ಸೈನಿಕ ಕ್ರಮ ಕೈಕೊಳ್ಳದಿದ್ದರೆ ಇದರ ದುರ್ಲಾಭವನ್ನು ಹೈದರಾಬಾದ ಕಮ್ಯುನಿಸ್ಟರು ಪಡೆದುಕೊಳ್ಳುವರೆಂದು ಹೈ. ಸಂ. ಕಾಂ. ಕಾರ್ಯದರ್ಶಿ ಶ್ರೀ. ಪ್ರಾಣೇಶಾಚಾರ್ಯರು ಪ್ರಕಟನೆ ಹೊರಡಿಸಿದ್ದಾರೆ.

ಗವ್ಹರ್ನರ ಜನರಲ್ ರಾಜಾಜಿಯವರು ತಿರುವಾಂಕೂರದಲ್ಲಿ ಮಹಾತ್ಮಾ ಗಾಂಧಿ ಕಾಲೇಜಿನ ಅಡಿಗಲ್ಲು 'ಕೂಡಿಸುತ್ತ' ಮಹಾತ್ಮರು ತೋರಿಸಿದ ಮಾರ್ಗವನ್ನು ಅನುಸರಿಸತಕ್ಕದ್ದು. ಕೇವಲ ಅವರ ಹೆಸರಿನ ಸಂಸ್ಥೆ ಸ್ಥಾಪಿಸುವದು ವ್ಯರ್ಥವೆಂದು ಹೇಳಿದರು.

ಮಧ್ಯಪ್ರಾಂತ

ಮಧ್ಯಪ್ರಾಂತದ ಗೃಹಮಂತ್ರಿ ಪಂಡಿತ ದ್ವಾರಕಾಪ್ರಸಾದಮಿಶ್ರರು ಮಧ್ಯಪ್ರಾಂತ ಮತ್ತು ಹೈದರಾಬಾದ ಗಡಿಯ ಪ್ರಶ್ನೆಯನ್ನು ಸರದಾರ ಪಟೇಲರೊಡನೆ ಚರ್ಚಿಸಲು ತಾ. ೨೨ ರಂದು ದಿಲ್ಲಿಗೆ ತೆರಳಿದರು.

ಹೈದರಾಬಾದ ಸಂಸ್ಥಾನ ಕಾಂಗ್ರೆಸ ಸಮಿತಿಯ ಕಾರ್ಯಾಲಯವೊಂದು ಬೇಗನೆ ನಾಗಪುರದಲ್ಲಿ ಪ್ರಾರಂಭವಾಗಲಿದೆ.

ಓಡಿಸಾ

ಓಡಿಸಾ ಮಂತ್ರಿಮಂಡಳದಲ್ಲಿ ಮತ್ತೆ ಇಬ್ಬರ ಸೇರ್ಪಡೆಯಾಗಿದೆ. ಶ್ರೀ. ರಾಮಕೃಷ್ಣ ಬೋಸ ಮತ್ತು ಶ್ರೀ. ಸದಾಶಿವ ತ್ರಿಪಾಠಿ ಇವರೇ ಈ ಹೊಸ ಮಂತ್ರಿಗಳು. ತಾ. ೧೯ ಕ್ಕೆ ಇವರು ಪ್ರತಿಜ್ಞಾವಿಧಿ ಮುಗಿಸಿದರು.

ಪಶ್ಚಿಮ ಬಂಗಾಲ

ಪೂರ್ವ ಬಂಗಾಲದ ಕೊಮಿಲ್ಲಾ ಜೇಲಿನಲ್ಲಿ ಸ್ಥಾನಬದ್ಧತೆಯಲ್ಲಿಡಲ್ಪಟ್ಟ ಅ. ಭಾ. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಅರವಿಂದ ಬೋಸರನ್ನು ತಾ. ೧೯ ರಂದು ಬಂಧಮುಕ್ತಮಾಡಿ ೪೮ ತಾಸುಗಳಲ್ಲಿ ಪೂರ್ವಬಂಗಾಲ ಬಿಟ್ಟು ಹೋಗಬೇಕೆಂದು ನೋಟೀಸು ಪ್ರಯೋಗಿಸಲಾಗಿತ್ತು.

ಕಲಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಪಿ. ಬ್ಯಾನರ್ಜಿಯವರನ್ನು ಅಂತರ್ರಾಷ್ಟ್ರೀಯ ಕಾಯಿದೆ ಕಾಂಗ್ರೆಸಿಗೆ ಅಧ್ಯಕ್ಷರಲ್ಲೊಬ್ಬರನ್ನಾಗಿ ಆರಿಸಲಾಗಿದೆ.

ಸ್ಥಳೀಯ ಪ್ರಾಥಮಿಕ ಮಾಧ್ಯಮಿಕ ಶಿಕ್ಷಕರನ್ನೂ ಪ್ರಾಧ್ಯಾಪಕರನ್ನೂ ಗೌರವವಾಗಿ ಕಾಣಬೇಕೆಂದೂ ಆಗಾಗ ಪೋಲೀಸ ಮತ್ತು ರೆವ್ಹೆನ್ಯೂ ಅಧಿಕಾರಿಗಳು ಇವರನ್ನು ಕರೆಯಿಸಿ ಸಭೆ ಸೇರಿಸಿ ಶಿಕ್ಷಕರ ಬಗ್ಗೆ ಅಧಿಕಾರಿಗಳಿಗೆ ಆದರವಿದೆ ಎಂಬುದನ್ನು ಜನತೆಗೆ ತೋರಿಸಬೇಕೆಂದೂ ಮುಂಬಯಿ ಸರಕಾರವು ಆಜ್ಞೆ ಹೊರಡಿಸಿದೆ.

ಮುಂಬಯಿ ಶಾಸನ ಸಭೆಯ ಪುಣೆ ಅಧಿವೇಶನವು ಸಪ್ಟಂಬರ ೧೦ ಕ್ಕೆ ಪ್ರಾರಂಭವಾಗುವದೆಂದು ತಿಳಿಯುತ್ತದೆ.

ಹಿಂದ ಸರಕಾರವು ಮುಂಬಯಿ ಪ್ರಾಂತಕ್ಕೆ ೪೦ ಸಾವಿರ ಗಂಟು ಬಟ್ಟೆ ಕೊಟ್ಟಿದೆ. ಈ ಪ್ರಾಂತಕ್ಕೆ ಪ್ರತಿತಿಂಗಳು ೨೨ ಸಾವಿರ ಗಂಟು ಬಟ್ಟೆ ಬೇಕಾಗುತ್ತದೆ.

ಹೊಸದಿಲ್ಲಿ

ಡಾ. ರಾಜೇಂದ್ರ ಪ್ರಸಾದರು ಪೂರ್ವ ಆಫ್ರಿಕಾದ ಹಿಂದೀಯರಿಗೆ ಒಂದು ಸಂದೇಶ ಕಳಿಸಿ, ನಾವು ಇಲ್ಲಿ ಸ್ವತಂತ್ರರಿದ್ದರೂ ನಮ್ಮ ಬಾಂಧವರಾದ ಇನ್ನುಳಿದ ಹಿಂದೀಯರು ಅಲ್ಲಿ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗಿದೆ. ನಿಮ್ಮ ಹಕ್ಕುಬಾಧ್ಯತೆಗಳಿಗೆ ನೀವು ನಡೆಸಿದ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ಮುಂತಾಗಿ ಹೇಳಿದ್ದಾರೆ.

ಮೊದಲು ಹಿಂದಿ ಸೈನ್ಯದಲ್ಲಿದ್ದು ನಂತರ ಆಝಾದ ಹಿಂದ ಫೌಜಿಗೆ ಸೇರಿದವರಿಗೆಲ್ಲ ಅವರವರ ೩ ತಿಂಗಳ ಪಗಾರ ಕೊಡಬೇಕೆಂದು ಹಿಂದ ಸರಕಾರದವರು ನಿರ್ಧರಿಸಿದ್ದಾರೆ. ಆದ್ದರಿಂದ ಅಂತಹ ಸೈನಿಕರು ತಮಗೆ ಸಮೀಪದ ಸೈನ್ಯ ಶಿಕ್ಷಣ ಶಿಬಿರದ ಅಧಿಕಾರಿಗಳ ಕಡೆಗೆ ಅರ್ಜಿ ಹಾಕಬೇಕು.

ದಿಲ್ಲಿಯಲ್ಲಿಯ ಯಮುನಾ ನದಿಯ ಪ್ರವಾಹವು ನಗರ ಹಾಗೂ ಉಪನಗರಗಳಲ್ಲಾದ ಮಳೆಯ ಮೂಲಕ ಹೆಚ್ಚುತ್ತಿದ್ದರೂ ಗಂಡಾಂತರದ ಭಯವಿಲ್ಲೆಂದು ತಿಳಿಯುತ್ತದೆ.

ಯುಕ್ತರಾಷ್ಟ್ರ ಸಂಘಗಳ ಹಿಂದೀ ಸಂಸ್ಥೆಯ ಅಧ್ಯಕ್ಷಿಣಿಯರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸಪ್ಟೆಂಬರದಲ್ಲಿ ಜಿನಿವಾದಲ್ಲಿ ಸೇರಲಿರುವ ಸಭೆಯಲ್ಲಿ ಯುಕ್ತರಾಷ್ಟ್ರ ಸಂಸ್ಥೆಗಳ ಜಾಗತಿಕ ಮಹಾಮಂಡಳದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲ್ಪಡುವ ಸಂಭವವಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ ಸರಕಾರದವರು ಪ್ರಾಂತಿಕ ಸರಕಾರದವರೊಡನೆ ವಿಚಾರವಿನಿಮಯ ಮಾಡಿ ಹಿಂದುಸ್ತಾನ ಹತ್ತಿಯ ದರ ನಿಯಂತ್ರಣಗೊಳಿಸಲು ನಿರ್ಧರಿಸಿರುವರಾಗಿ ಸರಕಾರೀ ಪ್ರಕಟನೆ ಹೊರಟಿದೆ.

ಶ್ರೀ ಷಣ್ಮುಖಂ ಚೆಟ್ಟಿಯವರು ತಾ. ೨೧ ಮುಂಜಾನೆ ವಿಮಾನ ಮೂಲಕ ದಿಲ್ಲಿಯಿಂದ ಕೋಯಿಮುತ್ತೂರಿಗೆ ಪ್ರಯಾಣ ಬೆಳಿಸಿದರು. ಇಲ್ಲಿಂದ ಘಟನಾ ಸಮಿತಿಯ ಸದಸ್ಯತ್ವಕ್ಕೂ ಶ್ರೀಯುತರು ರಾಜೀನಾಮೆ ಕೊಡುವರೆಂದೂ ಈ ರಾಜೀನಾಮೆಯನ್ನು ಮುಖ್ಯಮಂತ್ರಿ ಪಂ. ಜವಾಹರಲಾಲರು ಸ್ವೀಕರಿಸದಿದ್ದಲ್ಲಿ ಸದಸ್ಯತ್ವದ ರಾಜೀನಾಮೆ ಹಿಂತೆಗೆದುಕೊಳ್ಳುವರೆಂದೂ ತಿಳಿಯುತ್ತದೆ.

ರಾಷ್ಟ್ರೀಯ ಪುನರ್ನಿರ್ಮಾಣದ ನಿಶ್ಚಿತ ತಳಹದಿಯ ಮೇಲೆ ಹಿಂದು ಮಹಾ ಸಭೆಯನ್ನು ಪುನರ್ಘಟಿಸಲಾಗುವದೆಂದೂ, ಅದರಲ್ಲಿ ಸೇರಲು ಎಲ್ಲ ಜಾತಿಗಳಿಗೂ ವರ್ಗಗಳಿಗೂ ಅವಕಾಶ ಕೊಡಲಾಗಿದೆಯೆಂದೂ ಅ. ಭಾ. ಹಿಂದೂ ಮಹಾಸಭೆಯ ಪ್ರಕಟನೆ ಹೊರಟಿದೆ.

ಹಿಂದ ಸರಕಾರದ ನಿರ್ದೇಶದ ಮೇರೆಗೆ ಅರ್ಥಶಾಸ್ತ್ರಿಗಳ ಪರಿಷತ್ತು ತಾ. ೧೮ ಕ್ಕೆ ಸೇರಿತು. ಅತಿ ಪ್ರಸರಣವನ್ನೂ ಏರಿಕೆಯ ಬೆಲೆಗಳನ್ನೂ ತಡೆಗಟ್ಟುವ ಬಗ್ಗೆ ವಿಚಾರಮಾಡಿ ಸರ್ವಸಮ್ಮತ ವರದಿಯೊಂದನ್ನು ಒಪ್ಪಿಸಲು ಅರ್ಥಸಚಿವರು ಇವರಿಗೆ ಹೇಳಿದ್ದಾರಂತೆ.

ಶ್ರೀ. ದಿವಾಕರ ರಂಗರಾಯರು ರೋಮ ನಗರಕ್ಕೆ ಅಂತರರಾಷ್ಟ್ರೀಯ ಪಾರ್ಲಿಮೆಂಟರಿ ಪರಿಷತ್ತಿಗಾಗಿ ಸಪ್ಟಂಬರ ೪ ನೇ ತಾ. ಗೆ ಮುಂಬಯಿಯಿಂದ ವಿಮಾನ ಮೂಲಕ ತೆರಳಲಿದ್ದಾರೆ.

ಸಪ್ಟೆಂಬರ ೨೧ ಕ್ಕೆ ಪ್ಯಾರಿಸದಲ್ಲಿ ಸೇರಲಿರುವ ಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಗೆ ಅವಕಾಶ ದೊರೆತರೆ ಪಂ. ನೆಹರು ಹೋಗಬಹುದೆಂದೂ ಆಗ ಪ್ಯಾರಿಸದಲ್ಲಿರುವ ವರೆಗೆ ಹಿಂದೀ ಶಿಷ್ಟಮಂಡಳದ ಧುರೀಣತ್ವ ವಹಿಸುವರೆಂದೂ ತಿಳಿಯುತ್ತದೆ.

ಪೂರ್ವ ಪಂಜಾಬದ ಮುಖ್ಯಮಂತ್ರಿಗಳು, ಜನರಲ್ ಮೋಹನಸಿಂಗರ ದೇಶಸೇವಕ ಸೇನೆಯ ಸಂಬಂಧದಲ್ಲಿ ಸರಕಾರದವರು ತಮ್ಮ ಅಭಿಪ್ರಾಯವನ್ನು ಪುನರ್ವಿಮರ್ಶಿಸುವ ಆಶ್ವಾಸನ ಕೊಟ್ಟಿದ್ದರಿಂದ ಕರ್ನಲ್ ಧಿಲನರು ತಾ. ೨೦ ರಂದು ಉಪವಾಸ ನಿಲ್ಲಿಸಿದರು.

ಹಿಂದೀ ವೃತ್ತಪತ್ರ ಕಾಯಿದೆಯನ್ನು (೧೯೩೧) ರದ್ದುಗೊಳಿಸಬೇಕೆಂದು ಹಿಂದುಸ್ತಾನ ಸರಕಾರದಿಂದ ನೇಮಿಸಲ್ಪಟ್ಟ ವಿಚಾರಣಾ ಸಮಿತಿಯು ಸಲಹೆ ಕೊಟ್ಟಿದೆ. ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳೊಂದಿಗೆ ಈ ಸಮಿತಿಯ ವರದಿಯನ್ನು ಪರಿಶೀಲಿಸುತ್ತಿದೆ.

ಸ್ವಾತಂತ್ರ್ಯೋತ್ಸವ ದಿನ ಆಗ್ರಾದಲ್ಲಿ ದಂಗೆಯಾಗಿ ೧೮ ಜನ ಮರಣಹೊಂದಿದರೆಂದೂ ೧೩೫ ಜನರು ಗಾಯಗೊಂಡರೆಂದೂ ತಿಳಿಯುತ್ತದೆ. ಈಗ ಅಲ್ಲಿ ಶಾಂತಿ ನೆಲಸಿದ ವರದಿ ಬಂದಿದೆ.

ಬಲಾತ್ಕಾರದ ಮತಾಂತರ

ಬೌದ್ಧ ಲಾಮಾರ ಕೊಲೆ

ಕಾಶ್ಮೀರದ ಲಾಡಕಕೊಳ್ಳದ ಭಾಗದಲ್ಲಿ ಪಾಕಿಸ್ತಾನದ ಸೈನಿಕರು ಅನನ್ವಿತ ಅತ್ಯಾಚಾರ ಮಾಡಿ ಅಲ್ಲಿಯ ನಾಗರಿಕರನ್ನು ಹಿಂಸಿಸುತ್ತಿದ್ದಾರೆ. ಲಾಡಕಕೊಳ್ಳದ ಅತಿ ದೊಡ್ಡ ವಿಹಾರವಾದ ಗನಸ್ಕಾರ ಪದಮ ಎಂಬ ವಿಹಾರದ ಬೌದ್ಧ ಲಾಮಾನನ್ನು ಗುಂಡಿಕ್ಕಿ ಕೊಲ್ಲಲಾಗಿದೆಯಲ್ಲದೆ ೫೦೦ ಬುದ್ಧ ಮತಾನುಯಾಯಿಗಳನ್ನೂ ಸಂಹರಿಸಿದ್ದಾರೆ. ಕ್ರಿಶ್ಚನರನ್ನೊಳಗೊಂಡು ಅನೇಕರನ್ನು ಬಲಾತ್ಕಾರದ ಮತಾಂತರಕ್ಕೆ ಗುರಿಮಾಡಲಾಗುತ್ತಿದೆ. ನೂರಾರು ವಿಹಾರಗಳನ್ನು ಹಾಳು ಮಾಡಿ ಬುದ್ಧನ ವಿಗ್ರಹಗಳನ್ನು ವಿರೂಪಗೊಳಿಸಿ ವಿಹಾರಗಳ ಅನೌಲ್ಯ ವಸ್ತುಗಳನ್ನೆಲ್ಲ ದೋಚಲಾಗಿದೆ. ಈಗ ದಾಳಿಗಾರರು ನುಬ್ರಾಕೊಳ್ಳದ ವಿಹಾರಗಳ ಮೇಲೆ ಕಣ್ಣಿಟ್ಟಿದ್ದಾರೆಂದು ತಿಳಿಯುತ್ತದೆ.

ಊರಿಯ ಪಶ್ಚಿಮ ರಂಗದಲ್ಲಿ ವೈರಿಯು ಹಿಂದುಸ್ತಾನದ ಸೈನ್ಯದ ಮೇಲೆ ಬಲವಾದ ತೋಫುಗಳನ್ನು ಉಪಯೋಗಿಸುತ್ತಿದ್ದಾನೆಂದೂ ವೈರಿಯು ಹಾಕಿದ ಒಂದು ಗುಂಡು ೪೫ ಪೌಂಡುಗಳಷ್ಟಿದೆಯೆಂದೂ ಈ ತೋಫಿನಿಂದ ಗುಂಡು ೧೬ ಮೈಲು ಹೋಗುವದಲ್ಲದೆ ಇವುಗಳಿಗೆ ಉಪಯೋಗಿಸುವ ಗುಂಡು ೮೦ ಪೌಂಡು ತೂಕದವೆಂದು ತಿಳಿಯುವದು.

ಕಾಶ್ಮೀರ ಸಮಿತಿಯವರು ಊರಿರಂಗವನ್ನು ಸಂದರ್ಶಿಸಿದ ದಿನವೇ ವೈರಿಯು ಈ ತೋಫಿನಿಂದ ಕೆಲ ಗುಂಡು ಹಾರಿಸಿದ್ದನ್ನು ಸಮಿತಿಯ ಸದಸ್ಯರು ಸ್ವತಃ ಪರಿಶೀಲಿಸಿದರು.

ಪಾಕಿಸ್ತಾನ ನುಂಗ ಹೊರಟ ಸಿಂಧು

ಅಗಸ್ಟ ೮ ರಿಂದ ಸಿಂಧು ನದಿಗೆ ಬಂದ ಮಹಾಪೂರಗಳ ಮೂಲಕ ಸಿಂಧ ಪ್ರಾಂತದ ಸಕ್ಕರ ಜಿಲ್ಲೆಯ ೧೨೬ ಹಳ್ಳಿಗಳು ನಿರ್ನಾಮವಾಗಿವೆಯೆಂದೂ ಕರಾಚಿಗೆ ೮೦ ಸಾವಿರ ಜನ ಗುಳೇ ಬಂದಿದ್ದಾರೆಂದೂ ಅಧಿಕೃತವಾಗಿ ತಿಳಿಯುತ್ತದೆ. ಕರಾಚಿ ಮತ್ತು ಬಲೂಚಿಸ್ತಾನದ ರಾಜಧಾನಿಯಾದ ಕ್ವೇಟಾ ನಡುವಿನ ರೇಲ್ವೆ ಸಂಪರ್ಕವು ಮಹಾಪೂರದಿಂದ ತಪ್ಪಿ ಹೋಗಿದೆ. ೨,೦೦,೪೨೫ ಎಕರೆ ಭೂಮಿಯ ಬೆಳೆ ನಾಶವಾಗಿದೆ. ೧೧,೯೬,೨೯೦ ರೂ. ಇದರಿಂದ ಹಾನಿಯಾದ ಅಂದಾಜಿದೆ. ಇದೇ ಜಿಲ್ಲೆಯ ಗರಿಯಾಸೀನ ತಾಲೂಕಿನಲ್ಲಿ ರೂಪಾಯಿಯಲ್ಲಿ ೧೦ ಆಣೆ ಬೆಳೆ ಹಾಳಾಗಿದೆ. ೧೨ ಸಾವಿರ ದನಗಳು ಮಹಾಪೂರಕ್ಕೆ ಬಲಿಯಾದವು.

ಸಂಪಾದಕರ ಕೊಲೆ

ಹೈದರಾಬಾದದಲ್ಲಿಯ ಹಿಂದೀ ಒಕ್ಕೂಟಪರ ಉರ್ದು ದೈನಿಕ ಪತ್ರಿಕೆಯಾದ 'ಇಮ್ರೋಜ'ದ ಸಂಪಾದಕರಾದ ಶೋಏಬುಲ್ಲಾ ಖಾನರನ್ನು ೨೧ ತಾ. ರಾತ್ರಿ ಅವರ ಮನೆಯ ಹತ್ತಿರವೇ ಮುಸ್ಲಿಂ ಪುಂಡರು ಕೊಲೆ ಮಾಡಿದರು. ಕೊಲೆಗಡುಕರು ಸಂಪಾದಕರ ಬೀಗರ ಮೇಲೆಯೂ ದಾಳಿ ಮಾಡಿ ಗಾಯಗೊಳಿಸಿದರು.

ಶೋಬುಲ್ಲಾಖಾನರು ಕಚೇರಿಯಿಂದ ಮನೆಗೆ ಹೊರಟಾಗ ಕೊಲೆಗಡುಕರು ಗುಂಡು ಹಾಕಿದರಲ್ಲದೆ ಖಡ್ಗಧಾರಿಗಳಾಗಿ ಅವರ ಮೇಲೆ ಮುಗಿಬಿದ್ದರೆಂದು ತಿಳಿಯುತ್ತದೆ. ಶೋಬುಲ್ಲಾಖಾನರ ಗೌರವಾರ್ಥವಾಗಿ, ಸುಲ್ತಾನ ಪೇಟೆಯ ಅಂಗಡಿಗಳು ಮುಚ್ಚಿದ್ದವು.

ಸರಕಾರಿ ಮೋಟರ ಸಾರಿಗೆ

ಪ್ರಾಂತದ ಹಳ್ಳಿ ಹಳ್ಳಿಗಳ ನಡುವೆ ಈ ವರ್ಷದ ಕೊನೆಗೆ ಸರಕಾರೀ ಮೋಟಾರು ಸಾರಿಗೆಗಳು ಪ್ರಾರಂಭವಾಗಲಿವೆ. ಈ ಮೋಟಾರುಗಳಿಗೆ ಬೇಕಾಗುವ ಎಲ್ಲ ಭಾಗಗಳನ್ನೂ ಮುಂಬಯಿ ಸರಕಾರವು ಬರ್ಮಿಂಗ್ಹ್ಯಾಮದ ಕಾರಖಾನೆಯಿಂದ ತರಿಸಲಿದೆಯೆಂದು ಮೊದಲಾಗಿ ತಿಳಿಯುತ್ತದೆ.

ತಮ್ಮ ಸಂಸ್ಥಾನದ ಬೊಕ್ಕಸದಿಂದ ೪೦ ಕೋಟಿ ರೂಪಾಯಿಗಳನ್ನು ಸಾಲ ಪಡೆದದ್ದು ನಿಜವೆಂದೂ ಇದನ್ನು ಕೂಡಲೇ ಕೊಡಲಾಗುವದೆಂದೂ ಜಗತ್ತಿನ ಸಿರಿವಂತರಲ್ಲಿ ನಿಜಾಮರ ತರುವಾಯ ತಮ್ಮದೆ, ಸ್ಥಾನವೆಂದೂ ಲಂಡನದ ಸುದ್ದಿಗಾರರಿಗೆ ಬಡೋದಾ ಮಹಾರಾಜರು ಹೇಳಿದ್ದಾಗಿ ತಿಳಿಯುತ್ತದೆ.

ದೃಷ್ಟಿಯಂತೆ ಸೃಷ್ಟಿ

ಅಮೇರಿಕದಲ್ಲೊಬ್ಬ ಭವರೋಗ ಭೇಷಜ ನಿದ್ದಾನೆ. ಅವನ ಹೆಸರು ಡಾ. ಎಡ್ವಿನ್ ಎಂದು. 'ಹೃದ್ರೋಗ(ಮಾನಸ ರೋಗ)ನಿವಾರಕ' ಎಂದು ಅವನಿಗೆ ಬಿರುದಿದೆ. ಮಾನಸ ರೋಗಿಗಳಿಗೆ ಯಾವಾಗಲೂ ಅವನು- 'ಉದ್ಧರೇಧಾತ್ಮನಾತ್ಮಾನಂ'; 'ನಿಮ್ಮ ರೋಗಕ್ಕೆ ನೀವೇ ಕಾರಣರು' ಎಂದು ಹೇಳುವುದು ರೂಢಿ.

ಎಡ್ವಿನ್ ಹೇಳುವುದು ದೃಷ್ಟಿಯಂತೆ ಸೃಷ್ಟಿ ಕಾಣುವುದು, 'ಯದ್ಭಾವಸ್ತದ್ಭವತಿ' ಎಂಬ ತತ್ವವನ್ನು. 'ಯತ್ಕ್ರತುರ್ಭವತಿ ತದ್ಭವತಿ' ಎಂಬ ಉಪನಿಷದ್ವಾಕ್ಯದಂತೆ ಆರಾಧ್ಯ ವಸ್ತುವಿನಂತೆ ಆರಾಧಕ ವ್ಯಕ್ತಿ ಕ್ರಮೇಣ ರೂಪಿಸಲ್ಪಡುತ್ತದೆ, ಎಂಬುದು ಅವನ ಅನುಭವ. ಇದಕ್ಕನುಗುಣವಾಗಿ ಅವನೊಂದು ಕಥೆ ಹೇಳುತ್ತಾನೆ. ದೃಷ್ಟಿದೋಷದಿಂದ ಸೃಷ್ಟಿ ದುಷ್ಟವಾಗಿ ಕಂಡದ್ದಕ್ಕೆ ಅದೊಂದು ಉತ್ತಮ ಉದಾಹರಣೆಯಾಗಿದೆ.

ಬೋಸ್ಟನ್ನಿನಲ್ಲಿ ಒಬ್ಬಾಕೆ ಕಂಪನಿಯೊಂದರಲ್ಲಿ ಕೆಲಸಕ್ಕಿದ್ದಳು. ಒಮ್ಮೆ ಪಕ್ಕದ ಕೋಣೆಯಲ್ಲಿ ಒಬ್ಬನು ಪಿಟೀಲು ಬಾರಿಸುತ್ತಿದ್ದುದನ್ನು ಕೇಳಿ ಭಯಂಕರ ವ್ಯಥೆಗೊಳಗಾಗಿ ವ್ಯವಸ್ಥಾಪಕನ ಬಳಿ 'ಅದನ್ನು ನಿಲ್ಲಿಸದಿದ್ದರೆ ತಾನು ದುರ್ಭರ ಸಂಕಟಕ್ಕೆ ತುತ್ತಾಗುವೆನು' ಎಂದು ಮೊರೆಯಿಟ್ಟಳು. ಅದನ್ನು ಕೇಳಿ ಅವನು 'ಮಹನೀಯಳೇ, ಅವನು ನಾಳೆ ಸಾರ್ವಜನಿಕ ನಾಟಕ ಮಂದಿರದಲ್ಲಿ ಸಂಗೀತ ಕಚೇರಿ ನಡೆಸುವುದರ ಸಲುವಾಗಿ ಅಭ್ಯಾಸ ನಡೆಸಿದ್ದಾನೆ' ಎಂದನು. ಆ ಮಾತನ್ನು ಕೇಳಿದೊಡನೆ ಅವಳಲ್ಲಿ ಎಲ್ಲಿಲ್ಲದ ಹುರುಪು ಮೂಡಿತು; ಖಿನ್ನತೆ ಮಾಯವಾಯಿತು. ತನ್ನ ಗೆಳೆಯ ಗೆಳತಿಯರೊಡನೆ ಅವಳು ಆ ಕೋಣೆಗೆ ಹೋಗಿ ಆನಂದದಿಂದ ಸಂಗೀತಕ್ಕೆ ತಲೆ ಹಾಕುತ್ತ ಕುಳಿತಳು. ಅವಳಲ್ಲಿ ದೃಷ್ಟಿ ಪರಿವರ್ತನವಾದುದರಿಂದ ಅನುಭವಪರಿಣಾಮದ ಸ್ವರೂಪವೇ ಪರಿವರ್ತನ ಹೊಂದಿತು.

ಎಡ್ವಿನ್ ಹೇಳುತ್ತಾನೆ: 'ಕ್ರಿಮಿಗಳಿಗಿಂತಲೂ ಮತ್ಸರಗ್ರಸ್ತ ದೃಷ್ಟಿಯಿಂದಲೇ ಹೆಚ್ಚು ರೋಗಗಳು ಹುಟ್ಟುತ್ತವೆ. ಕ್ರಿಮಿಗಳನ್ನು ಪ್ರತಿಭಟಿಸಲು ನಮ್ಮ ದೇಹದಲ್ಲಿ ರಕ್ಷಕ ಅಣುಗಳಿವೆ. ಆದರೆ ತಿರಸ್ಕಾರ, ದ್ವೇಷ ಇತ್ಯಾದಿಗಳನ್ನು ಎಷ್ಟೇ ಚಿಕ್ಕವಿದ್ದರೂ ಪ್ರತಿಭಟಿಸಲು ನಮ್ಮ ಶರೀರಕ್ಕೆ ಯಾವ ಭೌತಿಕ ಸಾಧನವೂ ಇಲ್ಲ.' 'ಔಷಧಗಳ ಅಪ್ಪ' ಎನಿಸಿದ ಹಿಪ್ಪೊಕ್ರೇಟಿಸ್ಸನು ಹೇಳಿದ ಭಯಕ್ರೋಧಗಳು ರಕ್ತದಲ್ಲಿ ವಿಷವನ್ನು ಹುಟ್ಟಿಸುತ್ತವೆ ಎಂಬ ಸಂಗತಿ ಸತ್ಯವೆಂದು ಕಾಲವು ತೋರಿಸಿಕೊಡುತ್ತಿದೆ. ಒಬ್ಬ ಹೆಂಗಸಿದ್ದಳು. ಅವಳ ಕರುಳಲ್ಲಿಯ ಹುಣ್ಣನ್ನು ಶಸ್ತ್ರಚಿಕಿತ್ಸೆಗೆ ಗುರಿಪಡಿಸಬೇಕಾಗಿತ್ತು. ಅವಳು ಶಸ್ತ್ರಚಿಕಿತ್ಸೆ ಮುಗಿದ ಮರುಕ್ಷಣದಲ್ಲಿ ವಿಕಟವಾದ ಗೆಲುವಿನ ನಗೆಯೊಂದನ್ನು ನಕ್ಕು- ನನಗೆ ೩೫೦ ಡಾಲರು ಬೆಲೆಯ ತುಪ್ಪಟದ ಕೋಟೊಂದನ್ನು ಕ್ರಿಸ್‌ಮಸ್ಸಿಗಾಗಿ ತಂದು ಕೊಡೆಂದೆ; ಲೋಭಿಯಾದ ನನ್ನ ಗಂಡ ತಂದುಕೊಡಲಿಲ್ಲ. ಕೇವಲ ೩೫೦ ಡಾಲರು ಖರ್ಚು ಮಾಡಲು ಒಲ್ಲೆನೆಂದ. ಅವನೀಗ ನನ್ನ ಆಪರೇಶನ್ನಿಗಾಗಿ ೧೫೦೦ ಡಾಲರು ವೆಚ್ಚ ಮಾಡಬೇಕಾಯಿತಲ್ಲವೆ? ಅವನಿಗೆ ಹಾಗೇ ಆಗಬೇಕು, ಎಂದಳು.

'ತನ್ನ ವಿರೋಧಭಾವದಿಂದ ತನಗೆಷ್ಟು ನಷ್ಟ ಸಂಭವಿಸಿತೆಂಬುದನ್ನು ಆ ಮೂರ್ಖ ಹೆಂಗಸು ಅರಿಯಳು. ಅಲ್ಸರ್- ಕರುಳಿನ ಹುಣ್ಣುಗಳಿಗೆ ಇಂತಹ ಮಾನಸಿಕ ಕಾರಣಗಳು ಪುಟಕೊಡುತ್ತವೆ. ಭಾವನೆಯು ಒತ್ತಡ ಶರೀರಕ ಪರಿಣಾಮವನ್ನುಂಟುಮಾಡುತ್ತದೆ ಎಂದಿರುವುದರಿಂದ ಅವಳ ಹುಣ್ಣು ಭಾವೋದ್ರೇಕದಿಂದ ಹುಟ್ಟಿದ್ದೆಂದೇ ಹೇಳಬಹುದು.

ವಿಚಾರಶೀಲರಿಗೆ ಕೆಳಗಿನ ಹಳೆಯ ಪ್ರಾರ್ಥನೆ ಒಳ್ಳೆಯ ಮಾರ್ಗದರ್ಶಕ ವಿದೆಯೆನ್ನಬಹುದು:

೧ ದೇವರೇ ನನಗೆ ಬದಲಿಸಲು ಸಾಧ್ಯವಾದುದೆಲ್ಲವನ್ನೂ ಬದಲಿಸುವ ಧೈರ್ಯವನ್ನು ಕೊಡು.

೨ ಬದಲಿಸಲಾಗದುದನ್ನು ಸಹಿಸಿಕೊಳ್ಳುವ ಸ್ಥೈರ್ಯವನ್ನು ಕೊಡು.

೩ ನುತ್ತು ಎರಡಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವ ಬುದ್ಧಿವಂತಿಕೆಯನ್ನು ಕೊಡು.

— ರಸವಂತ

ರೊಕ್ಕದ ಮಾತು

೧

ದುಡಿವನೆನ್ನ ಕೂಲಿಕಾರ,
ಸುಡುವನೆನ್ನ ಚೈನಿಗಾರ;
ಸಾಲ ಕೊಡುವ ಬ್ಯಾಂಕರ—
ನೋಡಿರಿತ್ತ ಮಂಕರ!

೨

ವೆಚ್ಚಮಾಳ್ಪಳೆನ್ನ ಹೆಣ್ಣು,
ಬೊಟ್ಟಿ ಮಾಳ್ಪನೆಲ್ಲವನ್ನು;
ಕಳ್ಳ ನಾಣ್ಯ ಪಂಡಿತ—
ಸುಳ್ಳಿದಲ್ಲ ಖಂಡಿತ!

೩

ತೆಗೆದುಕೊಂಡರೆನ್ನ ತೆರಿಗೆ,
ಬೇಡ ನಾನು ಸಾವವರಿಗೆ;
ಪಡೆವರಧಿಕೃತಾತ್ಮರು—
ಅವರೆ ನಿಜ ಧನಾತ್ಮರು!

೪

ಮಿತದಿ ವೆಚ್ಚ ಮಾಡುವವರು
ಉಳಿಸಲೆನ್ನ, ಲೋಭಿ ಜನರು
ಮತ್ತೆ ಮತ್ತೆ ಬೇಳ್ವರೋ—
ಹಸಿದ ಹಾಗೆ ನೋಳ್ಪರೋ!

೫

ಕಳ್ಳ ಕೊಂಬ ಕನ್ನ ಕೊರೆದು,
ಧನಿಕ ಹೆಚ್ಚಿಸುವನು ಹೊರೆದು;
ಜೂಜುಗಾರ ಕಳೆವನು—
ತನ್ನ ಮನೆಯ ತೊಳೆವನು!

೬

"ನನ್ನ ಕೈಯಲಿರಲು ನೀನು
ವೆಚ್ಚ ಮಾಳ್ಪನಿಲ್ಲ ನಾನು
ಬಳಸಿಕೊಂಬೆ" ಎಂಬನು—
ಕಲಿತ ಬಡವನೊಬ್ಬನು!

("ಮ್ಯಾಗಜೀನ್ ಡಿಜೆಸ್ಟ್" ಪ್ರಕಟಿಸಿದ ಕವನವೊಂದರ ಅನುವಾದ)

—ಬಿ. ಎಚ್. ಎಸ್.

ಪ್ರತಿಭೆ

(೨ನೇ ಪುಟದಿಂದ)

ಹೊರಟವನು ಊರ ಹೊರಗಿನ ಕೆರೆಯೇರಿಯೊಂದರ ಮೇಲೆ ಸಂಜೆಯ ಗಾಳಿಯನ್ನು ಸೇವಿಸುತ್ತ ಹುಚ್ಚು ಮಾತುಗಳಿಂದ ಮೆಗುವನ್ನು ತಣಿಸುತ್ತಿದ್ದನು. [illegible]ವಾಗ ಮಗುವಿನ ಪರಿಚಯ[illegible] ಒಮ್ಮೆಲೇ ಪ್ರತಿಭೆಯ ಮುಖ ಅವನ ಮನದಲ್ಲಿ ಮೂಡಿತು. ಹುಚ್ಚು ಹರಿಯಿತು. ಮನೆಗೆ ಧಾವಿಸಿದ. ಸಮಾಚಾರ ತಿಳಿಯಿತು. ಪೋಲೀಸಿಗೆ ದೂರು ಕೊಟ್ಟ, ಹೆಂಡತಿ ಸಿಕ್ಕಿದಳು. ಆದರೆ ಹೆಂಡತಿಯ ಬುದ್ಧಿ ಕೆಟ್ಟುಹೋಗಿತ್ತು! ಅವಳು ಗಂಡನನ್ನೂ ಮಗುವನ್ನೂ ಗುರುತಿಸಲಾರದವಳಾಗಿದ್ದಳು! ಹಾ ಎಂದು ದೊಪ್ಪನೆ ಕಮಲೇಶ ನೆಲಕ್ಕುರುಳಿದ.

ಕಮಲೇಶನ ಮಿತ್ರನೊಬ್ಬ ಡಾಕ್ಟರನಾಗಿದ್ದ ಅವನನ್ನು ಕೇಳಲಾಗಿ ಅವನು ಮಾನಸಶಾಸ್ತ್ರೀಯವಾದ ಒಂದು ಪ್ರಯೋಗವನ್ನು ಹೇಳಿದ. ಅದರ ಪ್ರಕಾರ ಕಮಲೇಶನು ಕೈ ಬಿಗಿ ಹಿಡಿದು ಪ್ರತಿಭೆಯನ್ನು ಮೊದಲಿನಂತೆ ಸಿಂಗರಿಸಿ ಎದುರು ಕುಳ್ಳಿರಿಸಿಕೊಂಡು ಯಥಾಪ್ರಕಾರ ಧಾರಾಕಾರವಾಗಿ ಲೆಕ್ಚರ್ ಕೊಡತೊಡಗಿದನು. ೨—೩ ತಾಸುಗಳ ನಂತರ ಬಾವಿಯಲ್ಲಿ ಬಿದ್ದೆದ್ದವಳಂತೆ ಕಣ್ಣುಗಲಿಸಿ ನೋಡಿ ಪ್ರತಿಭೆ ಎಚ್ಚರಹೊಂದಿದಳು. ಪತಿಯ ಸಮಕ್ಷಮ ಆನಂದದಿಂದ ತಲೆವಾಗಿದಳು. ಅವನು ಬರೆದ ಒಂದು ಹಾಡನ್ನು ಅವಳು ಮಗುವಿಗೆ ಹೇಳಿಕೊಟ್ಟಿದ್ದಳು. ಅದನ್ನು ಅದೇ ಸಮಯಕ್ಕೆ ಕೈ ತಟ್ಟಿಕೊಂಡು ಆ ಮಗು ತೊದಲು ಮಾತಿಂದ ಹೇಳ ತೊಡಗಿತ್ತು—

"ನನ್ನ ಪತಿಬೆ ಕನ್ನು ತೆರೆದು
ಎಂದು ನನ್ನ ನೋಲ್ಪಲೋ;
ಅಂದು ನನ್ನ ಬಾಳು ಚಿನ್ನ
ಅಲ್ಲಿವರೆಗೆ ಅಲ್ಪನೋ!"

ಜರ್ಮನಿಯಲ್ಲಿ ನರಬಲಿ!

ಬ್ರಿಟಿಶ ಜರ್ಮನಿಯಲ್ಲಿ ಕೆಲ ಧಾರ್ಮಿಕ ತಂಡದವರು ಜಗತ್ತಿನ ವಿನಾಶವನ್ನು ತಡೆಯುವದಕ್ಕಾಗಿ ಇಬ್ಬರು ಬಾಲಕರನ್ನು ಬಲಿ ಕೊಡುವದನ್ನು ಪೋಲೀಸರು ತಡೆದಿದ್ದಾರೆ. ಈ ಬಾಲಕರನ್ನು ಕಂಚಗಳಿಗೆ ಬಿಗಿಯಾಗಿ ಕಟ್ಟಲಾಗಿತ್ತೆಂದೂ ಅವರ ಸಂಹಾರವಾಗುವದರೊಳಗೆ ಪೋಲೀಸರು ಆ ಸ್ಥಳಕ್ಕೆ ಬಂದರೆಂದೂ ೧೪ ಜನರನ್ನು ಬಂಧಿಸಿದ್ದಾರೆಂದೂ ವರದಿಯಾಗಿದೆ.

ನಾರದ ಭವಿಷ್ಯ

ಜ್ಯೋತಿಷಿ—ಕೃಷ್ಣಶಾಸ್ತ್ರಿ ಘಡೆ, ಭವಿಷ್ಯಕಥನ ಅಫೀಸ ಖಡೇಬಝಾರ, ಬೆಳಗಾವಿ.

ಅಗಸ್ಟ ೩೦ ರಿಂದ ಸಪ್ಟಂಬರ ೫ ರ ವರೆಗೆ

ಮೇಷ

ಎಲ್ಲರ ಪ್ರಕೃತಿಯೂ ನೆಟ್ಟಗೆ. ಆದರೆ ಹೆಂಡತಿ ಮಕ್ಕಳು ಪ್ರತ್ಯೇಕ ಮಾತಿನ ಬಗ್ಗೆ ಅಸಂತುಷ್ಟರಾಗಿರುತ್ತಾರೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಸುಗಮವಾಗಿದೆ. ಆಪ್ತರಲ್ಲಿಯ ಒಬ್ಬ ಪೂಜ್ಯ ಹಾಗೂ ಪ್ರಿಯ ಸ್ತ್ರೀಯ ಭೆಟ್ಟಿಯೂ ಸಹವಾಸವೂ ಲಭಿಸುವದು. ಅನೇಕ ಬಾರಿ ವಾಹನ ಸುಖವು ದೊರಕುವ ಯೋಗವಿದೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೇ. ಆದರೂ ಲಾಭ ಬಹಳ. ಬುದ್ಧಿಯಲ್ಲಿ ಪಾಪ ಭಾವವೂ ದ್ವೇಷ ಭಾವವೂ ಬಹಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮೋಸಗಾರಿಕೆಯಾಗಿದೆಯೆಂದು ಪ್ರತಿ ಪಕ್ಷದಿಂದ ಆರೋಪ ಮತ್ತು ತಂಟೆ. ನ್ಯಾಯ ತೀರಿಸುವವರದೂ ಇದೇ ಅಭಿಪ್ರಾಯವಾಗುವದು. ಪ್ರವಾಸಾದಿ ಕಾರ್ಯಗಳು ಕಷ್ಟಕರ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲಿನ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೩೦, ೩, ೪ ಇವು ಒಳ್ಳೆಯದು.

ವೃಷಭ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ನೆಟ್ಟಗೆ. ಹೆಂಡತಿಗೆ ಜಾಡ್ಯ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ನೆಟ್ಟಗೆ. ಸ್ಥಾವರದಲ್ಲಿ ಅನುಕೂಲ ಘಟನೆ. ವಾಹನಗಳಿಂದ ತ್ರಾಸ ಹಾನಿ ಅಥವಾ ಅಪಘಾತ ಆಗುವ ಭಯ. ಮಕ್ಕಳಲ್ಲಿ ಒಬ್ಬರೆದು ವಿಶೇಷ ಖ್ಯಾತಿ. ಮೇಲಿಂದ ಮೇಲೆ ಮನರಂಜನೆಯ ಯೋಗಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲವೂ ಊರ್ಜಿತದಲ್ಲಿವೆ. ಮಿತ್ರ ಸುಖ ಉತ್ತಮ. ಪೂಜ್ಯ ವ್ಯಕ್ತಿಯೊಬ್ಬರಿಗೆ ದೊಡ್ಡ ಕಷ್ಟವುಂಟು ಸ್ವಲ್ಪಾವಧಿ ವಿಯೋಗವೂ ಘಟಿಸುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರು ಪಕ್ಷಕ್ಕೆ ಬಹಳ ಹಾನಿ. ಆದರೆ ಸ್ವಂತಕ್ಕೆ ಯಶಸ್ಸೂ ಲಾಭವೂ ಬಹಳ ಕಡಮೆ. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ಅನುಕೂಲ, ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲಿನ ಎರಡು ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೩೦, ೩೧, ೧, ೨ ಇವು ಒಳ್ಳೆಯವು.

ಮಿಥುನ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮಕ್ಕಳ ವಿಷಯದಲ್ಲಿ ಬಹಳ ತೊಂದರೆ. ಆಪ್ತರು ಮಿತ್ರರಲ್ಲಿ ನಿಮಗೆ ಬಹಳ ಬೇಕಾದವರ ಸಹವಾಸ. ಸ್ಥಾವರದಲ್ಲಿ ಬೆಳವಣಿಗೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಧಂದೇದಾರರಿಗಿಂತ ನೌಕರದಾರರ ಪ್ರತಿಷ್ಠೆಯು ಬೆಳೆಯುತ್ತದೆ. ಮಿತ್ರ ಸುಖ ನೆಟ್ಟಗೆ ಆದರೆ ಅವರ ಪರಿವಾರಕ್ಕೆ ಕ್ಲೇಶ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ. ಪ್ರವಾಸಾದಿ ಕಾರ್ಯಗಳು ಬಹಳ ಉತ್ತಮ. ಆರ್ದ್ರಾದ ಕೊನೆಯ ೨ ಮತ್ತು ಪುನರ್ವಸುವಿನ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೩೦, ೩೧, ೧, ೨ ಇವು ಒಳ್ಳೆಯವು.

ಕರ್ಕ

ನಿಮ್ಮ ಪ್ರಕೃತಿ ಸಾಧಾರಣ ಮತ್ತು ಹೆಂಡತಿಯದು ಮಕ್ಕಳದು ಹೆಚ್ಚಾಗಿ ಕೆಡುವ ಸಂಭವ. ನೆರೆಯ ಹೆಣ್ಣು ಮಕ್ಕಳು ನಿಮ್ಮ ನಿಂದೆಯನ್ನೂ ಚೇಷ್ಟೆಯನ್ನೂ ಬಹಳವಾಗಿ ಮಾಡುತ್ತಾರೆ. ಸಾಲವೇನಾದರೂ ಆಗಿದ್ದರೆ ಸಾಹುಕಾರರು ಬಹಳ ದುಂಬಾಲ ಬೀಳುತ್ತಾರೆ. ಅಪ್ರಿಯ ಜನರು ಮುಯ್ಯ ತೀರಿಸಿಕೊಳ್ಳುವ ಮತ್ತು ಬೇಡವಾದದ್ದನ್ನು ಮಾಡುವ ಸಂಚು ಒಡ್ಡುತ್ತಾರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ, ಆದರೆ ಲಾಭ ಕಡಮೆ. ದಾಯಾದಿಗಳಲ್ಲಿ ಉನ್ನತಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬಣಕ್ಕೂ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸಗಳು ಅನುಕೂಲ. ಪುಷ್ಯದ ಕೊನೆಯ ೨ ಮತ್ತು ಅಶ್ಲೇಷಾದ ಮೊದಲಿನ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೩೧, ೧, ೨, ೫ ಇವು ಒಳ್ಳೆಯವು.

ಸಿಂಹ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಬಹಳ ಉತ್ತಮ. ಆದರೆ ಮಕ್ಕಳು ಸ್ವಹಿತಕ್ಕಾಗಿ ಅನುಸರಿಸಿದ ಮಾರ್ಗವು ಮಾತ್ರ ಮನಸ್ಸಿಗೆ ವಿರುದ್ಧವಾದದ್ದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲವೂ ಬಹಳ ನೆಟ್ಟಗೆ. ಮಿತ್ರ ಸುಖ ಚೆನ್ನಾಗಿದೆ. ದಾಯಾದಿಗಳ ಸ್ತ್ರೀ ಪುತ್ರಾದಿ ಪರಿವಾರದಲ್ಲಿ ಬಹಳ ಕಷ್ಟವುಂಟಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶವುಂಟು. ಪ್ರವಾಸಾದಿ ಕಾರ್ಯಗಳು ಹಿತಕರವಾಗಿವೆ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲಿನ ೨ ಚರಣಗಳಿಗೆ ತ್ರಾಸದಿಂದಲೇ ಯಶಪ್ರಾಪ್ತಿ. ತಾ. ೩೦,೩,೪,೫, ಇವು ಒಳ್ಳೆಯವು.

ಕನ್ಯಾ

ಪ್ರಕೃತಿಯೂ ಉತ್ತಮ, ಸ್ತ್ರೀ ಸುಖವೂ ಉತ್ತಮ. ಆದರೆ ಮಕ್ಕಳಿಂದ ಲಜ್ಜಾಸ್ಪದವಾದ ಕೆಲವು ಸಂಗತಿಗಳಾಗುವವಲ್ಲದೆ ಅವರು ನಿಮಗೆ ಗದ್ದರಿಸಬರುವರು. ಸ್ವಂತದ ಕಣ್ಣುಗಳಿಗೆ ತೊಂದರೆಯಾಗುವ ಸಂಭವವಿದೆ. ಉದ್ಯೋಗ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲವೂ ಬಹಳ ಉತ್ತಮವಿದ್ದರೂ ವೆಚ್ಚವು ಇದಕ್ಕೂ ಮಿಗಿಲು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಕೆಲವು ಚಮತ್ಕಾರಿಕ ಘಟನೆಗಳುಂಟಾಗುವ ಸಂಭವವಿದೆ. ಪ್ರವಾಸಾದಿ ಕಾರ್ಯಗಳು ಹಿತಕರವಾಗಿವೆ. ಉತ್ತರಾದ ಕೊನೆಯ ೨ ಹಸ್ತಾದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸಿಪ್ಪು. ತಾ. ೩೦, ೩೧, ೧, ೫ ಇವು ಒಳ್ಳೆಯವು.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖವು ಉತ್ತಮ. ಆದರೆ ಹೆರರ ಮನಸ್ಸೋಯುವಂತೆ ಮಾತಾಡುವ ಮತ್ತು ನಿಮ್ಮ ಸಹ ಕುಟುಂಬದ ಪ್ರತಿಯೊಬ್ಬರೂ ಗರ್ವದಿಂದ ನಡೆದುಕೊಳ್ಳುವ ಪ್ರವೃತ್ತಿ. ಉದ್ಯೋಗದಲ್ಲಿ ಪ್ರಗತಿಯು ಸಾಧಾರಣವಾದರೂ ಪ್ರತಿಷ್ಠೆಯೂ ಲಾಭವೂ ಸಂಪೂರ್ಣವಿರುವವು. ಅನೇಕ ವಸ್ತುಗಳನ್ನು ಸಂಗ್ರಹಿಸುವದರಲ್ಲಿ ಮನಸ್ಸು ತೊಡಗಿರುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಗೆಲವು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೧, ೨, ೩, ೪ ಇವು ಒಳ್ಳೆಯವು.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯು ಸಾಧಾರಣವಾದರೂ ಮಕ್ಕಳದು ಉತ್ತಮವಾಗಿದೆ. ಪ್ರಿಯಜನರ ಸಹವಾಸಯೋಗವಿದೆ. ಪರಸ್ತ್ರೀಯ ಪ್ರೇಮಯಾಚನೆಯ ಸಂಭವವಿದ್ದ ಕಾರಣ ಜಾಗರೂಕರಾಗಿರಬೇಕು. ಸ್ಥಾವರದಲ್ಲಿ ಬೆಳವಣಿಗೆಯುಂಟು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಸಾಧಾರಣವಿದ್ದರೂ ಲಾಭವು ಪರಿಪೂರ್ಣವಿದೆ. ನೌಕರಿಯಿದ್ದವರಿಗೆ ಅಧಿಕಾರ ವರ್ಧನದ ಸಂಭವವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬಣದಲ್ಲಿಯೂ ಒಳ್ಳೆ ತುರುಸು ಮತ್ತು ಯಶಾಪಯಶಗಳು ಅನಿಶ್ಚಿತ. ಮಿತ್ರ ಸುಖ ಉತ್ತಮ. ಅನಿರೀಕ್ಷಿತ ಲಾಭ ಸಂಭವ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧಾದ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶಪ್ರಾಪ್ತಿ. ತಾ. ೨, ೩, ೪, ೫ ಇವು ಒಳ್ಳೆಯವು.

—೧೬ನೇ ಪುಟಕ್ಕೆ

ಪುಸ್ತಕ ಪರಿಚಯ

(ಪ್ರಸ್ತುತ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ಮನೋವಿಶ್ಲೇಷಣಾ ಶಾಸ್ತ್ರ

ಲೇಖಕರು, ಶ್ರೀ ಕುಲಕರ್ಣಿ ನಾರಾಯಣ ರಾಯರು. ಪ್ರಕಾಶಕರು ಸ್ವಾಮಿ ಶ್ರೀ ಶಿವಾನಂದ ತೀರ್ಥ ಟ್ರಸ್ಟ, ಓಂಕಾರಮಠ, ಪಾಶ್ವತ, ಈ ಸಂಸ್ಥೆಗಾಗಿ ಶ್ರೀ ಧೀ. ಜ. ಕಾಳೆ, ಮುದ್ರಿಕಾಲ. ಧಾರವಾಡ. ಪುಟಗಳು ೨೫೩, ಬೆಲೆ ೩ ರೂಪಾಯಿ.

ಮನಸ್ತತ್ವದ ಪರಿಚಯವು ತಿಳುವಳಿಕೆಯು ಜೀವನದ ಎಲ್ಲ ಚಟುವಟಿಕೆಗಳಿಗೂ ಅವಶ್ಯವಾಗಿ ಬೇಕು. ಮಾನವನ ಮನಸ್ಸನ್ನು ವಿಶ್ಲೇಷಿಸಿ ಅದನ್ನು ಸುಸಂಬದ್ಧವಾದ ಶಾಸ್ತ್ರವನ್ನಾಗಿ ಬರೆಯಿಸಲು ಶೋಧ್ಯಾಗಿ ಮುದಿದವರೆಂದರೆ ಪಾಶ್ಚಾತ್ಯರೇ. ಈ ವಿಷಯವನ್ನು ಕುರಿತ ಸಾಹಿತ್ಯವು ಆಂಗ್ಲಭಾಷೆಯಲ್ಲಿ ವಿಪುಲವಾಗಿದ್ದರೂ ಕನ್ನಡಕ್ಕೆ ಅದನ್ನು ಎರಕ ಹಾಕಲು ಸಾಕಷ್ಟು ಜನರು ಮುಂದೆ ಬಂದಿಲ್ಲ. ಈ ಕೆಲಸಕ್ಕೆ ಸಾಹಿತಿಕ್ಕೆಗಳು ಮುದಿಪರೂ ಕಡಮೆಯೇ. ಪ್ರಸ್ತುತ ಲೇಖಕರು ಈ ಪುಸ್ತಕವನ್ನು ಬರೆದು ಕನ್ನಡ ಸಾಹಿತ್ಯದ ಕೊರತೆಯನ್ನು ಕೈಲಾದ ಮಟ್ಟಿಗೆ ಹೋಗಲಾಡಿಸಿದ್ದಾರೆ. ಇದಕ್ಕಾಗಿ ಶ್ರೀಯುತರು ಅಭಿನಂದನಾರ್ಹರು. ೧೫ ಪ್ರಕರಣಗಳಲ್ಲಿ ವಿವಿಧ ದೃಷ್ಟಿಕೋನದಿಂದ ವಿಷಯವನ್ನು ಹಿಂಜಿ ಹೇಳಲಾಗಿದೆ. ಮುಂದಿನದು ನೋಡಲು ಕಥಾತ್ಮಕದಂತೆ ಮನೋರಂಜಕವಾಗಿದೆ. ಶಿಕ್ಷಕರು, ವೈದ್ಯರು, ವ್ಯಾಪಾರಿಗಳು, ವಕೀಲರು, ರಾಜಕಾರಣಿಗಳು ಯುವಕ ಯುವತಿಯರು ಎಲ್ಲರೂ ಮನಸ್ಸಿನ ಗಹನ ರಹಸ್ಯವನ್ನು ಅರಿತವರಾದರೆ ಅವರೆಲ್ಲ ತಾವು ಜೀವನದಲ್ಲಿ ಸಮಾಜಕ್ಕಾಗಿ ನಿರ್ವಹಿಸಬೇಕಾದ ಕಾರ್ಯವನ್ನು ಅತ್ಯಂತ ಸುಲಭವಾಗಿಯೂ ಸಮಾಧಾನಕರವಾಗಿಯೂ ಸಮರ್ಪಕವಾಗಿಯೂ ಮಾಡಿ ಮುಗಿಸಬಹುದು. ... ಮಾನವ ಮೂಲಭೂತ ... ಪ್ರವೃತ್ತಿಗಳ, ... ಗಳ ತಿಳುವಳಿಕೆಯಿಂದ ... ಜೀವನವು ಸುಖಮಯವಾಗುವದಲ್ಲದೆ ಸಂಸಾರವು ನಡೆಸುವ, ಶೀಲ ಸ್ವಭಾವ ಸರಿಯಾಗಿ ರೂಪಗೊಂಡು ಪಾಲನ ಪೋಷಣವೂ ಸಮರ್ಪಕವಾಗುವದು. ಬಾಲಕನ ಅಂತರಾಳವರಿತ ಶಿಕ್ಷಕನು ಮಕ್ಕಳಿಗೆ ಹಿತವಾಗುವಂತೆ ಪಾಠ ಹೇಳಿ ಜ್ಞಾನ ದಾನ ಮಾಡಬಲ್ಲನು. ರೋಗಿಯ ಪ್ರವೃತ್ತಿಯೊಡನೆ ಮನಃಪ್ರವೃತ್ತಿಗಳನ್ನು ... ಮಾಡಿ ನೋಡಬಲ್ಲ ವೈದ್ಯನು ಔಷಧವಿಲ್ಲದೆ ಕೇವಲ ಅನುಕೂಲ ವಚನಗಳಿಂದಲೇ ಅಸಾಧ್ಯ ರೋಗಗಳನ್ನೂ ಗುಣಪಡಿಸಬಲ್ಲನು. ಮನಸ್ಸಿನ ಶಕ್ತಿ ಇಂದಿನ ಅಣು ಶಕ್ತಿಗಿಂತಲೂ ಮಿಗಿಲಾದುದು. ಮನಸ್ತತ್ವದ ಅಭ್ಯಾಸವು ನಾಡಿನ ನಾಗರಿಕರೆಲ್ಲ ಕಲಿಯಲೇಬೇಕಾದ ಶಿಕ್ಷಣದ ಒಂದು ಒತ್ತಾಯದ ವಿಷಯವಾದಂದು ಸಮಾಜ ಜೀವನವು ಖಂಡಿತ ಆದರ್ಶ ಜೀವನವಾಗುವದು. ಪಾರಿಭಾಷಿಕ ಶಬ್ದಗಳ ಕೊರತೆ ಕನ್ನಡಕ್ಕಿದ್ದರೂ ... ಇಲ್ಲಿ ... ಉಂಟಾಗಿಲ್ಲವೆಂಬುದು ಗಮನಾರ್ಹ ... ವಾಗಿದೆ.

ಹುಚ್ಚು ಮನಸ್ಸಿನ ಹತ್ತು ಮುಖಗಳು

ಬರೆದವರು: ಶಿವರಾಮ ಕಾರಂತ ಬೆಲೆ ರೂಪಾಯಿ ಪುಟ ೩೦೭. ಪ್ರಕಾಶಕರು: ಹರ್ಷ ಮುದ್ರಣ, ಪ್ರಕಟನಾಲಯ ಪುತ್ತೂರು ದ.ಕ.

ಇದು ಕಾರಂತರರೇ ಒಂದು ಬಗ್ಗೆ ಜೀವನ ಚರಿತ್ರೆ. ಇದನ್ನು ಅವರೇ ಬರೆದಿದ್ದಾರೆ. ಇವರು ಹುಟ್ಟಿದ್ದನ್ನು ನೋಡಬೇಕೊಂದು ಇಲ್ಲಿಯವರೆಗೆ (... ರವರೆಗೆ) ಆದುದೆಲ್ಲ ಇದರಲ್ಲಿ ಚಿತ್ರಿಸಿದ್ದಾರೆ. ಇವರಿಗೆ ಈಗ ೪೬ ವಯಸ್ಸು. ಅವರು ಮೊದಲು ಗಾಂಧಿ ಭಕ್ತರಾಗಿದ್ದರು. ಈಗ ಪುತ್ತೂರಿನಲ್ಲಿಯೇ ಇದ್ದಾರೆ. ಯಾವ ಕಾರ್ಯ ಮಾಡಿದರೂ (ಮುದ್ರಣಾಲಯ ಕಾರ್ಖಾನೆ, ಪತ್ರಿಕೆ, ಚಲಚಿತ್ರ,) ... ಈಗ ಪುತ್ತೂರಿನಲ್ಲಿಯೇ ಒಂದು ಮುದ್ರಣಾಲಯವನ್ನು ಇಟ್ಟಿದ್ದಾರೆ. ಇವರು ಎಲ್ಲಾ ಕೆಲಸದಲ್ಲಿಯೂ ಮುಂದಿನವರಾಗಿರುವರು. ಸಂಗೀತ, ಸಾಹಿತ್ಯ, ಮರಗೆಲಸ, ಶಿಲ್ಪ, ನೃತ್ಯ, ನಾಟಕ, ಚಲನಚಿತ್ರ ಮೊದಲಾದ ಎಲ್ಲದರಲ್ಲಿಯೂ ಮೇಲೆನಿಸಿರುವರು. ಮತ್ತು ಅವರು ಪ್ರಾಣಿಸಂಗ್ರಹಾಲಯವನ್ನೂ ಇಟ್ಟಿದ್ದಾರೆ. ನಾವು ಒಂದು ಪ್ರಾಣಿಯನ್ನು ಪ್ರೀತಿಸಿದರೆ ಅವು ನಮ್ಮನ್ನು ಪ್ರೀತಿ ಮಾಡಬಲ್ಲವು ಎಂಬುದನ್ನು ಅವರು ಮನಗಂಡಿದ್ದಾರೆ. ಇದೆಲ್ಲವನ್ನು ಈ ಪುಸ್ತಕದಲ್ಲಿ ಅವರು ಬರೆದಿದ್ದಾರೆ. ಅವರ ಸಾಹಿತ್ಯ ಸೇವೆ ಇನ್ನಷ್ಟು ಹೆಚ್ಚಲಿ ಎಂದು ಹಾರೈಸುತ್ತೇವೆ.

ಕೀಚಕ

ದಿವಂಗತ ಟಿ. ಪಿ. ಕೈಲಾಸಂ ಅವರ ಕೀಚಕದ ಕನ್ನಡರೂಪ. ಬರೆದವರು: ಶ್ರೀ ಜಿ. ಪಿ. ರಾಜರತ್ನಂ. ಪ್ರಕಾಶಕರು ಹಿಂದ್ ಕಿತಾಬ್ಸ ಲಿಮಿಟೆಡ್ ಬೊಂಬಾಯಿ, ಬೆಂಗಳೂರು. ಬೆಲೆ ಒಂದೂವರೆ ರೂಪಾಯಿ. ಪುಟ ೧೧೯.

ಈ ಕಥೆಯನ್ನು ಬರೆದ ಮೂಲವು ವಿಚಿತ್ರವಾಗಿದೆ. ಅದೇನೆಂದರೆ ಬಾಯಲ್ಲಿ ಹೇಳಿದವರು ಕೈಲಾಸಂ, ಅದನ್ನು ತಮ್ಮ ಜ್ಞಾಪಕದ ಆಧಾರದ ಮೇಲೆ ಇಂಗ್ಲೀಷಿನಲ್ಲಿ ಬರೆದವರು ಬಿ. ಎಸ್. ರಾಮರಾಯರು, ಅದನ್ನು ಕನ್ನಡಿಸಿದವರು ಜಿ. ಪಿ. ರಾಜರತ್ನಂ. ಅವರೂ ಈ ಕೀಚಕ ಕಥೆ ರಸವತ್ತಾಗಿದೆ. ಅವರ ಇದರಲ್ಲಿಯ ಪಾತ್ರ ಮಾತಾಡುತ್ತಾಗ ಅದು ಒಂದು ಜಾತಿಯ ಒಗಟೇ ಎಂದೆನಿಸುವುದು. ಇವನು ನವೀನ ರೀತಿಯ ಕೀಚಕ. ಇಲ್ಲಿಯ ಕೀಚಕನು ಭಾರತದಲ್ಲಿಯ ಕೀಚಕನಷ್ಟು ದುರ್ಗುಣನಲ್ಲ. ಭಾರತದಲ್ಲಿಯ ಕೀಚಕನು ದ್ರೌಪದಿಯನ್ನು ಬಯಸಿ ಭೀಮನಿಂದ ಸತ್ತನು. ಇದರಲ್ಲಿ ಹಾಗಲ್ಲ. ದ್ರೌಪದಿಯಮೇಲಿನ ದಯೆಯಿಂದ ... ಸತ್ತನು. ಇದೊಂದು ಹೊಸ ಹಾದಿ. ಅದರೂ ಇದು ರಸವತ್ತಾಗಿ, ಸರಳವಾಗಿ ಇದೆಯೆನ್ನಬಹುದು.

ಭಾರತವೀರ ಮತ್ತು ಶಿವನ ಸೋಲು

ಬರೆದವರು ಜಿ. ಪಾಟೀಲ ಪ್ರಕಾಶಕರು ಹಿಂದ್ ಕಿತಾಬ್ಸ ಲಿಮಿಟೆಡ್ ಬೊಂಬಾಯಿ, ಬೆಂಗಳೂರು. ಪುಟ ೬೬ ಬೆಲೆ ೧ ರೂಪಾಯಿ.

ಇದು ಒಂದು ನಾಟಕ ಸಂಗ್ರಹ. ಇದರಲ್ಲಿ ಎರಡು ನಾಟಕಗಳಿವೆ. ಮೊದಲನೆಯದು ಭಾರತವೀರ ಕರ್ಣನದು. ಇದು ಚೆನ್ನಾಗಿದೆ. ಕುಂತಿಯ ಪ್ರೇಮ, ಕರ್ಣನ ಧೈರ್ಯ, ಸ್ವಾಮಿ ಭಕ್ತಿ ಎಲ್ಲವೂ ಅಚ್ಚಳಿಯದೆ ಕಂಗೊಳಿಸುತ್ತಿವೆ. ಎರಡನೆಯದಾದ ಶಿವನ ಸೋಲೂ ಹಾಗೆಯೇ. ಇವೆರಡರಲ್ಲೂ ಹಳೆಯದನ್ನು ಹೊಸ ಬಗೆಯಾಗಿ ಹೇಳುವ ಸಾಹಸವಿದೆ. ಇವರಿಂದ ಇನ್ನೂ ಇಂತಹ ಸೊಗಸಾದ ಕೃತಿಗಳು ಬೆಳಕಿಗೆ ಬರುವವೆಂದು ತಿಳಿಯುತ್ತೇವೆ.

ಒಕ್ಕಲಿಗ (ಮಾಸಪತ್ರಿಕೆ)

ಇದು ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯು ಪ್ರಕಟಿಸುತ್ತಿದೆ. ಇದು ಮೊದಲನೆಯ ವರ್ಷದ ಮೊದಲನೆಯ ಸಂಚಿಕೆ. ವಾರ್ಷಿಕ ಚಂದಾ ೩ ರೂಪಾಯಿ. ಬಿಡಿ ಸಂಚಿಕೆಯ ಬೆಲೆಯು ೪ ಆಣೆ ಚಂದಾದಾರರಾಗ ಬಯಸುವವರು ಡೈರೆಕ್ಟರ ಆಫ್ ಪಬ್ಲಿಸಿಟಿ, ಮುಂಬಯಿ ಸರಕಾರ, ಸೆಕ್ರೆಟರಿಯಟ, ಮುಂಬಯಿ ೧. ಈ ವಿಳಾಸಕ್ಕೆ ಬರೆಯಬೇಕು.

ಒಕ್ಕಲಿಗರಿಗೂ ಒಕ್ಕಲತನಕ್ಕೂ ಬೇಕಾದ ಅನೇಕ ಮಾತುಗಳ ಬಗ್ಗೆ ಇಲ್ಲಿ ತಿಳಿಸಿ ಹೇಳಲಾಗಿದೆ. ಬಳಕೆಯಾದ ಭಾಷೆಯು ಬಹಳ ಸುಲಭವೂ ಆಗಿದೆ. ಒಕ್ಕಲತನದ ವಿಷಯಕ್ಕೆ ಸಿಕ್ಕಾ ಪರಿಣತರ ಅಧಿಕೃತ ಸಲಹೆ ಸೂಚನೆಗಳು ಇದರಲ್ಲಿ ಸಿಕ್ಕುವದರಿಂದ ಹಳ್ಳಿಯ ರೈತರಿಗೆಲ್ಲ ಇದು ಬಹು ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ. ಇದರಲ್ಲಿ ಅನೇಕ ಚಿತ್ರಗಳಿದ್ದು ಆಕರ್ಷಕ ರೂಪದಲ್ಲಿ ಪ್ರಕಟವಾಗಿದೆ. ಈ ಹೊಸ ಪತ್ರಿಕೆಗೆ ಸ್ವಾಗತ ಕೋರುತ್ತೇವೆ.

ಆರೋಗ್ಯ

ಮೈಸೂರು ಸರಕಾರದ ಆರೋಗ್ಯ ಶಿಕ್ಷಣ ಶಾಖೆಯಿಂದ ಪ್ರಕಟವಾಗುವ ಮಾಸ ಪತ್ರಿಕೆಯಿದು. ಸರಕಾರದ ವೈದ್ಯಕೀಯ ಶಾಖೆಯ ಮತ್ತು ಸಾರ್ವಜನಿಕ ಆರೋಗ್ಯ ಶಾಖೆಯ ನುರಿತ ಅಧಿಕಾರಿಗಳೇ ಈ ಪತ್ರಿಕೆಯಲ್ಲಿ ಆರೋಗ್ಯದ ವಿವಿಧ ವಿಷಯಗಳನ್ನು ಕುರಿತು ಬರೆಯುತ್ತಾರೆಂದ ಮೇಲೆ ಇದರ ಉಪಯುಕ್ತತೆಯ ಬಗ್ಗೆ ಹೆಚ್ಚು ಹೇಳುವ ಕಾರಣವಿಲ್ಲ. ಇದಕ್ಕೆ ಚಂದಾ ಇರುವದೇ ಇಲ್ಲವೇ ಎಂಬುದಾಗಲಿ ಬಿಡಿ ಸಂಚಿಕೆಯ ಬೆಲೆಯಾಗಲಿ ಎಲ್ಲಿಯೂ ಉಲ್ಲೇಖಿಸಲ್ಪಟ್ಟಿಲ್ಲ. ವಿಮರ್ಶೆಗೆ ಬಂದ ಪತ್ರಿಕೆಯು ೧೧ ನೆಯ ಸಂಪುಟದ ೫ ನೆಯ ಸಂಚಿಕೆಯು. ಇದರಲ್ಲಿ ಇಲಿಯ ಹಾವಳಿಯ ವಿಷಯ, ಹಾಯ್ದನ, ಯಾವುದು ಬೇಕು, ತುಂಡು ಸುದ್ದಿ ಎಂಬ ಶೀರ್ಷಿಕೆಯ ಕೆಳಗೆ ಉಪಯುಕ್ತ ವಿಷಯ ಇವೆ. ಸಕ್ಕರೆಗಿಂತ ಬೆಲ್ಲ ಹಿಂಡಿ ಮೊದಲಾದವುಗಳಿಗೆ ಬೆಲ್ಲನೇ ಮಿಗಿಲಾದದ್ದು ಎಂದು ಹೇಳಿದ್ದು ... ಇದ್ದರೂ ಈ ದಿನಗಳಲ್ಲಿ ಅವಶ್ಯ ... ಸಂಚಿಕೆಯಲ್ಲಿ ... ಚಿತ್ರಗಳಿದ್ದು ಒಟ್ಟು ...

ಸಂಜೀವನ ಕನ್ನಡ (ಮಾಸ ಪತ್ರಿಕೆ)

ವಾರ್ಷಿಕ ಚಂದಾ ೩ ರೂಪಾಯಿ. ಬಿಡಿ ಪತ್ರಿಕೆ ೪ ಆಣೆ. ಪ್ರತಿ ಬೇಕಾದವರು ಸಂಚಾಲಕರು, ಸಂಜೀವನ, ೭೫, ಅಪೋಲೋ ರಸ್ತೆ, ಕೋಟೆ ಮುಂಬಯಿ, ೧ ಈ ವಿಳಾಸಕ್ಕೆ ಬರೆಯಬೇಕು.

ಇದು ಮುಂಬಯಿ ಸರಕಾರದ ಪಾನ ಪ್ರತಿಬಂಧ ಸಮಿತಿಯ ಮುಖಪತ್ರ, ಸ್ವಾತಂತ್ರ್ಯೋತ್ಸವದ ಶುಭಮುಹೂರ್ತದಲ್ಲಿ ಕನ್ನಡ ಭಾಷೆಯಲ್ಲಿ ಹೊಸದಾಗಿ ಹೊರಟಿದೆ. ತ್ರಿವರ್ಣರಂಜಿತ ಆವರಣ ಪತ್ರದಿಂದಲೂ ಪತ್ರಿಕೆಯೊಳಗಿನ ಅನೇಕ ಚಿತ್ರಗಳಿಂದಲೂ ಕಥೆ, ಕವನ, ವಿಚಾರ, ಪ್ರಬಂಧ ಮೊದಲಾದವುಗಳಿಂದಲೂ ಪತ್ರಿಕೆಯು ತುಂಬಾ ಚಿತ್ತಾಕರ್ಷಕವಾಗಿದೆ. ಇದರಲ್ಲಿ ಬರೆದ ಲೇಖಕರೆಲ್ಲ ಕನ್ನಡ ಸಾಹಿತ್ಯ ಲೋಕದಲ್ಲಿ ಖ್ಯಾತಿವೆತ್ತವರೇ ಇದ್ದಾರೆ.

ಸಾದರಸ್ವೀಕಾರ

ಕನ್ನಡ ಪ್ರಾಥಮಿಕ ಶಿಕ್ಷಣ (ಮಾಸಪತ್ರಿಕೆ)

ಪ್ರಧಾನ ಸಂಪಾದಕರು ರಂಗೋ ಕೃಷ್ಣ ಲಕ್ಕುಂಡಿ, ಮುಖ್ಯಾಧ್ಯಾಪಕರು ಗ. ಟ್ರೇನಿಂಗ ಕಾಲೇಜ ಧಾರವಾಡ, ಬಿಡಿ ಸಂಚಿಕೆ ೬ ಆ. ವಾರ್ಷಿಕ ಚಂದಾ ೪ ರೂ.

ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕತೆಗಳು

ಸಂಗ್ರಾಹಕರು ಮತ್ತು ಪ್ರಕಾಶಕರು ಎಂ ಹನುಮಂತರಾವ. ಸಂಪಾದಕರು, ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ. ವಾರ್ಷಿಕ ಚಂದಾ ೫ ರೂ. ಈ ಪುಸ್ತಕದಲ್ಲಿ ಪುಟಗಳು ೮೬ ಬೆಲೆ ೧ ರೂ.

ತೋರಣ (ಕಥಾಸಂಗ್ರಹ)

ಸಂಪಾದಕರು ಟಿ. ಮಹಾಬಲೇಶ್ವರ ಭಟ್ಟ, ಸಾಗರ. ಪ್ರಕಾಶಕರು ಜಲಂಧರ ಪ್ರಕಟನಾಲಯ, ಚಾಮರಾಜ ಪೇಟೆ, ಸಾಗರ. ಪುಟಗಳು ೬೬. ಬೆಲೆ ೨ ರೂ.

(೧೩ ನೇ ಪುಟದಿಂದ)

ಧನು

ಪ್ರಕೃತಿಯು ಅಷ್ಟಕ್ಕಷ್ಟೇ. ಅವರ ಸ್ತ್ರೀ ಸುಖವು ಉತ್ತಮ. ಮಕ್ಕಳ ವರ್ತನೆಯು ಅಪ್ರಿಯವಾಗಿದ್ದರೂ ಅವರಲ್ಲಿ ಕೆಲವರಿಗೆ ಒಳ್ಳೇ ಉತ್ಕರ್ಷವಿದೆ. ಉದ್ಯೋಗದಲ್ಲಿ ಉತ್ತಮ ಪ್ರಗತಿ, ಸಂಪೂರ್ಣ ಲಾಭ ಮತ್ತು ಹೇವ ಹುಟ್ಟಿಸುವಷ್ಟು ಪ್ರತಿಷ್ಠೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ... ಸಂಭವ. ಮಿತ್ರ ಸುಖವು ಉತ್ತಮ. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ಹೆಚ್ಚು ಅನುಕೂಲ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಮೊದಲಿನ ೩ ಚರಣಗಳಿಗೆ ಕಷ್ಟ ಮೂಲಕ ಯಶ ಪ್ರಾಪ್ತಿ. ತಾ. ೩೦, ೩, ೪, ೫, ಇವು ಒಳ್ಳೆಯವು.

ಮಕರ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯ ಬಗ್ಗೆ ಇಲ್ಲದ ದೂರು. ಮಕ್ಕಳಲ್ಲಿ ಉನ್ನತಿ ತೋರಬರುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವಾದರೂ ನೆಟ್ಟಗಿದೆ. ಉದ್ಯೋಗದಲ್ಲಿ ದೊಡ್ಡ ಪ್ರಗತಿ ಮತ್ತು ಮನಸ್ಸಿಗೆ ಒಪ್ಪಿಗೆಯಾಗುವಷ್ಟು ಪ್ರತಿಷ್ಠೆ ಲಾಭಗಳೂ ದೊರೆಯುವವು. ನೌಕರಿ ಮಾಡುವವರಿಗೆ ಇನ್ನೂ ನೆಟ್ಟಗೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಅನುಕೂಲತೆ. ಭೆಟ್ಟಿಗಿಂತ ಪ್ರವಾಸವೂ ಪತ್ರವ್ಯವಹಾರವೂ ಹೆಚ್ಚು ನೆಟ್ಟಗೆ. ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣಾದ ಮೊದಲಿನ ೩ ಚರಣಗಳಿಗೆ ಕಷ್ಟ ಮೂಲಕ ಯಶಪ್ರಾಪ್ತಿ. ತಾ. ೩೦, ೧, ೫ ಇವು ಒಳ್ಳೆಯವು.

ಕುಂಭ

ಪ್ರಕೃತಿಗೆ ಕಿರುಕುಳ ತ್ರಾಸ. ಆದರೆ ಸ್ತ್ರೀ ಸುಖವೂ ಪ್ರಾಪಂಚಿಕ ಸುಖವೂ ಉತ್ತಮ. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಭರದಿಂದ ಪ್ರಗತಿಯಾಗುವದು, ಪ್ರತಿಷ್ಠೆಯೂ ಹೆಚ್ಚುವದು. ಆದರೆ ಲಾಭ ಮಾತ್ರ ಸಾಧಾರಣ. ಅನಿರೀಕ್ಷಿತ ಲಾಭವಾಗುವ ಸಂಭವವುಂಟು. ಕನಸಿನಲ್ಲಿ ಕೆಲ ಗೂಢ ವಿಷಯಗಳ ಸ್ಪಷ್ಟೀಕರಣ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರು ಪಕ್ಷದ ಬಲ ಹೆಚ್ಚು. ಆದರೆ ... ಕಡೆಗೇ ಹೆಚ್ಚಾಗಿರುವದು. ಪತ್ರವ್ಯವಹಾರಕ್ಕಿಂತ ಪ್ರವಾಸವೂ ಭೆಟ್ಟಿಯೂ ನೆಟ್ಟಗೆ. ಶತತಾರಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ಮೊದಲಿನ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೩೦, ೩, ೪ ಇವು ಒಳ್ಳೆಯವು.

ಮೀನ

ಪ್ರಕೃತಿ ಉತ್ತಮ. ಸ್ತ್ರೀ ಮತ್ತು ಸಂತತಿ ಸುಖವೂ ನೆಟ್ಟಗಿದೆ. ಆದರೆ ಕೆಲವು ಅಗತ್ಯಕ ಅಡಚಣಿಗಳ ಮೂಲಕ ಪ್ರಾಪಂಚಿಕ ತ್ರಾಸ ಬಹಳವೆನಿಸುವದು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭ ಇವು ನಿರೀಕ್ಷೆಯಂತೆ ಆದರೂ ಪ್ರತಿಯೊಂದು ಕೆಲಸಕ್ಕೂ ಸಾಕು ಸಾಕು ಎನ್ನುವಷ್ಟು ಶ್ರಮಪಡಬೇಕಾಗುವ ಪ್ರಸಂಗವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶವಿದೆ. ಮಿತ್ರತ್ವದಲ್ಲಿ ವಿರೋಧ ತೋರುವದು. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲಿನ ೩ ಚರಣಗಳಿಗೆ ತೊಂದರೆಯಿಂದಲೇ ಯಶಪ್ರಾಪ್ತಿ. ತಾ. ೩೦, ೧, ೫ ಇವು ಒಳ್ಳೆಯವು.

ಸ್ವತಂತ್ರ ಕರ್ನಾಟಕ (ವಿಶೇಷ ಸಂಚಿಕೆ)

ಸಂಪಾದಕರು, ಅಸ್ಲಾನ್ ವಿದ್ವಾನ್, ಬಿ. ಶಿವಮೂರ್ತಿ ಶಾಸ್ತ್ರಿ ೧೬೪, ಆರ್. ಟಿ. ಸ್ಟ್ರೀಟ, ಬೆಂಗಳೂರ ಸಿಟಿ. ಬೆಲೆ ೬ ಆ. ಪುಟಗಳು ೮೦.

ಉದ್ಧಾರ (ನಾಟಕ)

ಬರೆದವರು, ಬಿ. ಭುಜಂಗರಾವ, ಬಿ. ಎ. ವಿದ್ವಾನ್ ಪ್ರಕಾಶಕರು, ಹಿಂದ ಕಿತಾಬ್ಸ ಲಿಮಿಟೆಡ್ ಚಾಮರಾಜ ಪೇಟೆ ಬೆಂಗಳೂರ ಸಿಟಿ. ಪುಟಗಳು ೧೧೪ ಬೆಲೆ ೧-೧೨-೦

ಮಗಳಲ್ಲ ಹೆಂಡತಿ ಮತ್ತು ಇತರ ಕತೆಗಳು

ಬರೆದವರು, ಪಣಂಬೂರು ಯೋಗೀಶರಾಯರು, ಪ್ರಕಾಶಕರು, ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು ೩೪ ಬೆಲೆ ೧೩ ಆಣೆ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪೋಹರಿಯವರಿಂದ ಮುದ್ರಿಸಿ ಪ್ರಕಟವಾಯಿತು.